ವಿಷಯಾನುಕ್ರಮಣಿಕೆ

# ದೃಗ್ದೃಶ್ಯವಿವೇಕ

ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ.
೧,೯೯೮

# ಅಧ್ಯಾತ್ಮಪ್ರಕಾಶಕಾರ್ಯಾಲಯ
## (ಪಬ್ಲಿಕ್ ಛಾರಿಟಬಲ್ ಟ್ರಸ್ಟ್)
## ಹೊಳೆನರಸೀಪುರ - 573 211

ಈ ಸಂಸ್ಥೆಯು

೧. ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರಿಂದ ಸ್ಥಾಪಿಸಲ್ಪಟ್ಟ ಪಬ್ಲಿಕ್ ಛಾರಿಟಬಲ್ ಟ್ರಸ್ಟ್ ಆಗಿ ಕಾರ್ಯಕಾರಿಸಮಿತಿಯ ಆಡಳಿತ ವ್ಯವಸ್ಥೆಯಲ್ಲಿದೆ.

೨. ಕನ್ನಡ, ಸಂಸ್ಕೃತ ಮತ್ತು ಇಂಗ್ಲಿಷ್‌ನಲ್ಲಿ. (ಆಧ್ಯಾತ್ಮಿಕ - ಧಾರ್ಮಿಕ) ಗ್ರಂಥಗಳನ್ನು ಇನ್ನೂರಕ್ಕೂ ಮೀರಿ ಪ್ರಕಟಿಸಿದೆ.

೩. "ಅಧ್ಯಾತ್ಮಪ್ರಕಾಶ"ವೆಂಬ ಮಾಸಪತ್ರಿಕೆಯನ್ನು ಪ್ರಕಟಿಸುತ್ತಿದೆ.

೪. ಗ್ರಂಥಭಂಡಾರ, ವಾಚನಾಲಯ ಮತ್ತು ಅತಿಥಿಗೃಹ ಕಟ್ಟಡಗಳನ್ನು ಹೊಂದಿದೆ.

೫. ಬೆಂಗಳೂರು, ಮೈಸೂರು, ಮತ್ತೂರು ಮತ್ತು ರಾಯದುರ್ಗ (A.P)ಗಳಲ್ಲಿ ಶಾಖಾಕಾರ್ಯಾಲಯಗಳನ್ನು ಹೊಂದಿದೆ.

೬. ಇಲ್ಲಿ ನಡೆಯುವ ಕೆಲಸವೆಲ್ಲವೂ ಧಾರ್ಮಿಕವಾಗಿರುತ್ತದೆ. ಮಹಾಜನರು ಅರ್ಪಿಸುವ ಸಹಾಯದ್ರವ್ಯವೆಲ್ಲವೂ ಧಾರ್ಮಿಕ ಉದ್ದೇಶಗಳಿಗೆ ವಿನಿಯೋಗ ವಾಗುವದು.

ಹೆಚ್ಚಿನ ವಿವರಗಳಿಗೆ ಬರೆಯಿರಿ


ಅಧ್ಯಾತ್ಮಪ್ರಕಾಶಕಾರ್ಯಾಲಯ
೬೮, ೨ನೇ ಬ್ಲಾಕ್,
ತ್ಯಾಗರಾಜನಗರ, ಬೆಂಗಳೂರು-೨೮.
ದೂರವಾಣಿ - 625548

ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ,
ಹಾಸನ ಜಿಲ್ಲೆ,
ದೂರವಾಣಿ - 08175 - 73820

ಆಧ್ಯಾತ್ಮಗ್ರಂಥಾವಳಿ

# ದೃಗ್ದೃಶ್ಯವಿವೇಕ

## (ವಾಕ್ಯಸುಧಾ)

(ಅನುವಾದ, ವಿವರಣೆ, ಸಾರ, ಪರಿಶಿಷ್ಟ- ಇವುಗಳೊಡನೆ)

ಬರೆದವರು :
ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಕ್ರಮಾಂಕ ೬೧

ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ.
1998

ಒಂದನೆಯ ಮುದ್ರಣ 1938

ಎರಡನೆಯ ಮುದ್ರಣ 1954

ಮೂರನೆಯ ಮುದ್ರಣ 1998

*All Rights Reserved*

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು

ಮುದ್ರಣಕಾರರು :

ಶ್ರೀನಿಧಿ ಪ್ರಿಂಟರ್ಸ್, ಹೊಳೆನರಸೀಪುರ.

# ಮುನ್ನುಡಿ

ಬ್ರಹ್ಮೀಭೂತ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರು ಶ್ರೀ ಶಂಕರಭಗವತ್ಪಾದರವರ ಹೆಸರಿನಲ್ಲಿ ಪ್ರಸಿದ್ಧವಾಗಿರುವ ಪ್ರಕರಣಗ್ರಂಥಗಳನ್ನೆಲ್ಲ ಅವರ ಪ್ರಸ್ಥಾನತ್ರಯಭಾಷ್ಯಗಳಂತೆಯೇ ಅನುವಾದ, ಟಿಪ್ಪಣಿ ಮುಂತಾದ ಸೌಕರ್ಯಗಳೊಡನೆ ಕನ್ನಡಕ್ಕೆ ಅನುವಾದಿಸಿ ಅಧ್ಯಾತ್ಮಪ್ರಕಾಶ ಕಾರ್ಯಾಲಯದ ಮೂಲಕ ಪ್ರಕಟಿಸಿ ಪರಮೋಪಕಾರವನ್ನು ಮಾಡಿದ್ದಾರೆ. ಇಂಥ ಪ್ರಕರಣ ಗ್ರಂಥಗಳಲ್ಲಿ ಈ ದೃಗ್ದೃಶ್ಯವಿವೇಕವೂ ಒಂದಾಗಿದೆ.

ಈ ಗ್ರಂಥವು ಭಾಷ್ಯಕಾರರಾದ ಶ್ರೀ ಶಂಕರಾಚಾರ್ಯರ ಕೃತಿಯಾಗಿರಲಾರದು- ಎಂಬುವಕ್ಕೆ ತಕ್ಕ ಯುಕ್ತಿಗಳನ್ನು ಶ್ರೀ ಶ್ರೀಗಳವರು ಪೀಠಿಕೆಯಲ್ಲಿ ತಿಳಿಸಿದ್ದಾರೆ. ಆದರೆ ಜಿಜ್ಞಾಸುಗಳಿಗೆ ಇದರಲ್ಲಿರುವ ಗುಣಾಂಶಗಳನ್ನು ಸ್ವೀಕರಿಸುವಂತೆ ಅವುಗಳನ್ನೂ ಸೂಚಿಸಿದ್ದಾರೆ. ಆದ್ದರಿಂದ ಈ ಪುಸ್ತಕವು ಅಧ್ಯಾತ್ಮವಿಚಾರರಸಿಕರಿಗೆ ಗ್ರಾಹ್ಯವಾಗಿರುವದರಲ್ಲಿ ಸಂಶಯವಿಲ್ಲ.

ಶ್ರೀ ಶ್ರೀಗಳವರು ಬ್ರಹ್ಮೀಭೂತರಾದ ಅನಂತರ ಮೂರನೆಯ ಬಾರಿಗೆ ಈ ಪುಸ್ತಕವನ್ನು ಕಾರ್ಯಾಲಯದ ಮೂಲಕ ಪ್ರಕಟಿಸಲಾಗಿದೆ. ವಾಚಕರು ಎಂದಿನಂತೆ ಈ ಗ್ರಂಥವನ್ನೂ ಆದರದಿಂದ ಬರಮಾಡಿಕೊಂಡು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಇತಿ- ಸಜ್ಜನ ವಿಧೇಯ,

ಹೊಳೆನರಸೀಪುರ. ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ

ತಾ|| 15-1-1998 ಅಧ್ಯಾತ್ಮಗ್ರಂಥಾವಳಿಯ ಸಂಪಾದಕ.

# ಪೀಠಿಕೆ

---

೧

ಈ ಗ್ರಂಥದ ಹೆಸರೇನೆಂಬುದು ಗ್ರಂಥದೊಳಗಿನ ಶ್ಲೋಕಗಳಲ್ಲಿ ವ್ಯಕ್ತವಾಗಿರುವದಿಲ್ಲ; ಇಂಥ ವಿಷಯವನ್ನೇ ಕುರಿತು ಪ್ರತಿಪಾದಿಸುತ್ತೇವೆ ಎಂಬ ಪ್ರತಿಜ್ಞೆಯೂ ಇಲ್ಲಿಲ್ಲ. ಆದ್ದರಿಂದ ಹೆಸರನ್ನು ನಾವೇ ಊಹಿಸಬೇಕಾಗಿರುತ್ತದೆ. ಇದಕ್ಕೆ 'ದೃಗ್ದೃಶ್ಯವಿವೇಕ', 'ವಾಕ್ಯಸುಧಾ'– ಎಂಬ ಎರಡು ಹೆಸರುಗಳು ಪ್ರಚಾರದಲ್ಲಿರುತ್ತವೆ. ದೃಕ್ಕು, ದೃಶ್ಯ– ಇವೆರಡನ್ನೂ ವಿಂಗಡಿಸಿ ತಿಳಿಸುವದೇ ಉದ್ದೇಶವಾಗಿದ್ದರೆ ಗ್ರಂಥದ ಮೊದಲನೆಯ ಐದು ಶ್ಲೋಕಗಳಲ್ಲಿ ಆ ಉದ್ದೇಶವು ಮುಗಿದಿದೆಯಾದ್ದರಿಂದ ಮುಂದಿನ ಗ್ರಂಥಭಾಗಕ್ಕೆ ಸಾರ್ಥಕ್ಯವಿಲ್ಲದೆಹೋಗುತ್ತದೆ. ಇನ್ನು 'ವಾಕ್ಯಸುಧಾ' ಎಂಬ ಹೆಸರು ಈ ಗ್ರಂಥಕ್ಕೆ ಒಪ್ಪುವದೇ ಇಲ್ಲವೆನ್ನಬೇಕು; ಏಕೆಂದರೆ ಈ ಗ್ರಂಥದಲ್ಲಿ ವಾಕ್ಯವಿಚಾರವನ್ನು ಹೆಚ್ಚಾಗಿ ಮಾಡಿರುವದೇ ಇಲ್ಲ. ಇದೂ ಅಲ್ಲದೆ ಈ ಗ್ರಂಥದ ಮೇಲೆ 'ವಾಕ್ಯಸುಧಾ' ಎಂಬ ಹೆಸರಿನ ಒಂದು ವ್ಯಾಖ್ಯಾನವೂ ಇದೆಯೆಂದು ತಿಳಿದು ಬಂದಿರುವದರಿಂದ ಆ ಹೆಸರಿನಿಂದ ಈ ಗ್ರಂಥವನ್ನು ಜನರು ತಪ್ಪಾಗಿ ಕರೆದಿರಬಹುದೆಂದೂ ಊಹಿಸುವದಕ್ಕೂ ಅವಕಾಶವಿದೆ.

ಗ್ರಂಥದ ಹೆಸರಿನಂತೆ ಗ್ರಂಥಕರ್ತರ ಹೆಸರೂ ಇಲ್ಲಿ ಸ್ಪಷ್ಟವಾಗಿರುವದಿಲ್ಲ. ಭಾರತೀತೀರ್ಥರೆಂದು ಕೆಲವರು, ವಿದ್ಯಾರಣ್ಯರೆಂದು ಕೆಲವರು, ಶ್ರೀ ಶಂಕರಾಚಾರ್ಯರೆಂದು ಕೆಲವರು– ಹೀಗೆ ಬಗೆಬಗೆಯಾಗಿ ಗ್ರಂಥಕರ್ತೃವನ್ನು ಊಹಿಸುತ್ತಿದ್ದಾರೆ. ಭಾರತೀತೀರ್ಥರೂ ವಿದ್ಯಾರಣ್ಯರೂ ಪ್ರಸಿದ್ಧವಾದ ಪಂಚದಶಿಯ ಕೆಲಕೆಲವು ಭಾಗಗಳನ್ನು ರಚಿಸಿರುವವರು. ಆ ಗ್ರಂಥದಲ್ಲಿ ಬಗೆಬಗೆಯ ವೇದಾಂತಪ್ರಕ್ರಿಯೆಗಳಿವೆಯಾದರೂ ಈ ಪ್ರಕರಣದಲ್ಲಿರುವ ಜೀವತ್ರೈವಿಧ್ಯವನ್ನಾಗಲಿ ಸಮಾಧಿಷಟ್ಕವನ್ನಾಗಲಿ ಅಲ್ಲಿ ಸೂಚಿಸಿಕೂಡ ಇರುವದಿಲ್ಲ. ಇನ್ನು ಸುಪ್ರಸಿದ್ಧಭಾಷ್ಯಕಾರರಾದ ಶಂಕರಭಗವತ್ಪಾದರ ಗ್ರಂಥವಂತೂ ಇದು ಆಗಿರಲೇ ಆರದೆಂದು ಧಾರಾಳವಾಗಿ ಹೇಳಿಬಿಡಬಹುದು. ಏಕೆಂದರೆ ಭಾಷಾಶೈಲಿಯಲ್ಲಾಗಲಿ ಪ್ರತಿಪಾದನೆಯ ಕ್ರಮದಲ್ಲಿಯಾಗಲಿ ಈ

ಗ್ರಂಥಕ್ಕೂ ಆಚಾರ್ಯರ ಪ್ರಸಿದ್ಧಗ್ರಂಥಗಳಿಗೂ ಯಾವ ಹೋಲಿಕೆಯೂ ಇರುವದಿಲ್ಲ. ಈ ಎಲ್ಲಾ ಕಾರಣಗಳಿಂದ ಗ್ರಂಥಕರ್ತೃವಿನ ಹೆಸರು ಇನ್ನೂ ಅನಿರ್ಣೀತವೆಂದೇ ಹೇಳಬೇಕಾಗಿರುತ್ತದೆ.

೨

ದೃಗ್ದೃಶ್ಯವಿವೇಕವನ್ನು ಇಂಗ್ಲಿಷಿಗೂ ಭರತಖಂಡದ ಅನೇಕ ಭಾಷೆಗಳಿಗೂ ಆಗಲೆ ಪರಿವರ್ತನೆಯನ್ನು ಮಾಡಿರುತ್ತಾರೆ. ಆದರೆ ಕನ್ನಡದಲ್ಲಿ ಇದುವರೆಗೂ ಒಂದು ಪರಿವರ್ತನೆಯೂ ಆದಂತೆ ತಿಳಿದುಬಂದಿರುವದಿಲ್ಲ. ಆದ್ದರಿಂದ ಈ ಗ್ರಂಥವನ್ನು ಅನುವಾದಟಿಪ್ಪಣಿಗಳೊಡನೆ ಕನ್ನಡಕ್ಕೆ ಇಳಿಸುವದಕ್ಕೆ ಪ್ರಯತ್ನಿಸಿರುತ್ತೇನೆ.

ಗ್ರಂಥಕ್ಕೆ 'ಬ್ರಹ್ಮಾನಂದಭಾರತಿಗಳ ವ್ಯಾಖ್ಯಾನ', 'ಆನಂದ ಜ್ಞಾನರ ವ್ಯಾಖ್ಯಾನ'– ಎಂದು ಎರಡು ವ್ಯಾಖ್ಯಾನಗಳಿರುವದಾಗಿ ಕೇಳುತ್ತೇನೆ ; ಅವುಗಳು ನನಗೆ ಸಿಕ್ಕಿಲ್ಲವಾದರೂ ಮೈಸೂರಿನ ರಾಮಕೃಷ್ಣಾಶ್ರಮದ ಅಧ್ಯಕ್ಷರು ಪ್ರಕಟಿಸಿರುವ ಇಂಗ್ಲಿಷು ಅನುವಾದದ ಟಿಪ್ಪಣಿಗಳು ಆ ವ್ಯಾಖ್ಯಾನಗಳ ಆಧಾರದಮೇಲೆಯೇ ಹುಟ್ಟಿರುವಂತೆ ಆ ಪ್ರಕಟನೆಯ ಪೀಠಿಕೆಯಿಂದ ತಿಳಿದುಬರುತ್ತದೆ. ನಾನು ಈಗ ಬರೆದಿರುವ ಟಿಪ್ಪಣಿಗಳು ಯಾವದೊಂದು ಮೂಲದ ಆಧಾರವನ್ನೂ ಇಟ್ಟುಕೊಳ್ಳದೆ ಈ ಪ್ರಕರಣದ ಆಶಯವನ್ನೇ ಹೊರಪಡಿಸುವದಕ್ಕೆ ಸ್ವತಂತ್ರವಾಗಿ ಮಾಡಿದ ಪ್ರಯತ್ನದ ಫಲವಾಗಿರುತ್ತದೆ. ಇಲ್ಲಿ ನಾನು ಮಾಡಿರುವ ಗ್ರಂಥವಿಭಾಗಗಳು ನನ್ನವೇ ಆಗಿರುತ್ತವೆ.

ಮೂಲದ ಸಾರವನ್ನು ಕೊನೆಯಲ್ಲಿ ಕೊಟ್ಟಿರುತ್ತೇನೆ. ಅದರಿಂದ ತಿಳಿಯಬರುವದೇನೆಂದರೆ ಈ ಪ್ರಕರಣವು ಜೀವಬ್ರಹ್ಮೈಕ್ಯವನ್ನು ಕೇವಲ ಉಪದೇಶಕ್ರಮದಲ್ಲಿ ಹೇಳಿ ಆ ಐಕ್ಯವನ್ನು ಅನುಸಂಧಾನಮಾಡುವದಕ್ಕೆ ಸಮಾಧಿಯನ್ನು ತಿಳಿಸಿಕೊಟ್ಟಿರುತ್ತದೆ. ಈ ಗ್ರಂಥದಲ್ಲಿ ಬ್ರಹ್ಮಸತ್ಯತ್ವವನ್ನಾಗಲಿ ಜಗನ್ಮಿಥ್ಯಾತ್ವವನ್ನಾಗಲಿ ಯುಕ್ತಿಯಿಂದ ಸಾಧಿಸಿರುವದಿಲ್ಲ. ಈ ವಿಷಯಕ್ಕೆ ಶ್ರುತಿಗಳನ್ನೂ ಉದಾಹರಿಸಿರುವದಿಲ್ಲ. ಬ್ರಹ್ಮದಲ್ಲಿ ಅನಾದಿಯಾಗಿ ಮಾಯೆಯಿದ್ದುಕೊಂಡಿರುವದೆಂದೂ ಅದರ ಶಕ್ತಿಗಳಾದ ಆವರಣವಿಕ್ಷೇಪಗಳಿಂದ ಜೀವಜಗತ್ತುಗಳು ಕಲ್ಪಿತವಾಗಿರುವವೆಂದೂ ನಿರ್ವಿಕಲ್ಪಸಮಾಧಿ

ಯಿಂದ ಆವರಣವನ್ನು ಕಳೆದುಕೊಂಡು ಅಖಂಡೈಕರಸವಾದ ಸಚ್ಚಿದಾನಂದ ಬ್ರಹ್ಮವನ್ನು ಸಾಕ್ಷಾತ್ತಾಗಿ ಅನುಭವಿಸಬಹುದೆಂದೂ ಸುಮ್ಮನೆ ಪ್ರತಿಜ್ಞಾಮಾತ್ರದಿಂದ ಹೇಳಿಬಿಟ್ಟಿರುತ್ತದೆ ಆದ್ದರಿಂದ ಈ ಗ್ರಂಥವು ಸಮಾಧಿಯನ್ನು ಸಾಧಿಸುವವರಿಗೆ ಹೆಚ್ಚು ಉಪಯೋಗವಾಗಿರುವದೆಂದು ಹೇಳಬೇಕಾಗಿದೆ.

೩

ಈ ಗ್ರಂಥವನ್ನು ಕನ್ನಡಕ್ಕೆ ಇಳಿಸುವದರಲ್ಲಿ ನನ್ನ ಮುಖ್ಯ ಉದ್ದೇಶವೊಂದುಂಟು : ಶಂಕರಭಗವತ್ಪಾದರ ಹೆಸರಿನಲ್ಲಿ ಪ್ರಸಿದ್ಧವಾಗಿರುವ ಅನೇಕ ಪ್ರಕರಣಗಳಲ್ಲಿ ಇದೂ ಒಂದಾಗಿರುವದರಿಂದ ಭಾಷ್ಯಕಾರರ ತತ್ತ್ವನಿರ್ಧಾರಣ ಪ್ರಕ್ರಿಯೆಯನ್ನು ಇದ್ದದ್ದು ಇದ್ದಹಾಗೆ ಸರಿಯಾಗಿ ಗೊತ್ತುಪಡಿಸುವದಕ್ಕೆ ಸಾಮಾನ್ಯಜನರಿಗೆ ಅಡ್ಡಿಯಾಗಿರುತ್ತದೆ. ಆದ್ದರಿಂದ ಇದನ್ನು ವಿಮರ್ಶಕ ದೃಷ್ಟಿಯಿಂದ ಪರೀಕ್ಷಿಸುವ ಟಿಪ್ಪಣಿಯೊಡನೆಯೂ ಪೀಠಿಕೆಯೊಡನೆಯೂ ಪ್ರಕಟಿಸಿದರೆ ಇದರಲ್ಲಿರುವ ಗುಣಾಂಶವನ್ನು ಗ್ರಹಿಸುವದಕ್ಕೂ ಆಚಾರ್ಯರ ಪ್ರಕ್ರಿಯೆಗೆ ಇದು ಎಲ್ಲೆಲ್ಲಿ ಭಿನ್ನವಾಗಿರುವದೆಂಬುದನ್ನು ಅರಿತುಕೊಳ್ಳುವದಕ್ಕೂ ಸಹಾಯವಾಗಿರುತ್ತದೆಯೆಂದು ನನಗೆ ತೋರಿತು. ಈ ಉದ್ದೇಶದಿಂದಲೇ ಟಿಪ್ಪಣಿಗಳಲ್ಲಿ ಅಲ್ಲಲ್ಲಿ ಇಂಥ ಸ್ಥಾನಗಳನ್ನು ಸೂಚಿಸಿರುತ್ತೇನೆ. ಇಲ್ಲಿಯೂ ವಾಚಕರ ಸೌಕರ್ಯಕ್ಕಾಗಿ ಕೆಲವು ಪ್ರಧಾನವಿಚಾರಗಳನ್ನು ಸಂಗ್ರಹಿಸಿ ತಿಳಿಯಿಸಬೇಕೆಂದಿರುತ್ತೇನೆ.

**ಇಲ್ಲಿ ತಿಳಿಸಿರುವ ಪ್ರಕ್ರಿಯೆಯಲ್ಲಿ ವಿಚಾರಕರಿಗೆ ತೋರುವ ಆಕ್ಷೇಪಗಳೇನೆಂದರೆ :**

(೧) ಬ್ರಹ್ಮದಲ್ಲಿ ಮಾಯೆಯು ಇದ್ದುಕೊಂಡಿರುವದೆಂಬುದೂ ಅದರಲ್ಲಿ ಆವರಣವಿಕ್ಷೇಪಗಳಿರುವವೆಂಬುದೂ ಪ್ರತಿಜ್ಞಾಮಾತ್ರವಾಗಿದೆ. ಇದಕ್ಕೆ ಯಾವ ಯುಕ್ತಿಯೂ ಅಥವಾ ಅನುಭವದ ಆಧಾರವೂ ಇರುವದಿಲ್ಲ.

(೨) ಮಾಯೆಯು ಅನಾದಿಯಾಗಿ ಬ್ರಹ್ಮದಲ್ಲಿದ್ದುಕೊಂಡಿದ್ದರೆ ಅದು ಜ್ಞಾನದಿಂದ ಹೋಗುವದಕ್ಕೆ ಕಾರಣವಿಲ್ಲ ; ಏಕೆಂದರೆ ಜ್ಞಾನದಿಂದ ಅಜ್ಞಾನವೂ ಅಜ್ಞಾನಕಲ್ಪಿತವಾದ ಭ್ರಾಂತಿವಸ್ತುವೂ ಬಾಧಿತವಾಗುತ್ತವೆಯೇ ಹೊರತು, ನಿಜವಾಗಿರುವದನ್ನು ಜ್ಞಾನವು ನಾಶಪಡಿಸಲಾರದು. ಮಾಯೆಯೂ ಕಲ್ಪಿತವಾಗಿರುವದೆಂದರೆ ಅಜ್ಞಾನವು ಮಾಯೆಗೆ ಕಲ್ಪಕವಾಗುತ್ತದೆ, ಮಾಯೆಯು ಕಾರ್ಯವಾಗುವದಿಲ್ಲ.

(೩) ದೃಗ್ದೃಶ್ಯಭೇದವನ್ನೂ ಜಗದ್ಬ್ರಹ್ಮಭೇದವನ್ನೂ ಮಾಯೆಯ ಆವರಣ ಶಕ್ತಿಯು ಮುಚ್ಚಿಕೊಂಡಿರುವದೆಂದು ಹೇಳುವದು ವೇದಾಂತಪ್ರಕ್ರಿಯೆಗೆ ಅನನುಗುಣ ವಾಗಿದೆ. ಏಕೆಂದರೆ ಈ ಪ್ರಕ್ರಿಯೆಯಂತೆ ಆವರಣವು ಹೋದರೆ ದೃಕ್ಕು, ದೃಶ್ಯ ; ಜಗತ್ತು, ಬ್ರಹ್ಮ– ಇವೆಲ್ಲವೂ ಉಳಿದುಕೊಳ್ಳಬೇಕು, ಭೇದಜ್ಞಾನವೂ ಉಳಿಯಬೇಕು –ಎಂದಾಗುತ್ತದೆ. ದೃಗ್ದೃಶ್ಯಭೇದಜ್ಞಾನವು ಮುಕ್ತಿಗೆ ಹೇತುವೆಂಬುದು ಸಾಂಖ್ಯರಿಗೆ ಒಪ್ಪಾದರೂ ಕೇವಲ ಬ್ರಹ್ಮಾತ್ಮವಾದವನ್ನು ಹೇಳುವ ವೇದಾಂತಿಗಳಿಗೆ ಇದು ಸಮ್ಮತ ವಲ್ಲ.

(೪) ಕೇವಲ ಸಮಾಧಿಯಿಂದ ದೃಶ್ಯವನ್ನೂ ಜಗತ್ತನ್ನೂ ಮರೆತು ಬ್ರಹ್ಮಧ್ಯಾನ ದಲ್ಲಿ ಮಗ್ನನಾದರೆ ಸರ್ವಸಂಶಯಗಳೂ ನೀಗುವವೆಂದೂ ಕರ್ಮಗಳೂ ನಾಶವಾಗುವ ವೆಂದೂ ಹೇಳಿರುವದು ಸರಿಯಲ್ಲ. ಇದು ಮುಂಡಕಶ್ರುತಿಗೆ ಒಪ್ಪಾಗಿರುವದೆಂದು ಭಾವಿಸುವದೂ ಸರಿಯಲ್ಲ. ಏಕೆಂದರೆ ಜಗತ್ತನ್ನು ಮರೆತಮಾತ್ರದಿಂದ ಅದು ಮಿಥ್ಯೆ ಯಾಗುವದಿಲ್ಲ; ಅದು ಇರುವವರೆಗೆ ಅದರಿಂದಾಗುವ ಭಯವೂ ತಪ್ಪಿದ್ದಲ್ಲ. ಧ್ಯಾನ ದಿಂದಲೇ ಮುಕ್ತಿಯಾಗುವದೆಂಬುದು ಯೋಗಿಗಳಿಗೆ ಸಮ್ಮತವಾಗಬಹುದಾದರೂ ವೇದಾಂತಿಗಳಿಗೆ ಒಪ್ಪಾಗಲಾರದು ; ಜ್ಞಾನದಿಂದ ಮುಕ್ತಿಯಾಗುವದೆಂಬ ಮುಂಡಕ ಶ್ರುತಿಗೆ ಈ ಅಭಿಪ್ರಾಯವು ವಿರುದ್ಧವೂ ಆಗಿರುತ್ತದೆ.

(೫) ಬ್ರಹ್ಮದಲ್ಲಿರುವ ಮಾಯೆಯಿಂದ ವ್ಯಾವಹಾರಿಕಜೀವಜಗತ್ತುಗಳು ಆಗಿವೆಯೆಂದೂ ಚಿದಾಭಾಸದ ನಿದ್ರಾದೋಷದಿಂದ ಪ್ರಾತಿಭಾಸಿಕಜೀವಜಗತ್ತುಗಳು ಆಗಿರುವವೆಂದೂ ಹೇಳುವದು ಯುಕ್ತ್ಯನುಭವಸಮ್ಮತವಲ್ಲ. ಏಕೆಂದರೆ ಸ್ವಪ್ನದಲ್ಲಿ ಯೂ ಅನಾದಿಕಾಲದಿಂದ ಜೀವಜಗತ್ತುಗಳು ಇರುವಂತೆ ತೋರುತ್ತಿರುತ್ತವೆ. ಎಚ್ಚರದ ಚಿದಾಭಾಸನೇ ನಾನು, ಎಂದೇನೂ ಕನಸಿನಲ್ಲಿ ನೆನಪಿರುವದಿಲ್ಲ. ಒಂದುವೇಳೆ ಎಚ್ಚರದ ದೃಷ್ಟಿಯಿಂದ ವ್ಯಾವಹಾರಿಕಪ್ರಾತಿಭಾಸಿಕಜಗತ್ತುಗಳ ಭೇದವನ್ನು ಕಲ್ಪಿಸಿದರೂ ವ್ಯಾವಹಾರಿಕಜಗತ್ತು ವ್ಯಾವಹಾರಿಕವು, ಪಾರಮಾರ್ಥಿಕವಲ್ಲ– ಎಂಬ ವಾಕ್ಯವು ಉಕ್ತಿ ಮಾತ್ರವಾಗಿದೆಯೇ ಹೊರತು ಮತ್ತೆ ಯಾವ ಯುಕ್ತ್ಯನುಭವಗಳಿಂದಲೂ ಗ್ರಂಥದಲ್ಲಿ ಸಾಧಿತವಾಗಿರುವದಿಲ್ಲ.

(೬) ಪಾರಮಾರ್ಥಿಕಜೀವನು ವ್ಯಾವಹಾರಿಕಪ್ರಾತಿಭಾಸಿಕಜಗತ್ತುಗಳನ್ನೆಲ್ಲ ಮಿಥ್ಯಾರೂಪವಾಗಿ ತಿಳಿಯುವವನು ಎಂದು ಇಲ್ಲಿ ಹೇಳಿದೆ. ಇದು ಕೇವಲ ಧ್ಯಾನಾತ್ಮಕ ದೃಷ್ಟಿಯಾದರೆ ಉಪಾಸನೆಯ ಅಂತಸ್ತಿಗೆ ಇಳಿಯುತ್ತದೆಯೇ ಹೊರತು ವಸ್ತುತಂತ್ರ ವಾದ ಜ್ಞಾನವಾಗಲಾರದು. ಜ್ಞಾನವೇ ಆದರೆ ಅದಕ್ಕೆ ತಕ್ಕ ಯುಕ್ತ್ಯನುಭವಗಳನ್ನು ತೋರಿಸದೆ ಇರುವದು ಗ್ರಂಥದಲ್ಲಿ ಒಂದು ಕೊರತೆಯಾಗಿರುತ್ತದೆ.

೬

ಈ ಮೇಲೆ ಕೊಟ್ಟಿರುವ ಕೆಲವು ಆಕ್ಷೇಪಗಳು ವಿಚಾರಕುಶಲರಾದ ಜಿಜ್ಞಾಸುಗಳಿಗೆ ಆಚಾರ್ಯರ ವೇದಾಂತಪ್ರಕ್ರಿಯೆಯಲ್ಲಿರುವ ಹೆಚ್ಚುಗಾರಿಕೆಯನ್ನು ತಿಳಿಸುವದಕ್ಕೇ ಹೊರತು ಗ್ರಂಥದ ಮೇಲೆ ತಪ್ಪುಗಳನ್ನು ಹೊರಿಸುವದಕ್ಕಲ್ಲವೆಂಬುವನ್ನು ವಾಚಕರು ಅವಶ್ಯವಾಗಿ ಲಕ್ಷ್ಯದಲ್ಲಿಡಬೇಕು. ಆಸ್ತಿಕರಾದ ಸಾಧಕರಿಗೆ ವೇದಾಂತದ ಸಿದ್ಧಾಂತದಲ್ಲಿ ಪ್ರವೇಶವಾಗಲೆಂಬ ಉದ್ದೇಶವುಳ್ಳ ಗ್ರಂಥಕರ್ತೃಗಳಿಂದ ಈಚೆಗೆ ಅನೇಕಗ್ರಂಥಗಳು ಹೊರಟಿರುತ್ತವೆ. ಅಂಥ ಪ್ರಕರಣಗಳಲ್ಲಿ ಇದೂ ಒಂದಾಗಿರುತ್ತದೆ. ಈ ಗ್ರಂಥದಲ್ಲಿ ವೇದಾಂತಪ್ರತಿಪಾದ್ಯವಾದ ಜ್ಞಾನಸ್ವರೂಪವನ್ನು ಯಥಾವತ್ತಾಗಿ ತಿಳಿಸದಿದ್ದರೂ ಸಾಕ್ಷಿಯ ಸ್ವರೂಪವನ್ನು ಚೆನ್ನಾಗಿ ತಿಳಿಸಿರುತ್ತವೆ. ಜಗತ್ತಿನಲ್ಲಿರುವ ಅಸ್ತಿಭಾತಿಪ್ರಿಯಾಂಶಗಳನ್ನು ವಿಚಾರಿಸಿದರೆ ಅದರ ಮೂಲವೇ ಸಚ್ಚಿದಾನಂದವಾದ ಬ್ರಹ್ಮವೆಂದು ತಿಳಿಯಬರುವದೆಂಬ ಅಮೋಘಸೂಚನೆಯನ್ನು ಕೊಟ್ಟಿರುತ್ತದೆ. ಈ ಎರಡು ವಿಷಯಗಳನ್ನು ಗ್ರಹಿಸಿದರೆ ಜಿಜ್ಞಾಸುಗಳಿಗೆ ಎಷ್ಟೋ ಪ್ರಯೋಜನವುಂಟೆಂಬುದರಲ್ಲಿ ಸಂಶಯವಿಲ್ಲ. ಈ ಗ್ರಂಥಗಳಲ್ಲಿರುವ ಶ್ಲೋಕಗಳಲ್ಲಿ ಹದಿನಾರು ಶ್ಲೋಕಗಳು ಸರಸ್ವತೀರಹಸ್ಯೋಪನಿಷತ್ತು ಎಂಬ ಒಂದು ಸಣ್ಣ ಉಪನಿಷತ್ತಿನಲ್ಲಿ ಕಂಡುಬರುತ್ತದೆ. ಗ್ರಂಥಕಾರನು ಉಪನಿಷತ್ತಿನಿಂದ ಇವುಗಳನ್ನು ಆರಿಸಿದನೆಂದಾಗಲಿ ಆ ಉಪನಿಷತ್ತು ಈ ಗ್ರಂಥದ ಕಾಲಕ್ಕಿಂತ ಮೊದಲೇ ಇತ್ತೆಂದಾಗಲಿ ಊಹಿಸುವದಕ್ಕೆ ಯಾವ ಆಧಾರವೂ ಇಲ್ಲ. ಆದಕಾರಣ ಉಪನಿಷತ್ತಿನ ಭಾಗವೇ ಈ ಗ್ರಂಥದ ಆಧಾರದಿಂದ ಹುಟ್ಟಿರಬೇಕೆಂದು ಶೋಧಕರು ಊಹಿಸಿರುತ್ತಾರೆ. ಇದರಿಂದಲೂ ಈ ಗ್ರಂಥದ ಹೆಚ್ಚುಗಾರಿಕೆಯು ವ್ಯಕ್ತವಾಗುತ್ತದೆ.

೭

ಈ ಗ್ರಂಥದ ಅನುವಾದವನ್ನು ಮೈಸೂರಿನಲ್ಲಿ ಶ್ರೀಸ್ವಾಮಿ ನಿಖಿಲಾನಂದಜಿಯವರು ಬರೆದು ಪ್ರಕಟಿಸಿದ ಇಂಗ್ಲಿಷ್ ಅನುವಾದವೊಂದು, ಇದಕ್ಕಿಂತಲೂ ಮೊದಲೇ ಬೊಂಬಾಯಿ ಥಿಯಸಾಫಿಕಲ್ ಪಬ್ಲಿಕೇಷನ್ ಫಂಡಿನವರು ಪ್ರಕಟಿಸಿದ್ದ ಅನುವಾದವೊಂದು– ಹೀಗೆ ಮುಖ್ಯವಾಗಿ ಎರಡು ಪ್ರತಿಗಳ

ಆಧಾರದ ಮೇಲೆ ಸಿದ್ಧಪಡಿಸಿರುತ್ತೇನೆ. ಶ್ಲೋಕಗಳಲ್ಲಿ ಅಲ್ಪಸ್ವಲ್ಪ ಪಾಠಭೇದಗಳಿವೆಯಾದರೂ ಅವು ಅಷ್ಟು ಮಹತ್ತ್ವದವಾಗಿರಲಿಲ್ಲ; ಮುಖ್ಯವಾಗಿ ಮೈಸೂರಿನ ಪ್ರಕಟನೆಯ ಪಾಠವನ್ನೇ ನಾನು ಅನುಸರಿಸಿರುತ್ತೇನೆ. ವಾಚಕರಿಗೆ ಆಚಾರ್ಯರ ವಿಚಾರಸರಣಿಯಲ್ಲಿ ಆದರವೂ ವೇದಾಂತಪ್ರಕ್ರಿಯೆಯಲ್ಲಿ ಅಭಿರುಚಿಯೂ ಒಂದಿಷ್ಟಾದರೂ ಇದರಿಂದ ಹೆಚ್ಚಿದರೆ ನಾನು ಧನ್ಯನು.

**ಅನುವಾದಕ**

# ವಿಷಯಾನುಕ್ರಮಣಿಕೆ

| ವಿಷಯ | | ಪುಟ |
|---|---|---|
| | ಮುನ್ನುಡಿ | ೩ |
| | ಪೀಠಿಕೆ | ೪—೯ |
| ೧. | ಆತ್ಮನು ಕೇವಲ ದೃಕ್ಸ್ವರೂಪನು | ೧ |
| ೨. | ಆತ್ಮನು ರೂಪಾಂತರವನ್ನು ಹೊಂದದೆ ಅರಿಯುತ್ತಾನೆ | ೫ |
| ೩. | ಅಹಂಕಾರನುನೋಃವೇಹಗಳ ಚಿದಾಭಾಸತ್ವ | ೧೨ |
| ೪. | ಅಹಂಕಾರದ ತಾದಾತ್ಮ್ಯತ್ರಯವೂ ಅದರ ನಿವೃತ್ತಿಯೂ | ೧೪ |
| ೫. | ಅವಸ್ಥಾತ್ರಯವು ಲಿಂಗಕ್ಕೆ, ಸಾಕ್ಷಿಗಲ್ಲ | ೧೮ |
| ೬. | ಬ್ರಹ್ಮವೂ ಮಾಯೆಯೂ | ೨೧ |
| ೭. | ಬ್ರಹ್ಮರೂಪವನ್ನು ನಾಮರೂಪಗಳಿಂದ ವಿಂಗಡಿಸಿಕೊಳ್ಳುವ ಬಗೆ | ೨೪ |
| ೮. | ಸಮಾಧಿಷಟ್ಕ | ೨೫ |
| ೯. | ಸಮಾಧಿಯ ಫಲ | ೨೮ |
| ೧೦. | ಪಾರಮಾರ್ಥಿಕಜೀವನೂ ಮಹಾವಾಕ್ಯಾರ್ಥವೂ | ೨೯ |
| ೧೧. | ವ್ಯಾವಹಾರಿಕಪ್ರಾತಿಭಾಸಿಕಜೀವರುಗಳು | ೩೧ |
| ೧೨. | ಜೀವತ್ರಯಕ್ಕೆ ಜಗತ್ತು ಕಾಣುವ ರೀತಿ | ೩೪ |
| ೧೩. | ಸಾಕ್ಷಿಯ ಸಚ್ಚಿದಾನಂದರೂಪವೇ ಮಿಕ್ಕೆರಡು ಜೀವದಲ್ಲಿ ಕಾಣುತ್ತದೆ | ೫೬ |
| 1. | ಗ್ರಂಥದ ಸಾರ | ೩೮ |
| 2. | ಶ್ಲೋಕಾನುಕ್ರಮಣಿಕೆ | ೪೦ |
| 3. | ಪರಿಶಿಷ್ಟ | ೪೧ |

ಓಂ

# ದೃಗ್ದೃಶ್ಯವಿವೇಕ

## ೧. ಆತ್ಮನು ಕೇವಲ ದೃಕ್ಸ್ವರೂಪನು

**ರೂಪಂ ದೃಶ್ಯಂ ಲೋಚನಂ ದೃಕ್ತದ್ದೃಶ್ಯಂ ದೃಕ್ತು ಮಾನಸಮ್ ।**
**ದೃಶ್ಯಾ ಧೀವೃತ್ತಯಃ ಸಾಕ್ಷೀ ದೃಗೇವ ನ ತು ದೃಶ್ಯತೇ ॥ ೧ ॥**

೧. ರೂಪವು ದೃಶ್ಯವು, ಲೋಚನವು ದೃಕ್ಕು; ಆ (ಲೋಚನವು) ದೃಶ್ಯವು, ಮಾನಸವಾದರೋ ದೃಕ್ಕು; ಧೀವೃತ್ತಿಗಳು ದೃಶ್ಯಗಳು, ಸಾಕ್ಷಿಯು ದೃಕ್ಕೇ ಹೊರತು ದೃಶ್ಯವಾಗಿರುವದಿಲ್ಲ.

### ವಿವರಣೆ

ವ್ಯವಹಾರದಲ್ಲಿ ಶರೀರೇಂದ್ರಿಯಮನೋಬುದ್ಧ್ಯಹಂಕಾರಗಳ ಗುಂಪೇ ತಾವೆಂದು ಜನರು ತಿಳಿದುಕೊಂಡಿರುತ್ತಾರೆ. ಇಂದ್ರಿಯಗಳ ಮೂಲಕವಾಗಿ ವಿಷಯವನ್ನು ಅರಿತುಕೊಂಡು ವ್ಯವಹರಿಸುವ ಕರ್ತೃಭೋಕ್ತೃಸ್ವರೂಪವೇ ತಮ್ಮದೆಂದು ಅವರ ಭಾವನೆ. ಆದರೆ ನಿಜವಾಗಿ ಜಗತ್ತೆಲ್ಲವನ್ನೂ ಬೆಳಗುತ್ತಿರುವದು ಆತ್ಮಚೈತನ್ಯವು. ಆ ಚೈತನ್ಯದ ಬೆಳಕಿನಿಂದಲೇ ಎಲ್ಲಾ ವ್ಯವಹಾರವೂ ಸಾಗುತ್ತಿದೆ. ಆತ್ಮಚೈತನ್ಯವು ಸ್ವತಃಸಿದ್ಧವಾಗಿದ್ದು ಮಿಕ್ಕದ್ದೆಲ್ಲವನ್ನೂ ಬೆಳಗುತ್ತಾ ದೃಗ್ದೃಶ್ಯವ್ಯವಹಾರವನ್ನು– ಇದು ಅರಿಯುವ ವಿಷಯಿ, ಇದು ಅರಿಯಲ್ಪಡುವ ವಿಷಯ ಎಂಬ ವಿಭಾಗದ ವ್ಯವಹಾರವನ್ನು–ಕಲ್ಪಿಸುವದಕ್ಕೆ ಆಸ್ಪದವಾಗಿರುತ್ತದೆ. ಬೃಹದಾರಣ್ಯಕದಲ್ಲಿ ಜನಕಯಾಜ್ಞವಲ್ಕ್ಯಸಂವಾದದಲ್ಲಿ (೪-೩) ಶ್ರುತಿಯು ಈ ಅರ್ಥವನ್ನು ಒಂದು ವಾಕ್ಯದಲ್ಲಿ ಸಂಗ್ರಹಿಸಿ ತಿಳಿಸಿರುತ್ತದೆ : "ಅಸ್ತಮಿತ ಆದಿತ್ಯೇ ಯಾಜ್ಞವಲ್ಕ್ಯ ಚನ್ದ್ರಮಸ್ಯಸ್ತ

ಮಿತೇ ಶಾನ್ತೇಽಗ್ನೌ ಶಾನ್ತಾಯಾಂ ವಾಚಿ ಕಿಂ ಜ್ಯೋತಿರೇವಾಯಂ ಪುರುಷ ಇತ್ಯಾತ್ಮೈವಾಸ್ಯ ಜ್ಯೋತಿರ್ಭವತೀತ್ಯಾತ್ಮನೈವಾಯಂ ಜ್ಯೋತಿಷಾಽಽಸ್ತೇ ಪಲ್ಯಯತೇ ಕರ್ಮ ಕುರುತೇ ವಿಪಲ್ಯೇತೀತಿ" (೪-೩-೬) ಯಾಜ್ಞವಲ್ಕ್ಯನೇ, ಆದಿತ್ಯನು ಅಸ್ತಮಯನಾಗಿ ಚಂದ್ರನೂ ಅಸ್ತಮಯನಾಗಿ ಬೆಂಕಿಯೂ ಆರಿ ಹೋಗಿ ವಾಕ್ಕು ಶಾಂತವಾಗಿರುವಾಗ ಈ ಪುರುಷನಿಗೆ ಜ್ಯೋತಿ ಯಾವದು ? ಎಂದು ಜನಕನು ಕೇಳಿದ್ದಕ್ಕೆ ಯಾಜ್ಞವಲ್ಕ್ಯನು ಕೊಟ್ಟ ಉತ್ತರವಿದು : ಇವನಿಗೆ ಆತ್ಮನೇ ಜ್ಯೋತಿಯು. ಆತ್ಮಜ್ಯೋತಿಯ ಸಹಾಯದಿಂದಲೇ ಇವನು ಕುಳಿತುಕೊಂಡಿರುತ್ತಾನೆ, ಹೋಗುತ್ತಾನೆ, ಕೆಲಸವನ್ನು ಮಾಡುತ್ತಾನೆ, ಹಿಂತಿರುಗುತ್ತಾನೆ–ಎಂದು ಯಾಜ್ಞವಲ್ಕ್ಯನು ಉತ್ತರವನ್ನು ಕೊಟ್ಟಿರುತ್ತಾನೆ. ಹೀಗೆ ಸಕಲವ್ಯವಹಾರವೂ ಸ್ವಯಂಜ್ಯೋತಿರ್ದೃಕ್ಸ್ವರೂಪವಾದ ಆತ್ಮನ ಆಧಾರ ದಿಂದಲೇ ನಡೆಯುತ್ತಿದೆ, ಆ ಆತ್ಮನೇ ಪರಮಾರ್ಥವು ಎಂಬಿದು ವೇದಾಂತ ಸಿದ್ಧಾಂತವು. ಈ ಸಿದ್ಧಾಂತವನ್ನು ಜಿಜ್ಞಾಸುಗಳಿಗೆ ಮನಗಾಣಿಸಿಕೊಡು ವದಕ್ಕಾಗಿ ಈ ಪ್ರಕರಣವನ್ನು ಪ್ರಾರಂಭಿಸಿರುತ್ತದೆ. ಆದ್ದರಿಂದ ಈ ಗ್ರಂಥಕ್ಕೆ "ದೃಗ್ದೃಶ್ಯವಿವೇಕ" ಎಂಬ ಹೆಸರು ಬಂದಿದೆ[1].

ಪ್ರಕೃತಶ್ಲೋಕದಲ್ಲಿ ಸಾಕ್ಷಿಯಾಗಿರುವ ಆತ್ಮನು ಕೇವಲ ದೃಕ್ಸ್ವರೂಪನು ಎಂಬಿದನ್ನು ಕ್ರಮಕ್ರಮವಾಗಿ ತಿಳಿಸಿಕೊಟ್ಟಿದೆ. 'ರೂಪವು ದೃಶ್ಯವು, ಲೋಚನ ವು ದೃಕ್ಕು' ಎಂಬಿದು ಎಲ್ಲರಿಗೂ ತಿಳಿದಿರುವ ವಿಷಯ. ಇಲ್ಲಿ ರೂಪ ವೆಂಬುದನ್ನು ಶಬ್ದಸ್ಪರ್ಶರಸಗಂಧಗಳೆಂಬ ಮಿಕ್ಕ ನಾಲ್ಕು ವಿಷಯಗಳಿಗೂ ಉಪ ಲಕ್ಷಣವಾಗಿ ಹೇಳಿರುತ್ತದೆ. ಉಪಲಕ್ಷಣವೆಂದರೆ ವಿವಕ್ಷಿತವಾದ ಬೇರೆಯ ಅರ್ಥಗಳನ್ನು ತಿಳಿಸುವದಕ್ಕೆ ಒಂದು ಮುಖ್ಯವಾದದ್ದನ್ನು ತಿಳಿಸುವದು. ಹೀಗೆಯೇ ಲೋಚನವು ಎಂಬ ಶಬ್ದದಿಂದ ಚಕ್ಷುರಿಂದ್ರಿಯವನ್ನು ಮಿಕ್ಕ ಶ್ರೋತ್ರೇಂದ್ರಿಯಾದಿಗಳಿಗೆ ಉಪಲಕ್ಷಣವಾಗಿ ತಿಳಿಸಿರುತ್ತದೆ. ಆದ್ದರಿಂದ ಇಂದ್ರಿಯವು ದೃಕ್ಕು, ವಿಷಯವು ದೃಶ್ಯ ; ಏಕೆಂದರೆ ಇಂದ್ರಿಯವು ವಿಷಯ ವನ್ನು ಅರಿಯುತ್ತದೆ, ವಿಷಯವು ಅದರಿಂದ ಅರಿಯಲ್ಪಡುತ್ತಿದೆ– ಎಂದು ವಾಕ್ಯಾರ್ಥ.

1. ಈ ವಿಷಯಕ್ಕೆ ಪೀಠಿಕೆಯನ್ನು ನೋಡಿ.

ಇದರಂತೆ 'ಲೋಚನವು ದೃಶ್ಯವು, ಮಾನಸವು ದೃಕ್ಕು' ಎಂಬ ವಾಕ್ಯಕ್ಕೂ ಅರ್ಥವನ್ನು ಗ್ರಹಿಸಬೇಕು. ಇಂದ್ರಿಯವನ್ನು ಮನಸ್ಸು ಅರಿಯುತ್ತದೆ ; ಆದ್ದರಿಂದ ಮನಸ್ಸು ದೃಕ್ಕು. ಇಲ್ಲಿ ಮನಸ್ಸು ಎಂಬ ಶಬ್ದದಿಂದ ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ– ಮುಂತಾದ ಹೆಸರುಗಳಿಂದ ಶಾಸ್ತ್ರದಲ್ಲಿ ಪ್ರಸಿದ್ಧ ವಾಗಿರುವ ಅಂತಃಕರಣವನ್ನು[1] ಅರಿಯಬೇಕು. ಇಂದ್ರಿಯಗಳೆಲ್ಲವೂ ಹೊರಗಿನ ವಿಷಯಗಳನ್ನು ಅರಿಯುವವಾದರೂ ತಮ್ಮನ್ನು ತಾವು ಅರಿಯ ಲಾರವು. ಅವನ್ನು ಅರಿಯುವದಕ್ಕೆ ಈ ಮನಸ್ಸು ಬೇಕು. ಆದ್ದರಿಂದ ಇಂದ್ರಿಯವು ದೃಶ್ಯವು, ಮನಸ್ಸು ದೃಕ್ಕು– ಎಂದಿದೆ.

ಇನ್ನು 'ಧೀವೃತ್ತಿಗಳು ದೃಶ್ಯಗಳು, ಸಾಕ್ಷಿಯು ದೃಕ್ಕೇ' ಎಂಬ ವಾಕ್ಯದ ಕಡೆಗೆ ತಿರುಗೋಣ. ಹಿಂದಿನ ವಾಕ್ಯದಲ್ಲಿ ಮಾನಸಶಬ್ದದಿಂದ ಹೇಳಿರುವ ಅಂತಃಕರಣವನ್ನೇ ಇಲ್ಲಿ ಧೀಶಬ್ದದಿಂದ ಹೇಳಿರುತ್ತದೆ. ಮನಸ್ಸಿನಲ್ಲಿ ಆಗಾಗ್ಗೆ ಹಲವು ಆಕಾರವಿಶೇಷಗಳು ಏರ್ಪಡುತ್ತಿರುವವು. ಉದಾಹರಣೆಗೆ ಚಕ್ಷು ರಿಂದ್ರಿಯವು ರೂಪವನ್ನು ನೋಡುವಾಗ ಅಂತಃಕರಣದಲ್ಲಿ ಒಂದು ಅಲೆಯು ಎದ್ದುಕೊಳ್ಳುತ್ತದೆ ; ಶ್ರೋತ್ರವು ಶಬ್ದವನ್ನು ಬೆಳಗುವಾಗ ಅದರಲ್ಲಿ ಶಬ್ದಾಕಾರ ವಾದ ಒಂದು ಅಲೆಯು ಎದ್ದುಕೊಳ್ಳುತ್ತದೆ. ಹೀಗೆ ಶಬ್ದಸ್ಪರ್ಶರೂಪರಸಗಂಧ ಗಳನ್ನೂ ಅವುಗಳ ವಿಶೇಷಗಳನ್ನೂ ಅರಿಯುವದಕ್ಕೆ ಅನುಗುಣವಾದ ಒಂದೊಂದು ಅಲೆಯು ಎದ್ದುಕೊಂಡಹೊರತು ನಮಗೆ ಆಯಾ ವಿಷಯದ ಅರಿವು ಆಗಲೇ ಆರದು. ಮನಸ್ಸಿನಲ್ಲಿ ಉಂಟಾಗುತ್ತಿರುವ ಈ ಬಗೆಯ ಅಲೆಗಳಿಗೆ **'ವೃತ್ತಿಗಳು'** ಎಂದು ಹೆಸರು. ಈ ವೃತ್ತಿಗಳ ವಿಷಯವನ್ನು ಮುಂದೆ ನಾಲ್ಕನೆಯ ಶ್ಲೋಕದ ವಿವರಣೆಯಲ್ಲಿ ಮತ್ತೆ ವಿಚಾರಕ್ಕೆ ತೆಗೆದು ಕೊಳ್ಳಲಾಗುವದು. ಸದ್ಯಕ್ಕೆ ಇಷ್ಟನ್ನು ತಿಳಿದುಕೊಂಡರೆ ಸಾಕು : ಮನಸ್ಸಿನ ವೃತ್ತಿಗಳು ಹೊರಗಿನ ಇಂದ್ರಿಯಾದಿಗಳನ್ನು ಅರಿತುಕೊಂಡಾವೇ ಹೊರತು ತಮ್ಮನ್ನು ತಾವು ಅರಿಯಲಾರವು ; ಆದರೆ ಆ ವೃತ್ತಿಗಳನ್ನು ಆತ್ಮನು ಬೆಳಗು ತ್ತಾನೆ. ಆದ್ದರಿಂದ ಆತ್ಮನೇ ದೃಕ್ಕು, ಮಾನಸವೃತ್ತಿಗಳು ದೃಶ್ಯಗಳು–ಎಂದಿದೆ.

---

1. ಈ ಪ್ರಕರಣದಲ್ಲಿ 'ಅಂತಃಕರಣ'ವೆಂಬ ಶಬ್ದವನ್ನು ಒಂದಾನೊಂದು ವಿಶೇಷಾರ್ಥದಲ್ಲಿ ಪ್ರಯೋಗಿಸಿದೆ. ೬ನೆಯ ಶ್ಲೋಕವನ್ನು ನೋಡಿ. ರೂಢಿಯಲ್ಲಿ ಅಂತಃಕರಣವೆಂದು ಕರೆಯುವ ತತ್ತ್ವವನ್ನು ಇಲ್ಲಿ ''ಬುದ್ಧಿ'' ಎಂದು ಕರೆದಿದೆ.

ಇಲ್ಲಿ ಆತ್ಮನನ್ನು 'ಸಾಕ್ಷಿ' ಎಂಬ ಹೆಸರಿನಿಂದ ಕರೆದಿದೆಯಷ್ಟೆ, ಈ ವಿಶೇಷಣದ ಅರ್ಥವನ್ನು ಒಂದಿಷ್ಟು ಇಲ್ಲಿ ವಿಚಾರಮಾಡತಕ್ಕದ್ದಿದೆ. ಏಕೆಂದರೆ ಇಂದ್ರಿಯಗಳೂ ಮನಸ್ಸೂ ತಮ್ಮತಮ್ಮ ದೃಶ್ಯದ ಅಪೇಕ್ಷೆಯಿಂದ ದೃಕ್ಕೆನಿಸಿರುವವಾದರೂ ತಮ್ಮನ್ನು ನೋಡುವ ಮನಸ್ಸು, ಆತ್ಮ- ಇವುಗಳ ಅಪೇಕ್ಷೆಯಿಂದ ದೃಶ್ಯವೂ ಆಗಿರುತ್ತವೆ. ಹೀಗೆ ಏಕಕಾಲಕ್ಕೆ ದೃಗ್ದೃಶ್ಯಗಳಾಗಿರುವ ಇಂದ್ರಿಯಮನಸ್ಸುಗಳಿಗಿಂತ ಆತ್ಮನು ಕೇವಲ ದೃಗ್ರೂಪನಾಗಿರುತ್ತಾನೆ- ಎಂಬುದರಿಂದಲೇ ವಿಲಕ್ಷಣಸ್ವರೂಪನಾಗಿರುತ್ತಾನೆಂದಾಯಿತಲ್ಲವೆ ? ಇಷ್ಟೇ ಅಲ್ಲದೆ ಆತ್ಮನು ತನ್ನ ದೃಶ್ಯಗಳನ್ನು ಅರಿಯುತ್ತಿರುವ ಬಗೆಯಲ್ಲಿಯೂ ಅವುಗಳಿಗಿಂತ ವಿಲಕ್ಷಣನಾಗಿರುತ್ತಾನೆ. ಹೇಗೆಂದರೆ, ಇಂದ್ರಿಯಗಳು ತಮ್ಮ ತಮ್ಮ ದೃಶ್ಯವನ್ನು ಅರಿಯುವದಕ್ಕೆ ನಡುವೆ ಯಾವದಾದರೂ ಒಂದು ಸಾಧನವನ್ನು ಬಯಸುತ್ತವೆ. ಉದಾಹರಣೆಗೆ ಚಕ್ಷುರಿಂದ್ರಿಯಕ್ಕೆ ವಿಷಯದ ರೂಪವನ್ನು ತಿಳಿಸಿಕೊಡುವದಕ್ಕೆ ಹೊರಗಿರುವ ಯಾವದಾದರೊಂದು ಬೆಳಕಿನ ಸಹಾಯವು ಬೇಕಾಗುತ್ತದೆ ; ಶ್ರೋತ್ರಕ್ಕೆ ಶಬ್ದವನ್ನು ತಿಳಿಸುವದಕ್ಕೆ ವಾಯುವಿನ ಸಹಾಯವು ಬೇಕಾಗುತ್ತದೆ. ಇತ್ಯಾದಿ. ಇದರಂತೆ ಮನಸ್ಸಿಗೆ ಹೊರಗಿನ ವಿಷಯಗಳನ್ನು ಅರಿಯುವದಕ್ಕೆ ಇಂದ್ರಿಯಗಳ ನೆರವು ಬೇಕಾಗುತ್ತದೆ. ಆದರೆ ಆತ್ಮನು ಮನಸ್ಸನ್ನು ಅರಿಯುವದಕ್ಕೆ ಹೀಗೆ ಮತ್ತೆ ಯಾವ ಸಾಧನವನ್ನೂ ಬಯಸುವದಿಲ್ಲ; ಅವನು ನೇರಾಗಿಯೇ ಮನಸ್ಸನ್ನು ಅರಿಯಬಲ್ಲನು. ಮತ್ತೊಂದು ಕರಣದ ಸಹಾಯವನ್ನು ಬಯಸದೆಯೇ ತನ್ನ ವಿಷಯವನ್ನು ಅರಿಯಬಲ್ಲವನು ಎಂಬುದನ್ನು 'ಸಾಕ್ಷಿ' ಎಂಬ ಮಾತು ತಿಳಿಸುತ್ತದೆ. ಸಾಕ್ಷಿ ಎಂಬ ಮಾತಿಗೆ ವ್ಯುತ್ಪತ್ತಿಯು ನೇರಾಗಿ ನೋಡಬಲ್ಲವನು ಎಂಬರ್ಥದಲ್ಲಿಯೇ ಆಗಿರುವದೆಂದು ವ್ಯಾಕರಣದಲ್ಲಿ ಹೇಳಿರುತ್ತದೆ. ಇದನ್ನು ಮುಂದೆ ಐದನೆಯ ಶ್ಲೋಕದಲ್ಲಿ ತಿಳಿಸಿಕೊಡಲಾಗುವದು.

ಇಲ್ಲಿ ಒಂದು ಆಕ್ಷೇಪವು ತಲೆಯೆತ್ತಬಹುದು : ಇಂದ್ರಿಯವು ವಿಷಯದ ಅಪೇಕ್ಷೆಯಿಂದ ದೃಕ್ಕಾದರೂ ಮನಸ್ಸಿನ ಅಪೇಕ್ಷೆಯಿಂದ ದೃಶ್ಯವಾಗಿರುತ್ತದೆ ; ಹೀಗೆಯೇ ಮನಸ್ಸು ಇಂದ್ರಿಯಗಳ ಅಪೇಕ್ಷೆಯಿಂದ ದೃಕ್ಕಾದರೂ ಆತ್ಮನ ಅಪೇಕ್ಷೆಯಿಂದ ದೃಶ್ಯವಾಗಿರುತ್ತದೆ. ಹೀಗೆ ದೃಕ್ಕುಗಳು ದೃಶ್ಯವೂ ಆಗಿರುವದು ಕಂಡುಬರುವದರಿಂದ ದೃಕ್ಕಾಗಿರುವ ಆತ್ಮನೂ ದೃಶ್ಯನಾಗಿರಬಹುದಲ್ಲವೆ ?

ಆತ್ಮನು ದೃಕ್ಕೇ ಎಂದು ನಿರ್ಧರಿಸುವದು ಹೇಗೆ ? ಈ ಶಂಕೆಗೂ ಸಾಕ್ಷಿ ಎಂಬ ಪದದಿಂದಲೇ ಪರಿಹಾರವನ್ನು ಕಂಡುಕೊಳ್ಳಬೇಕು. ಹೇಗೆಂದರೆ ಆತ್ಮನು ಸರ್ವಸಾಕ್ಷಿಯಾಗಿರುತ್ತಾನೆ; ಆದ್ದರಿಂದ ಆವನಿಗೆ ಮತ್ತೊಂದು ದೃಕ್ಕಿನ ಅಪೇಕ್ಷೆಯಿಲ್ಲ. ಇದಲ್ಲದೆ ಆತ್ಮನು ಚಿತ್ಸ್ವರೂಪನೇ ಆಗಿರುವದರಿಂದ ಸ್ವಯಂ ಪ್ರಕಾಶನಾಗಿರುತ್ತಾನೆ. ಆದ್ದರಿಂದಲೂ ಆವನಿಗೆ ಮತ್ತೊಂದು ದೃಕ್ಕಿನ ಅಪೇಕ್ಷೆಯಿಲ್ಲ. ಮನಸ್ಸು ಮುಂತಾದವೂ ದೃಕ್ಕಾಗಿವೆಯಾದರೂ ಅವಕ್ಕೆ ಸ್ವತಃ ಚಿತ್ಪ್ರಕಾಶವಿರುವದಿಲ್ಲ; ಆತ್ಮನ ಬೆಳಕೇ ಅವಕ್ಕೆ ನೆರವಾಗಿ ಅವನ್ನು ದೃಕ್ಕುಗಳಾಗಿ ಮಾಡಿರುತ್ತದೆ. ಇದನ್ನೂ ಮುಂದೆ ತಿಳಿಸಲಾಗುವದು. ಮಿಕ್ಕ ವಸ್ತುಗಳನ್ನೆಲ್ಲ ಬೆಳಗುವ ಸೂರ್ಯನು ಬೆಳಕಿನ ಸ್ವರೂಪವೇ ಆಗಿರುವದರಿಂದ ಹೇಗೆ ತನ್ನನ್ನು ಬೆಳಗುವದಕ್ಕೆ ಮತ್ತೊಂದು ಬೆಳಕಿನ ಸಹಾಯವನ್ನು ಕೋರುವದಿಲ್ಲವೋ ಹಾಗೆಯೇ ಚಿತ್ಪ್ರಕಾಶಸ್ವಭಾವನೇ ಆಗಿರುವ ಆತ್ಮನೂ ಮತ್ತೊಂದು ದೃಕ್ಪ್ರಕಾಶ ವನ್ನು ಕೋರುವದಿಲ್ಲ. ಹೀಗೆ ಆತ್ಮನು ಸಾಕ್ಷಿಯಾಗಿರುವದರಿಂದ ನಿತ್ಯ ದೃಕ್ಸ್ವರೂಪನೇ, ಅವನು ಮತ್ತೊಂದಕ್ಕೆ ದೃಶ್ಯನಲ್ಲ.

## ೨. ಆತ್ಮನು ರೂಪಾಂತರವನ್ನು ಹೊಂದದೆ ಅರಿಯುತ್ತಾನೆ

**ನೀಲಪೀತಸ್ಥೂಲಸೂಕ್ಷ್ಮಹ್ರಸ್ವದೀರ್ಘಾದಿಭೇದತಃ |**
**ನಾನಾವಿಧಾನಿ ರೂಪಾಣಿ ಪಶ್ಯೇಲ್ಲೋಚನಮೇಕಧಾ ॥ ೨ ॥**

೨. ಕಪ್ಪು, ಹಳದಿ, ದಪ್ಪಗಿರುವದು, ಸಣ್ಣಗಿರುವದು, ಮೋಟಕಾಗಿರುವದು, ಉದ್ದವಾಗಿರುವದು- ಮುಂತಾದ ವಿಶೇಷ ಗಳಿಂದ ಬಗೆಬಗೆಯಾಗಿರುವ ರೂಪಗಳನ್ನು ಲೋಚನವು ತಾನು ಒಂದೇ ತೆರನಾಗಿದ್ದು ನೋಡಬಲ್ಲದು.

### ವಿವರಣೆ

ಈಗ ವಿಷಯವಾದ ಅನಾತ್ಮಕ್ಕೂ ವಿಷಯಿಯಾದ ಆತ್ಮನಿಗೂ ಇರುವ ಇನ್ನೊಂದು ವೈಲಕ್ಷಣ್ಯವನ್ನು ತೋರಿಸುವದಕ್ಕೆ ಹೊರಟು ಮೊದಲು ವಿಷಯ ವಿಷಯಿಗಳ ತಾರತಮ್ಯವನ್ನು ಪ್ರತಿಪಾದಿಸುತ್ತಾರೆ.

ವಿಷಯಗಳು ಸವಿಶೇಷವಾಗಿರುತ್ತವೆ. ಉದಾಹರಣೆಗೆ ಚಕ್ಷುರಿಂದ್ರಿಯಕ್ಕೆ ಗೋಚರವಾಗಿರುವ ವಿಷಯವು ಕಪ್ಪು, ಹಳದಿ, ಹಸರು, ಕೆಂಪು, ನೀಲಿ ಊದ, ಕಿತ್ತಲೆಬಣ್ಣ– ಎಂದು ಬಗೆಬಗೆಯ ಬಣ್ಣಗಳದ್ದಾಗಿರಬಹುದು ; ಈ ಒಂದೊಂದು ಬಣ್ಣದಲ್ಲಿಯೂ ಒಳಭೇದಗಳೂ ಇರಬಹುದು. ಇದರಂತೆ ಗಾತ್ರದಲ್ಲಿ ಸಣ್ಣದು, ದೊಡ್ಡದು– ಎಂಬ ತಾರತಮ್ಯವೂ ಗಿಡ್ಡ, ಉದ್ದ, ತಗ್ಗು, ತಿಟ್ಟು-ಮುಂತಾದ ಪ್ರಭೇದಗಳೂ ಇರಬಹುದು. ಹೀಗೆ ವಿಷಯದಲ್ಲಿ ಅನೇಕ ವಿಶೇಷಗಳಿದ್ದರೂ ವಿಷಯಿಯಾದ ಚಕ್ಷುರಿಂದ್ರಿಯವು ಚಕ್ಷುರಿಂದ್ರಿಯವೇ ಆಗಿದ್ದುಕೊಂಡು ಎಲ್ಲಾ ಬಣ್ಣಗಳನ್ನೂ ಅರಿಯುತ್ತದೆ. ಇದರಂತೆ ಚಕ್ಷುರಿಂದ್ರಿಯವು ತನ್ನ ಸ್ವರೂಪದಲ್ಲಿಯೇ ಇದ್ದುಕೊಂಡು ಎಲ್ಲಾ ಗಾತ್ರಗಳನ್ನೂ ಅರಿಯುತ್ತಿರುತ್ತದೆ.

ಇದರಂತೆಯೇ ಶ್ರೋತ್ರವು ಎತ್ತರ, ತಗ್ಗು, ಇಂಪು, ಕರ್ಕಶ-ಮುಂತಾದ ಶಬ್ದಪ್ರಭೇದಗಳನ್ನು ತಿಳಿಸುವದು ; ತ್ವಕ್ಕು ಮೆದು, ತರಕಲು, ಗಟ್ಟಿ– ಮುಂತಾದ ಸ್ಪರ್ಶಪ್ರಭೇದಗಳನ್ನು ತಿಳಿಸುವದು ; ಜಿಹ್ವೆಯು ಹುಳಿ, ಕಾರ, ಉಪ್ಪು, ಕಹಿ– ಮುಂತಾದ ರಸಪ್ರಭೇದಗಳನ್ನು ತಿಳಿಸುವದು ; ನಾಸಿಕೆಯು ಒಳ್ಳೆಯ ಅಥವಾ ಕೆಟ್ಟ ಗಂಧದ ಪ್ರಭೇದಗಳನ್ನು ತಿಳಿಸುವದು–ಇವುಗಳನ್ನೂ ತಿಳಿಯಬೇಕು. ಅಂತೂ ಹೀಗೆ ವಿಷಯಗಳಲ್ಲಿ ಎಷ್ಟು ತಾರತಮ್ಯವಿದ್ದರೂ ಎಷ್ಟು ಪ್ರಭೇದಗಳಿದ್ದರೂ ವಿಷಯಿಯಾದ ಇಂದ್ರಿಯವು ತನ್ನ ಸ್ವರೂಪದಲ್ಲಿಯೇ ಇದ್ದುಕೊಂಡು ಅವುಗಳನ್ನು ಬೆಳಗುತ್ತದೆ ಎಂದಾಯಿತು.

ಆನ್ಧ್ಯಮಾನ್ದ್ಯಪಟುತ್ವೇಷು ನೇತ್ರಧರ್ಮೇಷು ಚೈಕಧಾ ।
ಸಂಕಲ್ಪಯೇನ್ಮನಃ ಶ್ರೋತ್ರತ್ವಗಾದೌ ಯೋಜ್ಯತಾಮಿದಮ್ ॥ ೩ ॥

೩. ಕುರುಡು, ಮಸುಕು, ಚುರುಕು– ಎಂದು ನೇತ್ರಧರ್ಮಗಳು (ಬಗೆಬಗೆಯಾಗಿರುತ್ತಿದ್ದರೂ) ಮನಸ್ಸು ಏಕಪ್ರಕಾರವಾಗಿಯೇ ಇದ್ದುಕೊಂಡು ಅವನ್ನು ಸಂಕಲ್ಪಿಸುತ್ತಿರುವದು. ಶ್ರೋತ್ರ, ತ್ವಕ್ಕು– ಮುಂತಾದ ಇಂದ್ರಿಯಗಳ ವಿಷಯದಲ್ಲಿಯೂ ಇದನ್ನು ಹೊಂದಿಸಿಕೊಳ್ಳಬೇಕು.

## ವಿವರಣೆ

ಹಿಂದಿನ ಶ್ಲೋಕದಲ್ಲಿ ಚಕ್ಷುರಿಂದ್ರಿಯವನ್ನು ಉಪಲಕ್ಷಣವಾಗಿಟ್ಟುಕೊಂಡು ಇಂದ್ರಿಯವು ದೃಕ್ಕೆಂಬುದೂ, ವಿಷಯಗಳು ದೃಶ್ಯವೆಂಬುದೂ ಹೇಗೆಂಬುದನ್ನು ವಿವರಿಸಿ ತಿಳಿಸಿಕೊಟ್ಟದ್ದಾಯಿತು ; ವಿಷಯಗಳಲ್ಲಿ ಎಷ್ಟೇ ಪ್ರಭೇದಗಳು ಇದ್ದರೂ ಇಂದ್ರಿಯವು ಮಾತ್ರ ತಾನು ಒಂದೇ ರೂಪದಲ್ಲಿದ್ದುಕೊಂಡು ಅವನ್ನು ಬೆಳಗುತ್ತದೆ ಎಂದೂ ಹೇಳಿದ್ದಾಯಿತು. ಈಗ ಮನಸ್ಸು ದೃಕ್ಕು, ಇಂದ್ರಿಯವು ದೃಶ್ಯ- ಎಂದು ಮೊದಲನೆಯ ಶ್ಲೋಕದಲ್ಲಿ ಹೇಳಿದ್ದನ್ನು ವಿವರಿಸುವದಕ್ಕೆ ಹೊರಟಿದೆ.

ಇಂದ್ರಿಯವು ಒಂದೇ ರೂಪದಿಂದ ಇದ್ದುಕೊಂಡಿರುವದೆಂಬಿದು ಕಪ್ಪು, ಹಳದಿ- ಮುಂತಾದ ವಿಷಯಪ್ರಭೇದಗಳು ಬೇರ್ಪಟ್ಟರೂ ತಾನು ತನ್ನ ಚಕ್ಷುರಾದಿಸ್ವರೂಪದಿಂದಲೇ ಅವನ್ನು ಬೆಳಗುತ್ತದೆ ಎಂದು ಹೇಳುವದಕ್ಕೇ ಹೊರತು ನಿಜವಾಗಿ ಅದರಲ್ಲಿ ಸ್ವಗತವಾದ ಯಾವ ಭೇದವೂ ಇಲ್ಲ ಎಂದು ತಿಳಿಸುವದಕ್ಕೇನೂ ಅಲ್ಲ. ಏಕೆಂದರೆ ಚಕ್ಷುರಿಂದ್ರಿಯವು ಒಂದೇ ಆದರೂ ಅದರಲ್ಲಿ ಕುರುಡು, ಮಸಕು, ಚುರುಕು- ಎಂಬ ಬೇರೆಬೇರೆಯ ಸ್ಥಿತಿಗಳಿರ ಬಹುದು ; ಈಗ ಚುರುಕಾಗಿ ಕಾಣುತ್ತಿದ್ದ ನೇತ್ರವೇ, ಕೆಲವು ದಿನಗಳಾದ ಬಳಿಕ ಮುಸಕುಮುಸಕಾಗಿ ಕಾಣಿಸಬಹುದು, ಯಾವದಾದರೂ ದೋಷದ ನಿಮಿತ್ತದಿಂದ ಸಣ್ಣದನ್ನು ದೊಡ್ಡದಾಗಿಯೋ ದೊಡ್ಡದನ್ನು ಸಣ್ಣದಾಗಿಯೋ ತೋರಿಸಬಹುದು : ಹತ್ತಿರವಿರುವದನ್ನು ದೂರವಿರುವಂತೆಯೂ ದೂರವಿರು ವದನ್ನು ಹತ್ತಿರವಿರುವಂತೆಯೂ ತೋರಿಸಬಹುದು ; ನೆಲವು ತಗ್ಗುತಿಟ್ಟು ಇದ್ದರೂ ಒಂದೇ ಮಟ್ಟವಾಗಿರುವಂತೆ ತೋರಿಸಬಹುದು. ಇತ್ಯಾದಿ, ಇತ್ಯಾದಿ. ಹೀಗೆಯೇ ಶ್ರೋತ್ರಾದಿಗಳಲ್ಲಿಯೂ ಬೇರೆಬೇರೆಯ ಸ್ಥಿತಿಗಳು ಉಂಟಾಗುವದು ಕಂಡುಬರುತ್ತದೆ. ಈ ಸಂದರ್ಭದಲ್ಲಿ ಇಂದ್ರಿಯವು ತನ್ನನ್ನೇ ತಾನು ನೋಡಿ ನನ್ನಲ್ಲಿ ಈ ಧರ್ಮವಿದೆ ಎಂದು ಎಂದಿಗೂ ತಿಳಿಯಲಾರದು. ಕಣ್ಣಿನಲ್ಲಿ ಹೂವು ಇದೆ ಎಂಬುದನ್ನು ಆ ಕಣ್ಣೇ ಎಂದಿಗೂ ಕಂಡುಕೊಳ್ಳಲಾರದು. ಅಲ್ಲವೆ ? ಆದ್ದರಿಂದ ಇಂದ್ರಿಯವು ತನಗೆತಾನೇ ವಿಷಯವಲ್ಲ ; ಹೀಗಿರುವಲ್ಲಿ ತನ್ನಲ್ಲಿರುವ ಧರ್ಮಭೇದಗಳನ್ನು ಅದು ತಾನೇ ಹೇಗೆ ಅರಿತು

ಕೊಂಡೀತು ? ಆದರೂ ಬೇರೆಬೇರೆಯ ಇಂದ್ರಿಯಗಳಲ್ಲಿರುವ ಈ ಕುರುಡು ಮಸಕು, ಕಿವುಡು, ಅರೆಗಿವುಡು, ಧೊರೆಗಿವುಡು- ಮುಂತಾದ ಸ್ವಭಾವವನ್ನು ಅರಿತುಕೊಳ್ಳುತ್ತಿರುವದು ಯಾವದು ? ಇದೇ ಮನಸ್ಸು. ಮನಸ್ಸು ತಾನೊಂದೇ ಆಗಿದ್ದುಕೊಂಡು ಇಂದ್ರಿಯಗಳ ಬೇರೆಬೇರೆಯ ಧರ್ಮಗಳನ್ನು ಬೇರೆಬೇರೆಯಾಗಿ ಅರಿಯುತ್ತಿರುವದರಿಂದ ಮನಸ್ಸಿಗೆ ವಿಷಯಗಳ ದೃಷ್ಟಿಯಿಂದ ದೃಕ್ಕೆನಿಸಿರುವ ಇಂದ್ರಿಯಗಳೂ ದೃಶ್ಯವಾಗಿದೆ.

**ಕಾಮಃ ಸಂಕಲ್ಪಸನ್ದೇಹೌ ಶ್ರದ್ಧಾಶ್ರದ್ಧೇ ಧೃತೀತರೇ ।**
**ಹ್ರೀರ್ಧೀರ್ಭೀರಿತ್ಯೇವಮಾದೀನ್ ಭಾಸಯತ್ಯೇಕಧಾ ಚಿತಿಃ ॥ ೪ ॥**

೪. ಕಾಮ, ಸಂಕಲ್ಪಸಂದೇಹಗಳು, ಶ್ರದ್ಧಾಶ್ರದ್ಧೆಗಳು, ಧೃತಿ, ಅದಲ್ಲದ (ಅಧೃತಿ)- ಇವು, ಹ್ರೀ, ಧೀ, ಭೀ-ಇವೇ ಮುಂತಾದವುಗಳನ್ನು ಚೈತನ್ಯವು ಒಂದೇ ಆಗಿದ್ದುಕೊಂಡು ಬೆಳಗುತ್ತಿರುವದು.

## ವಿವರಣೆ

ಈಗ ಮನಸ್ಸೆಂಬುದೂ ಕೊನೆಯ ದೃಕ್ಕಲ್ಲವೆಂಬುದನ್ನು ತೋರಿಸುವದಕ್ಕೆ ಹೊರಟಿರುತ್ತಾರೆ. ಧೀವೃತ್ತಿಗಳು ದೃಶ್ಯಗಳು, ಸಾಕ್ಷಿಯೇ ದೃಕ್ಕು-ಎಂದು ಒಂದನೆಯ ಶ್ಲೋಕದಲ್ಲಿ ಹೇಳಿತ್ತು. ಇಂದ್ರಿಯಗಳು ಇಂದ್ರಿಯಗೋಚರವಲ್ಲ, ಆದರೂ ಮನಸ್ಸಿಗೆ ಅವು ಗೋಚರವಾಗಿರುತ್ತವೆ ; ಮನಸ್ಸೂ ಇಂದ್ರಿಯಗೋಚರವಲ್ಲ, ಆದರೂ ಅದು ಚೈತನ್ಯಕ್ಕೆ ಗೋಚರವಾಗಿರುತ್ತದೆ. ಆದ್ದರಿಂದ ಇಂದ್ರಿಯಗಳನ್ನೂ ಮನಸ್ಸನ್ನೂ ದೃಗ್ದೃಶ್ಯಗಳು ಎಂದು ಕರೆಯಬಹುದು. ಏಕೆಂದರೆ ಅವು ತಮ್ಮತಮ್ಮ ದೃಶ್ಯಗಳ ಅಪೇಕ್ಷೆಯಿಂದ ದೃಕ್ಕಾಗಿವೆ, ತಮ್ಮತಮ್ಮ ದೃಕ್ಕಿನ ಅಪೇಕ್ಷೆಯಿಂದ ದೃಶ್ಯವೂ ಆಗಿವೆ. ಆದರೆ ಚಿದ್ರೂಪನಾದ ಸಾಕ್ಷಿಯು ಮಾತ್ರ ದೃಕ್ಕೇ. ಅವನು ಮತ್ತೇತಕ್ಕೂ ದೃಶ್ಯನಲ್ಲ.

ಇಲ್ಲಿ ಹೇಳಿರುವ ಮನಸ್ಸಿನ ವೃತ್ತಿಗಳನ್ನು ಬೃಹದಾರಣ್ಯಕೋಪನಿಷತ್ತಿನ (೧-೫-೩) ವಚನದ ಆಧಾರವನ್ನಿಟ್ಟುಕೊಂಡು ತಿಳಿಸಿದೆ. ಆ ಕಂಡಿಕೆಯಲ್ಲಿ

ಇಂದ್ರಿಯಗಳಿಗಿಂತ ವ್ಯತಿರಿಕ್ತವಾಗಿ ಮನಸ್ಸೆಂಬುದೊಂದು ಇದೆ ಎಂಬುದನ್ನು ಮೊದಲು ತಿಳಿಸಿಕೊಟ್ಟಿದೆ. 'ಮತ್ತೊಂದು ಕಡೆ ಮನಸ್ಸಿಟ್ಟಿದ್ದೆನು, ಅದು ಕಾಣಿಸಲಿಲ್ಲ' ; 'ಮತ್ತೊಂದುಕಡೆ ಮನಸ್ಸಿಟ್ಟಿದ್ದೆನು, ಅದು ಕೇಳಿಸಲಿಲ್ಲ'– ಎಂದು ಜನರು ಆಡಿಕೊಳ್ಳುತ್ತಾರಷ್ಟೆ. ಇಲ್ಲಿ ತನ್ನ ಹತ್ತಿರವೇ ಇದ್ದ ಪದಾರ್ಥವೂ ಕಾಣಿಸದೆ ಇರುವದಕ್ಕೂ ತನ್ನ ಹತ್ತಿರವೇ ಮಾತಾಡಿದ್ದೂ ಕೇಳಿಸದೆ ಇರುವದಕ್ಕೂ ಇಂದ್ರಿಯಕ್ಕಿಂತ ಬೇರೆಯಾದ ಕಾರಣವೊಂದಿರಬೇಕು; ಬರಿಯ ಇಂದ್ರಿಯವೇ ಸಾಕಾಗಿದ್ದರೆ ಕಣ್ಣಿರುವವನಿಗೂ ಕಾಣಿಸದೆ ಇರುವದೂ ಕಿವಿ ಸರಿಯಾಗಿರುವವನಿಗೂ ಕೇಳಿಸದೆ ಇರುವದೂ ಯುಕ್ತವಾಗುತ್ತಿರಲಿಲ್ಲ. ಯಾವದರ ಸಂಬಂಧವಿರುವದರಿಂದಲೇ ಹೀಗೆ ಇಂದ್ರಿಯವು ತನ್ನ ಕೆಲಸವನ್ನು ಮಾಡುವದೋ ಆ ಮನಸ್ಸೆಂಬ ಕರಣವೊಂದು ಇದೆ–ಎಂದಾಯಿತು.

ಇಂದ್ರಿಯಾತಿರಿಕ್ತವಾಗಿ ಇಂದ್ರಿಯಗಳಿಗೆ ಸಹಾಯಕವಾಗಿರುವ ಮನಸ್ಸೂ ಇದೆಯೆಂದಾಯಿತಷ್ಟೆ. ಅದರ ಸ್ವರೂಪವೇನು, ಅದರ ಕೆಲಸವೇನು ?– ಎಂಬುದನ್ನು ಮುಂದಿನ ವಾಕ್ಯದಲ್ಲಿ ಹೀಗೆಂದು ತಿಳಿಸಿದೆ : **"ಕಾಮಃ ಸಂಕಲ್ಪೋ ವಿಚಿಕಿತ್ಸಾ ಶ್ರದ್ಧಾಽಶ್ರದ್ಧಾ ಧೃತಿರಧೃತಿರ್ಹ್ರೀರ್ಧೀರ್ಭೀರಿತ್ಯೇತತ್ ಸರ್ವಂ ಮನ ಏವ"** ಮನಸ್ಸಿನಲ್ಲಿ ಬೇರೆಬೇರೆಯ ನಿಮಿತ್ತದಿಂದ ಬೇರೆಬೇರೆಯ ಮಾರ್ಪಾಡುಗಳುಂಟಾಗುತ್ತಿರುವವು; ಅವುಗಳಿಗೆ **ವೃತ್ತಿಗಳು** ಎಂದು ಹೆಸರು. ಒಂದು ವಸ್ತುವಿನಲ್ಲಿ ಆಗುವ ಇಚ್ಛೆಯು ಕಾಮವು ; ಎದುರಿಗೆ ಕಾಣುವ ವಸ್ತುವನ್ನು ಬಿಳಿಯದು, ಕರಿಯದು, ಗುಂಡಗಿರುವದು, ಚಪ್ಪಟೆಯಾಗಿರುವದು– ಎಂದುಮುಂತಾಗಿ ವಿಕಲ್ಪಿಸುವದು **ಸಂಕಲ್ಪವು**; ಇಂಥದ್ದೊ, ಅಂಥದ್ದೊ ?– ಎಂದು ಸಂಶಯಪಡುವದು ವಿಚಿಕಿತ್ಸೆಯು, **ಸಂಶಯವು**. ಲೋಕಾಂತರಫಲವುಳ್ಳ ಕರ್ಮಗಳಲ್ಲಿಯೂ ದೇವತಾದಿಗಳಲ್ಲಿಯೂ ಇರುವ ಆಸ್ತಿಕ್ಯಬುದ್ಧಿಯು **ಶ್ರದ್ಧೆ**; ಅದಕ್ಕೆ ವಿಪರೀತವಾಗಿರುವ ನಾಸ್ತಿಕ್ಯಬುದ್ಧಿಯು **ಅಶ್ರದ್ಧೆ**. ದೇಹಾದಿಗಳು ಕುಸಿಯದಂತೆ ಎತ್ತಿಹಿಡಿಯುವ ವೃತ್ತಿಯು **ಧೃತಿ** ; ಕುಸಿಯುವದಕ್ಕೆ ಬಿಡುವ ವೃತ್ತಿಯು **ಅಧೃತಿ**. ಹ್ರೀ ಎಂದರೆ ನಾಚಿಕೆ ; ಧೀ ಎಂದರೆ ಅರಿವು ; ಭೀ ಎಂದರೆ ಭಯ. ಮನಸ್ಸಿಗೆ ಇವಿಷ್ಟೇ ವೃತ್ತಿಗಳಲ್ಲ ; ಕ್ರೋಧಮೋಹಾದಿಗಳೂ ಅದರ ವೃತ್ತಿಗಳೇ ; ಸಂಭಾವನೆ, ನಿಶ್ಚಯಾದಿಗಳೂ ಅದರ ವೃತ್ತಿಗಳೇ.

ಮನಸ್ಸಿಗೆ ಈ ಎಲ್ಲಾ ವೃತ್ತಿಗಳೂ ಒಂದೇ ಕಾಲಕ್ಕೆ ಆಗುವದಿಲ್ಲ, ಒಂದೊಂದು ನಿಮಿತ್ತದಿಂದ ಒಂದೊಂದು ವೃತ್ತಿಯು ಆಗುತ್ತಿರುತ್ತದೆ. ಆದರೆ ಈ ವೃತ್ತಿಗಳು ಒಂದಾಗುತ್ತಲೂ ಒಂದು ಆಗುತ್ತಾ ಆಯಾ ವೃತ್ತಿಯು ತನ್ನನ್ನೇ ಆಗಲಿ ಮಿಕ್ಕ ವೃತ್ತಿಗಳನ್ನೇ ಆಗಲಿ ಅರಿಯಲಾರದೆ ಇರುತ್ತವೆಯಾದ್ದರಿಂದ ಅವನ್ನೆಲ್ಲ ಅರಿಯುವದಕ್ಕೆ ಅವಕ್ಕಿಂತ ವ್ಯತಿರಿಕ್ತವಾದ ಮತ್ತೊಂದು ದೃಕ್ಕು ಬೇಕಾಯಿತಷ್ಟೆ? ಅದೇ ಚೈತನ್ಯರೂಪವಾದ ಸಾಕ್ಷಿಯು. ಸಾಕ್ಷಿಯು ಅವುಗಳು ಬೇರ್ಪಡುತ್ತಿದ್ದರೂ ತಾನು ಸಾಕ್ಷಿಯೇ ಆಗಿದ್ದು ಅವುಗಳನ್ನೆಲ್ಲ ಬೆಳಗುತ್ತಿರುತ್ತದೆ.

**ನೋದೇತಿ ನಾಸ್ತಮೇತ್ಯೇಷಾ ನ ವೃದ್ಧಿಂ ಯಾತಿ ನ ಕ್ಷಯಮ್ ।**
**ಸ್ವಯಂ ವಿಭಾತ್ಯಥಾನ್ಯಾನಿ ಭಾಸಯೇತ್ ಸಾಧನಂ ವಿನಾ ॥ ೫ ॥**

೫. ಈ ಚೈತನ್ಯವು ಹುಟ್ಟುವದಿಲ್ಲ, ಮುಳುಗುವದಿಲ್ಲ ; ಬೆಳೆಯುವದಿಲ್ಲ, ಸವೆಯುವದಿಲ್ಲ. ತಾನೇ ಬೆಳಗುತ್ತಿರುವದು, ಮಿಕ್ಕವುಗಳನ್ನು ಸಾಧನವಿಲ್ಲದೆಯೇ ಬೆಳಗಿ ತೋರುತ್ತಿರುವದು:

## ವಿವರಣೆ

ಈಗ ಸಾಕ್ಷಿಗೂ ಮಿಕ್ಕ ದೃಗ್ದೃಶ್ಯಗಳಿಗೂ ಇರುವ ತಾರತಮ್ಯವನ್ನು ಸ್ಪಷ್ಟಪಡಿಸುತ್ತಾರೆ. ಮಿಕ್ಕವುಗಳೆಲ್ಲವೂ ಹುಟ್ಟುವದು, ಇರುವದು, ಬೆಳೆಯುವದು, ರೂಪಾಂತರವಾಗುವದು, ಸೊರಗುವದು, ಹಾಳಾಗುವದು-ಎಂಬ ಆರು ವಿಕಾರಗಳನ್ನು ಪಡೆಯುತ್ತವೆ. ಹುಟ್ಟಿದ ವಸ್ತುಗಳಿಗೆ ಆಗುವ ಈ ಮಾರ್ಪಾಡುಗಳನ್ನು ಭಾವವಿಕಾರಗಳು ಎನ್ನುತ್ತಾರೆ. ಹೊರಗಿನ ವಿಷಯಗಳಿಗೆ ಹೇಗೆ ಭಾವವಿಕಾರಗಳಿರುತ್ತವೆಯೋ ಹಾಗೆಯೇ ಮನಸ್ಸು, ಇಂದ್ರಿಯ- ಇವಕ್ಕೂ ಇರುತ್ತವೆ. ಆದರೆ ಸಾಕ್ಷಿಗೆ ಯಾವ ವಿಕಾರವೂ ಇರುವದಿಲ್ಲ. ತಾನು ಇದ್ದಂತೆಯೇ ಇರುವದರಿಂದ ಈ ಎಲ್ಲದರ ಆಗುಹೋಗುಗಳನ್ನೂ ಅದು ಬೆಳಗಿ ತೋರಿಸುತ್ತಿರುವದು.

ಸಾಕ್ಷಿಗೂ ಸಾಕ್ಷಿಭಾಸ್ಯವಾದ ಮನಆದಿಗಳಿಗೂ ಇರುವ ಮತ್ತೊಂದು ತಾರತಮ್ಯವೇನೆಂದರೆ, ಸಾಕ್ಷಿಯ ಬೆಳಕು ಮತ್ತೊಂದರಿಂದ ಬರುವದಿಲ್ಲ; ಸಾಕ್ಷಿಯು

ತಾನೇ ಚೈತನ್ಯಪ್ರಕಾಶಸ್ವರೂಪವಾಗಿರುತ್ತದೆ. ಆದರೆ ಮನಆದಿಗಳು ಹಾಗಲ್ಲ; ಅವುಗಳಿಗೆ ಬೆಳಕು ಸಾಕ್ಷಿಯಿಂದಲೇ ಬರಬೇಕು. ಮನಸ್ಸೂ ಇಂದ್ರಿಯಗಳೂ ತಮ್ಮ ತಮ್ಮ ವಿಷಯಗಳನ್ನು ಬೆಳಗುತ್ತವೆಯೆಂಬುದು ಸೂರ್ಯನ ಬೆಳಕನ್ನೇ ಪ್ರತಿಫಲಿಸುವ ಕನ್ನಡಿಯಂತೆ- ಸಾಕ್ಷಿಯಿಂದ ಎರವಲಾಗಿ ತೆಗೆದುಕೊಂಡಿರುವ ಬೆಳಕಿನಿಂದಲೇ. ಆ ಬೆಳಕಿನಿಂದಲೇ ಅವು ತಾವು ಬೆಳಗುತ್ತಾ, ತಮ್ಮತಮ್ಮ ವಿಷಯಗಳನ್ನೂ ಬೆಳಗುತ್ತವೆ.

ಸಾಕ್ಷಿಯು ಕೂಟಸ್ಥನಿತ್ಯವೂ ಸ್ವಯಂಪ್ರಕಾಶವೂ ಆಗಿರುವದಲ್ಲದೆ ಸಾಧನವಿಲ್ಲದೆ ಸಾಕ್ಷ್ಯವೆಲ್ಲವನ್ನೂ ಬೆಳಗುತ್ತಿದೆ ಎಂಬುದು ಮತ್ತೊಂದು ವಿಶೇಷವು. ಸಾಕ್ಷಾತ್ತಾಗಿ ಕಾಣುತ್ತಿರುವ ದೃಕ್ಕಾಗಿರುವದರಿಂದ ಅದಕ್ಕೆ ಸಾಕ್ಷಿ ಎಂಬ ಹೆಸರು ಬಂದಿದೆ– ಎಂದು ಆಗಲೆ ತಿಳಿಸಿದ್ದಾಗಿದೆ. ಮನಸ್ಸಿಗೆ ಇಂದ್ರಿಯಗಳೂ ಇಂದ್ರಿಯಗಳಿಗೆ ಬೆಳಕು ಮುಂತಾದ ಸಾಧನಗಳೂ ಇದ್ದರೇ ಅವು ತಮ್ಮತಮ್ಮ ವಿಷಯಗಳನ್ನು ಬೆಳಗುವದು ಆಗುತ್ತದೆ.

ಇನ್ನೂ ಒಂದು ತಾರತಮ್ಯವನ್ನು ಇಲ್ಲಿ ಹೇಳಬಹುದಿತ್ತು. ಆದರೆ ಗ್ರಂಥದಲ್ಲಿ ಅದನ್ನು ತಿಳಿಸಿರುವದಿಲ್ಲ. ಮನಸ್ಸೂ ಇಂದ್ರಿಯಗಳೂ ತಮ್ಮ ವಿಷಯಗಳನ್ನು ಒಂದೊಂದಾಗಿಯೇ ಬೆಳಗಬಲ್ಲವು; ಏಕೆಂದರೆ ಒಂದೊಂದು ವಿಷಯವನ್ನು ಬೆಳಗುವದಕ್ಕೂ ಅದಕ್ಕೆ ಒಂದೊಂದು ವೃತ್ತಿಯು ಬೇಕು. ಏಕ ಕಾಲಕ್ಕೆ ಅವಕ್ಕೆ ಅನೇಕವೃತ್ತಿಗಳಾಗುವ ಸಂಭವವಿಲ್ಲವಾದ್ದರಿಂದ ಎಲ್ಲಾ ವಿಷಯಗಳನ್ನೂ ಏಕಕಾಲದಲ್ಲಿಯೇ ಅವು ಬೆಳಗಲೇಆರವು. ಆದರೆ ಸಾಕ್ಷಿಯು ತಾನು ಇದ್ದಂತೆಯೇ ಇದ್ದುಕೊಂಡು ಸಾಕ್ಷ್ಯವೆಲ್ಲವನ್ನೂ ತನ್ನಲ್ಲಿ ಯಾವ ವ್ಯಾಪಾರವೂ ಇಲ್ಲದೆಯೇ ಏಕಕಾಲಕ್ಕೇ ಬೆಳಗಬಲ್ಲದು.

ಇಲ್ಲಿಯವರೆಗೆ ಕೇವಲ ದೃಕ್ಕಾದ ಸಾಕ್ಷಿಗೂ ದೃಗ್ದೃಶ್ಯಗಳಾದ ಮನ ಇಂದ್ರಿಯಗಳಿಗೂ ಇರುವ, ಈ ದೃಗ್ದೃಶ್ಯಗಳಾದ ದೃಕ್ಪ್ರಕಾಶಸಹಿತಮನ ಇಂದ್ರಿಯಗಳಿಗೂ, ನಿತ್ಯವೂ ಪರಪ್ರಕಾಶ್ಯವಾಗಿರುವ ಕೇವಲ ದೃಶ್ಯಗಳಿಗೂ ಇರುವ ತಾರತಮ್ಯವನ್ನು ವಿವರಿಸಿದಂತೆ ಆಯಿತು[1].

---

1. ದೃಗ್ದೃಶ್ಯವಿವೇಕವೆಂಬ ಹೆಸರಿನ ವಿಷಯಕ್ಕೆ ಪೀಠಿಕೆಯನ್ನು ನೋಡಿ.

## ೩. ಅಹಂಕಾರಮನೋದೇಹಗಳ ಚಿದಾಭಾಸತ್ವ

**ಚಿಚ್ಛಾಯಾವೇಶತೋ ಬುದ್ಧೌ ಭಾನಂ ಧೀಸ್ತು ದ್ವಿಧಾ ಸ್ಥಿತಾ ।**
**ಏಕಾಹಂಕೃತಿರನ್ಯಾ ಸ್ಯಾದನ್ತಃಕರಣರೂಪಿಣೀ ॥ ೬ ॥**

೬. ಚೈತನ್ಯದ ಛಾಯೆಯ ಸೇರುವಿಕೆಯಿಂದ ಬುದ್ಧಿಯಲ್ಲಿ ಬೆಳಕುಂಟಾಗಿರುತ್ತದೆ. (ಆ) ಬುದ್ಧಿಯು ಎರಡು ಬಗೆಯಾಗಿದ್ದು ಕೊಂಡಿರುವದು ; ಅಹಂಕಾರವೆಂಬುದು ಒಂದು, ಅಂತಃಕರಣ ವೆಂಬುದು ಮತ್ತೊಂದು.

### ವಿವರಣೆ

ಈಗ ಚೈತನ್ಯದಿಂದ ಬುದ್ಧ್ಯಾದಿಗಳಲ್ಲಿ ಬಂದಿರುವ ಬೆಳಕಿನ ಸ್ವಭಾವ ವನ್ನೂ ಕಾರ್ಯವನ್ನೂ ತಿಳಿಸುತ್ತಾರೆ.

ಒಂದನೆಯ ಶ್ಲೋಕದಲ್ಲಿ ಹೇಳಿರುವ 'ಮಾನಸ'ವೂ ಮೂರನೆಯ ಶ್ಲೋಕದಲ್ಲಿ ಹೇಳಿರುವ 'ಮನ'ವೂ ಒಟ್ಟು ಅಂತಃಕರಣವನ್ನೇ ತಿಳಿಸುವ ಶಬ್ದಗಳು. ಅವರ ವೃತ್ತಿಗಳನ್ನೇ ನಾಲ್ಕನೆಯ ಶ್ಲೋಕದಲ್ಲಿ ಕಾಮ, ಸಂಕಲ್ಪ- ಮುಂತಾದ ಹೆಸರುಗಳಿಂದ ತಿಳಿಸಿರುವದು. ಈ ಶ್ಲೋಕದಲ್ಲಿ ಮತ್ತೆ ಧೀ ಶಬ್ದದಿಂದ ತಿಳಿಸಿರುವದೂ ಅದೇ ತತ್ತ್ವವು. ಸಾಕ್ಷಿಯಿಂದ ಈ ಧೀ ಅಥವಾ ಬುದ್ಧಿ-ಎಂಬ ಅಂತಃಕರಣದಲ್ಲಿ ಸಾಕ್ಷಿಯ ಚೈತನ್ಯದ ಛಾಯೆಯು, ಎಂದರೆ ಆಭಾಸವು, ಬಂದು ಸೇರಿಕೊಂಡಿರುತ್ತದೆ. ಈ ಬುದ್ಧಿಯು ತಾನುತಾನೇ ಚೈತನ್ಯವುಳ್ಳದ್ದಲ್ಲವಾದರೂ ಸಾಕ್ಷಿಚೈತನ್ಯದ ಸನ್ನಿಧಿಯಲ್ಲಿ ತಾನೂ ಚೈತನ್ಯ ವುಳ್ಳದ್ದರಂತೆ ಕಾಣಿಸುತ್ತಿರುವದು.

ಈ ಬುದ್ಧಿಯು ನಮಗೆ ಎರಡು ರೂಪದಲ್ಲಿ ಕಾಣಿಸುತ್ತಿರುವದು. ಒಂದು ಅಹಂಕಾರವು, ನಾನು ಎಂಬ ಅರಿವಿಗೆ ಗೋಚರವಾಗುವ ರೂಪವು ; ಮತ್ತೊಂದು ಅಂತಃಕರಣವು[1]. ಇಲ್ಲಿ ಅಂತಃಕರಣವೆಂದರೆ ಒಂದು ಮೂರನೆಯ

1. ಅಂತಃಕರಣದ ವಿಷಯದಲ್ಲಿ ಈ ಪ್ರಕರಣದಲ್ಲಿ ಮಾಡಿರುವ ವಿಭಾಗಗಳ ವಿಷಯಕ್ಕೆ ಪೀಠಿಕೆಯನ್ನು ನೋಡಿ.

ಶ್ಲೋಕಗಳಲ್ಲಿ ಹೇಳಿರುವ ಮಾನಸ, ಮನ- ಎಂಬ ವಸ್ತುವಲ್ಲ ; ಆ ವಸ್ತುವೇ ನಾನು, ನನ್ನ ಕರಣವು- ಎಂದು ಎರಡು ಪಾಲಾಗಿ ತೋರುತ್ತಿರುವದು ಎಂದು ಇಲ್ಲಿ ವಿವರಿಸಿದೆ. ವ್ಯವಹಾರದಲ್ಲಿ 'ನಾನು ನನ್ನ ಮನಸ್ಸಿನಿಂದ ಎಲ್ಲವನ್ನೂ ಅರಿಯುತ್ತೇನೆ' ಎಂದು ತೋರುತ್ತಿರುವದಷ್ಟೆ. ಇಲ್ಲಿ ನಾನು ಎಂಬುದು ನಮ್ಮ ನಿಜವಾದ ಸ್ವರೂಪವಲ್ಲ ; ನಿಜವಾದ ಸ್ವರೂಪವು ಸಾಕ್ಷಿಚೈತನ್ಯವು ; ಈ ನಾನು ಒಟ್ಟುಬುದ್ಧಿಯು ಒಂದಾನೊಂದು ತೋರಿಕೆಯು. ಅದರ ಸಂಬಂಧ ದಿಂದಲೇ 'ನಾನು ಅರಿಯುವವನು' ಎಂಬ ತಿಳಿವು ನಮಗೆ ಆಗುತ್ತಿದೆ. ಇನ್ನು 'ನನ್ನ ಮನಸ್ಸಿನಿಂದ ಅರಿಯುತ್ತೇನೆ' ಎನ್ನುವೆವಲ್ಲ, ಆ ಮನಸ್ಸನ್ನೇ ಇಲ್ಲಿ 'ಅಂತಃಕರಣ' ಎಂದು ಕರೆದಿದೆ. ನಾನು ಅರಿಯುವ ಕರ್ತೃ, ಈ ಕರ್ತೃವಿಗೆ ಅರಿಯುವದಕ್ಕೆ ಸಾಧನವಾಗಿರುವ ಒಳಗಿನ ಕರಣವೇ ನಾವು ಮನಸ್ಸು ಎಂದು ಕರೆದುಕೊಳ್ಳುತ್ತಿರುವದು. ಈ ನಾನು ಮತ್ತು ಕರಣ- ಎರಡರಲ್ಲಿಯೂ ಚೈತನ್ಯದ ಆಭಾಸವು ಇರುತ್ತದೆ ; ಆ ಆಭಾಸದಿಂದಲೇ ನಾವು ಹೊರಗಿನ ವಿಷಯಗಳನ್ನು ಇಂದ್ರಿಯಗಳ ಮೂಲಕವಾಗಿ ಅರಿಯುತ್ತಿರುತ್ತೇವೆ.

**ಛಾಯಾಹಂಕಾರಯೋರೈಕ್ಯಂ ತಪ್ತಾಯಃಪಿಂಡವತ್ ಮತಮ್ ।**
**ತದಹಂಕಾರತಾದಾತ್ಮ್ಯಾದ್ದೇಹಶ್ಚೇತನತಾಮಗಾತ್ ॥ ೭ ॥**

೭. ಛಾಯೆ, ಅಹಂಕಾರ- ಇವೆರಡರ ಐಕ್ಯವು ಕಾದ ಕಬ್ಬಿಣದ ಗಟ್ಟಿಯಂತೆ ಎನ್ನುವರು. ಆ ಅಹಂಕಾರದ ತಾದಾತ್ಮ್ಯ ದಿಂದ ದೇಹವು ಚೈತನ್ಯವನ್ನು ಹೊಂದಿರುತ್ತದೆ.

## ವಿವರಣೆ

ಚಿಚ್ಛಾಯೆ ಮತ್ತು ಅಹಂಕಾರ- ಇವೆರಡೂ ಬೇರೆಬೇರೆಯಾಗಿ ಕಾಣಿಸದೆ ಅಹಂಕಾರವೇ ಚಿದಾಭಾಸವಾಗಿ, ಚಿತ್ತಿನಂತೆಯೇ, ವ್ಯವಹಾರದಲ್ಲಿ ತೋರುತ್ತಿದೆ ಯಷ್ಟೆ. ನಾನು ಚೈತನ್ಯಸ್ವರೂಪನು-ಎಂದು ಅಹಂಕಾರವಿಶಿಷ್ಟಸ್ವರೂಪವನ್ನೇ ಚಿದ್ರೂಪವೆಂದು ನಾವು ಕರೆಯುತ್ತಿರುವದಕ್ಕೆ ಒಂದು ಉದಾಹರಣೆಯನ್ನು ಕೊಡಬಹುದು. ಕಬ್ಬಿಣದ ಗುಂಡನ್ನು ಬೆಂಕಿಯಲ್ಲಿ ಕೆಂಪಗೆ ಕಾಯಿಸಿದಾಗ 'ಕಬ್ಬಿಣವು ಸುಡುತ್ತದೆ' ಎಂಬ ವ್ಯವಹಾರವುಂಟಾಗಿರುತ್ತದೆ ; ಆದರೆ ಅಲ್ಲಿ

ನಿಜವಾಗಿ ಸುಡುವದು ಬೆಂಕಿ, ಕಬ್ಬಿಣವಲ್ಲ. ಹೀಗೆಯೇ 'ನಾನು ಅರಿಯು ತ್ತೇನೆ' ಎಂಬ ವ್ಯವಹಾರದಲ್ಲಿ ನಾನು ಎಂಬುದೇ ಚಿದಾಭಾಸವಾಗಿ ತೋರು ತ್ತಿದ್ದರೂ ಅಲ್ಲಿ ಅರಿಯುವ ಶಕ್ತಿಯು ಅಹಂಕಾರದ್ದಲ್ಲ, ಚೈತನ್ಯಕ್ಕೇ ಸೇರಿದ್ದು.

ಇನ್ನು ಚಿದಾಭಾಸವಾದ ಅಹಂಕಾರದ ಸಂಬಂಧದಿಂದ ಕರಣವಾಗಿರುವ ಮನಸ್ಸೂ ಚಿದಾಭಾಸವಾಗಿ ತೋರುತ್ತದೆ ; ಅದರ ಸಂಬಂಧದಿಂದ ಹೊರಗಿನ ದೇಹವೂ ಚಿದಾಭಾಸವಾಗಿರುತ್ತದೆ. ಅಚೇತನವೇ ಎಂದು ವಿವೇಚನೆಯಲ್ಲಿ ಸ್ಪಷ್ಟಪಡುವದೇಹವುಕೂಡ ಚಿದಾಭಾಸಸಂಬಂಧದಿಂದ ತಾನೂಚಿತ್ತೆಂಬಂತೆಯೇ ಕಾಣಿಸಿಕೊಳ್ಳುತ್ತದೆ. ಆದ್ದರಿಂದಲೇ 'ದೇಹವು ತಾನೇ ತೋರುತ್ತಿದೆ' ಎನ್ನುತ್ತೇವೆ.

ಹೀಗೆ ಚೈತನ್ಯ, ಚಿಚ್ಛಾಯಾಸಹಿತವಾದ ಅಹಂಕಾರ, ತತ್ಸಂಬದ್ಧವಾದ ಒಳಗಿನ ಕರಣ, ಅದರ ಸಂಬಂಧವುಳ್ಳ ದೇಹ- ಇವುಗಳಲ್ಲೆಲ್ಲ ಚೈತನ್ಯಬುದ್ಧಿ ಯು ಅವಿವೇಕಿಗಳಿಗೆ ಉಂಟಾಗುತ್ತಿರುವದು. ನಿಜವಾಗಿ ಸಾಕ್ಷಿಯೊಂದೇ ಚಿದ್ರೂಪವು ; ಮಿಕ್ಕದ್ದೆಲ್ಲ ಚಿದಾಭಾಸವೇ, ಚೈತನ್ಯದಂತೆ ತೋರತಕ್ಕದ್ದೇ.

## ೪. ಅಹಂಕಾರದ ತಾದಾತ್ಮ್ಯತ್ರಯವೂ ಅದರ ನಿವೃತ್ತಿಯೂ

**ಅಹಂಕಾರಸ್ಯ ತಾದಾತ್ಮ್ಯಂ ಚಿಚ್ಛಾಯಾದೇಹಸಾಕ್ಷಿಭಿಃ ।**
**ಸಹಜಂ ಕರ್ಮಜಂ ಭ್ರಾನ್ತಿಜನ್ಯಂ ಚ ತ್ರಿವಿಧಂ ಕ್ರಮಾತ್ ॥ ೮ ॥**

೮. ಚಿಚ್ಛಾಯೆ, ದೇಹ, ಸಾಕ್ಷಿ- ಇವುಗಳೊಡನೆ ಅಹಂಕಾರಕ್ಕೆ ಆಗಿರುವ ತಾದಾತ್ಮ್ಯವು ಕ್ರಮವಾಗಿ ಸಹಜ, ಕರ್ಮಜ, ಭ್ರಾಂತಿಜ- ಎಂದು ಮೂರು ಬಗೆಯಾಗಿರುತ್ತದೆ.

### ವಿವರಣೆ

ಅಹಂಕಾರಸಂಬಂಧದಿಂದ ಆಗಿರುವ ಸಂಸಾರವನ್ನು ತಿಳಿಸುವದಕ್ಕಾಗಿ ಈ ಶ್ಲೋಕವು ಬಂದಿರುತ್ತದೆ. ಅಹಂಕಾರಕ್ಕೂ ಚಿದಾಭಾಸಕ್ಕೂ ಆಗಿರುವ

...ದಾತ್ಮ್ಯವು **ಸಹಜತಾದಾತ್ಮ್ಯವು** ; ಎಂದರೆ ಕಾರಣವನ್ನಪೇಕ್ಷಿಸದೆ ...ಗಿರುವ ತಾದಾತ್ಮ್ಯವು. ಏಕೆಂದರೆ ಅಹಂಕಾರವು ತೋರುವಾಗಲೆಲ್ಲ ಅದು ...ದಾಭಾಸಯುಕ್ತವಾಗಿಯೇ ತೋರುತ್ತದೆ. ಬೆಂಕಿ, ಕಬ್ಬಿಣದ ಗುಂಡು–...ರಡನ್ನೂ ಬೇರೆಬೇರೆ ನೋಡಿ ಆಮೇಲೆ ಅವುಗಳಿಗೆ ಸಂಬಂಧವಾಗಿದೆ ...ಂಬುದನ್ನು ನೋಡಬಹುದು ; ಮತ್ತೆ ಕಬ್ಬಿಣಕ್ಕೂ ಬೆಂಕಿಗೂ ಸಂಬಂಧವು ...ಪ್ಪಿಹೋದದ್ದನ್ನೂ ಕಾಣಬಹುದು. ಆದರೆ ಇದು ಅಹಂಕಾರ, ಇದು ಚಿದಾ ...ಭಾಸ- ಎಂದು ವಿಂಗಡಿಸಿ ನೋಡುವದಕ್ಕೂ ಆಮೇಲೆ ಅವೆರಡಕ್ಕೂ ತಾದಾತ್ಮ್ಯ ...ವಾಗಿದೆಯೆಂದು ಕಲ್ಪಿಸುವದಕ್ಕೂ ಬರುವದಿಲ್ಲ. ಆದ್ದರಿಂದ ಇದು ಸಹಜ ತಾದಾತ್ಮ್ಯವಾಯಿತು.

ಅಹಂಕಾರಕ್ಕೂ ದೇಹಕ್ಕೂ ಇರುವ ತಾದಾತ್ಮ್ಯವು **ಕರ್ಮಜತಾದಾತ್ಮ್ಯವು** ; ಎಂದರೆ ಹಿಂದೆ ಮಾಡಿರುವ ಕರ್ಮವೇ ಈ ದೇಹಕ್ಕೂ ಅಹಂಕಾರಕ್ಕೂ ಆಗಿರುವ ಸಂಬಂಧಕ್ಕೆ ಕಾರಣವಾಗಿರುತ್ತದೆ. ನಾನು ಕರ್ಮವನ್ನು ಮಾಡುತ್ತೇನೆ ಎಂದು ಈಗ ಶರೀರಕ್ಕೂ ಅಹಂಕಾರಕ್ಕೂ ತಾದಾತ್ಮ್ಯಸಂಬಂಧವು ತೋರುತ್ತಿರುವದಷ್ಟೆ ; ಆದರೆ ನಿಜವಾಗಿ ದೇಹವು ಬೇರೆ, ನಾನು ಎಂಬ ಅಹಂಕಾರವೇ ಬೇರೆ. ಹೀಗಿದ್ದರೂ ಇದೇ ಅಹಂಕಾರದಿಂದೊಡಗೂಡಿದ ಜೀವನು ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮದ ಫಲವಾಗಿ ಈ ದೇಹವನ್ನು ಪಡೆದುಕೊಂಡಿರುತ್ತಾನೆ. ಆದ್ದರಿಂದ ಈ ದೇಹಕ್ಕೂ ಅಹಂಕಾರಕ್ಕೂ ತೋರುತ್ತಿರುವ ತಾದಾತ್ಮ್ಯಕ್ಕೆ ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮವು ಕಾರಣವಾಯಿತು.

ಇನ್ನು ಅಹಂಕಾರಕ್ಕೂ ಸಾಕ್ಷಿಗೂ ಆಗಿರುವ ಸಂಬಂಧವು **ಭ್ರಾಂತಿಜತಾದಾತ್ಮ್ಯವು** ; ಎಂದರೆ ಅಹಂಕಾರಕ್ಕೂ ಸಾಕ್ಷಿಗೂ ಯಾವ ಸಂಬಂಧವೂ ನಿಜವಾಗಿ ಇಲ್ಲದಿದ್ದರೂ 'ನಾನು' ಎಂದು ಸಾಕ್ಷ್ಯಹಂಕಾರಗಳೆರಡನ್ನೂ, ಭ್ರಾಂತಿಯಿಂದಲೇ ಒಂದುಮಾಡಿಕೊಂಡು ವ್ಯವಹರಿಸುತ್ತಿದಾರೆ. ಸರಿಯಾಗಿ ನೋಡಿದರೆ ಸಾಕ್ಷಿಯು ವಿಷಯಿ, ಅಹಂಕಾರವು ಅದಕ್ಕೆ ವಿಷಯವಾಗಿದೆ; ಸಾಕ್ಷಿಸಾಕ್ಷ್ಯಗಳ ವಿವೇಚನೆಯಿಲ್ಲದ ಭ್ರಾಂತಿಯಿಂದಲೇ ಅವುಗಳಿಗೆ ತಾದಾತ್ಮ್ಯವನ್ನು ಅಜ್ಞರು ಕಲ್ಪಿಸಿಕೊಂಡಿರುತ್ತಾರೆ-ಎಂಬುದು ಗ್ರಂಥಕಾರರ ಆಶಯವು[1].

1. ತಾದಾತ್ಮ್ಯತ್ರಯದ ವಿಷಯಕ್ಕೆ ಪೀಠಿಕೆಯನ್ನು ನೋಡಿ.

ಇಲ್ಲಿ ಇನ್ನೂಷ್ಟು ಒಳಹೊಕ್ಕು ನೋಡಿದರೆ ಅಹಂಕಾರಕ್ಕೂ ದೇಹಕ್ಕೂ ಇರುವ ಸಂಬಂಧವೂ ಭ್ರಾಂತಿಜತಾದಾತ್ಮ್ಯವೆಂದೇ ಏರ್ಪಡುತ್ತದೆ. ಏಕೆಂದರೆ ಈ ಜನ್ಮದಲ್ಲಿ ದೇಹಾಹಂಕಾರಗಳಿಗೆ ತಾದಾತ್ಮ್ಯಸಂಬಂಧವಿರುವದೆಂಬುದೇ ಮೊದಲು ಭ್ರಾಂತಿಜವಾಗಿರುತ್ತದೆ. ಏಕೆಂದರೆ ನಾನು ದೇಹ–ಎಂದು ಯಾರೂ ವ್ಯವಹರಿಸುವದಿಲ್ಲ ; ಇದು ನನ್ನ ದೇಹವು ಎಂದೇ ತಿಳಿಯುತ್ತಾರೆ. ದೇಹವು ಬಾಲ್ಯಾದಿಗಳನ್ನು ಅನುಭವಿಸುತ್ತಿದ್ದರೂ ನಾನು ಆಗ ಬಾಲಕನಾಗಿದ್ದೆನು, ಈಗ ವೃದ್ಧನಾಗಿದ್ದೇನೆ–ಎಂದೇ ಜನರು ವ್ಯವಹರಿಸುತ್ತಿರುವದರಿಂದ ದೇಹವನ್ನೂ ಅಹಂಕಾರವನ್ನೂ ವಿಂಗಡಿಸಿ ಬಾಲ್ಯವಾರ್ಧಕಗಳು ಕೇವಲ ಅಭಿಮಾನದಿಂದ ಅಹಂಕಾರದಲ್ಲಿ ತೋರುತ್ತಿವೆ, ನಿಜವಾಗಿ ಅವು ದೇಹಕ್ಕೇ ಸೇರಿದವುಗಳು ಎಂದು ಸಿದ್ಧವಾಗುತ್ತದೆ. ಹೀಗೆಯೇ ಹಿಂದಿನ ಜನ್ಮದಲ್ಲಿಯೂ ಆ ದೇಹಕ್ಕೂ ಅಹಂಕಾರಕ್ಕೂ ಇದ್ದ ಸಂಬಂಧವೂ ಅಭಿಮಾನಮಾತ್ರದಿಂದಾಗಿತ್ತಾದ್ದರಿಂದ ಆ ಜನ್ಮದ ದೇಹದಿಂದ ಕರ್ಮವನ್ನು ಮಾಡಿ ಈ ಜನ್ಮದ ದೇಹವನ್ನು ಪಡೆದಿರುತ್ತೇನೆಂಬುದೂ ಭ್ರಾಂತಿಯೆಂದೇ ಆಗುತ್ತದೆ. ಆದ್ದರಿಂದ ಕರ್ಮಜತಾದಾತ್ಮ್ಯವೂ ಭ್ರಾಂತಿಜವೆಂದೇ ಹೇಳಬೇಕಾಯಿತು. ಆದರೂ ವ್ಯವಹಾರದಲ್ಲಿ ಶರೀರೇಂದ್ರಿಯಗಳ ಸಂಘಾತದಿಂದೊಡಗೂಡಿರುವ ಅಹಂಕಾರವಿಶಿಷ್ಟನಾದ ಆತ್ಮನೇ 'ನಾನು' ಎಂದು ವ್ಯವಹರಿಸಲ್ಪಡುತ್ತಿರುತ್ತಾನಾದ್ದರಿಂದ ಜೀವನು ಒಂದು ಜನ್ಮದ ದೇಹದಿಂದ ಮಾಡಿದ ಪುಣ್ಯಪಾಪಗಳ ಫಲವನ್ನು ಮತ್ತೊಂದು ಜನ್ಮದಲ್ಲಿ ಅನುಭವಿಸುತ್ತಾನೆ ಎಂದು ಇಟ್ಟುಕೊಂಡೇ ಕರ್ಮಶಾಸ್ತ್ರವು ಕ್ರಿಯಾಕಾರಕಫಲಗಳ ಸಂಬಂಧವನ್ನು ತಿಳಿಸುತ್ತಿರುತ್ತದೆ. ಆದ್ದರಿಂದ ಈ ವ್ಯವಹಾರವನ್ನು ಇಟ್ಟುಕೊಂಡು ಅಹಂಕಾರಕ್ಕೂ ದೇಹಕ್ಕೂ ಆಗಿರುವ ಸಂಬಂಧವು ಕರ್ಮಜತಾದಾತ್ಮ್ಯವು ಎಂದು ಹೇಳಬಹುದಾಗಿರುತ್ತದೆ.

**ಸಂಬನ್ಧಿನೋಃ ಸತೋರ್ನಾಸ್ತಿ ನಿವೃತ್ತಿಃ ಸಹಜಸ್ಯ ತು ।**
**ಕರ್ಮಕ್ಷಯಾತ್ ಪ್ರಬೋಧಾಚ್ಚ ನಿವರ್ತೇತೇ ಕ್ರಮಾದುಭೇ ॥೯॥**

೯. ಸಂಬಂಧಿಗಳೆರಡಕ್ಕೂ ಇರುವ ಸಹಜ (ತಾದಾತ್ಮ್ಯಕ್ಕೆ) ನಿವೃತ್ತಿಯಿಲ್ಲ, (ಮಿಕ್ಕ) ಎರಡು ತಾದಾತ್ಮ್ಯಗಳೂ ಕ್ರಮವಾಗಿ ಕರ್ಮಕ್ಷಯದಿಂದಲೂ ಜ್ಞಾನದಿಂದಲೂ ಹೋಗುವವು.

## ವಿವರಣೆ

ಮೇಲೆ ಹೇಳಿದ ಮೂರು ತಾದಾತ್ಮ್ಯಗಳಲ್ಲಿ ಅಹಂಕಾರಕ್ಕೂ ಚಿದಾಭಾಸಕ್ಕೂ ಇರುವ ಸಹಜಸಂಬಂಧಕ್ಕೆ ನಿವೃತ್ತಿ ಎಂಬುದಿಲ್ಲ. ಏಕೆಂದರೆ ಅಹಂಕಾರವು ತೋರುವಾಗ ಸಹಜತಾದಾತ್ಮ್ಯವು ಇದ್ದೇ ಇರುತ್ತದೆ. ಆದರೆ ಅಹಂಕಾರಕ್ಕೂ ದೇಹಕ್ಕೂ ಇರುವ ಕರ್ಮಜತಾದಾತ್ಮ್ಯವು ಕರ್ಮವು ಇರುವವರೆಗೆ ಮಾತ್ರ ತೋರುತ್ತಿರುತ್ತದೆ. ಪ್ರಾರಬ್ಧಕರ್ಮವು ಇರುವವರೆಗೂ ಈ ದೇಹವೇ ತಾನೆಂಬ ಬುದ್ಧಿಯು ಇರುತ್ತಿದ್ದರೂ ಆ ಕರ್ಮವು ಕ್ಷಯವಾಗುತ್ತಲೂ ಆ ತಾದಾತ್ಮ್ಯವೂ ಹೋಗಿಬಿಡುತ್ತದೆ; ಏಕೆಂದರೆ ಆ ಬಳಿಕ ಮತ್ತೊಂದು ಶರೀರದೊಡನೆ ಅದೇ ಅಹಂಕಾರಕ್ಕೆ ಕರ್ಮಜತಾದಾತ್ಮ್ಯವಾಗುತ್ತದೆ ಬಾಡಿಗೆಯ ಮನೆಯವರು ಮತ್ತೆಮತ್ತೆ ಬೇರೆಬೇರೆಯ ಮನೆಗಳಲ್ಲಿ ನಮ್ಮದು ಎಂದು ಅಭಿಮಾನಪಡುತ್ತಿರುವಂತೆ ಈ ಜೀವನೂ ಹೊಸಹೊಸ ದೇಹಗಳಲ್ಲಿ ತಾದಾತ್ಮ್ಯ ಸಂಬಂಧವನ್ನು ಅನುಭವಿಸುತ್ತಿರುತ್ತಾನೆ. ಇನ್ನು ಸಾಕ್ಷ್ಯಹಂಕಾರಗಳಿಗೆ ಇರುವ ತಾದಾತ್ಮ್ಯವು ನಿಜವಾಗಿ ಯಾವಾಗಲೂ ಇರುವದೇ ಇಲ್ಲವಾದ್ದರಿಂದ ಅಹಂಕಾರವು ಸಾಕ್ಷ್ಯವೇ- ಎಂಬ ಜ್ಞಾನವು ಉಂಟಾದಕೂಡಲೆ ಅದು ಬಾಧಿತವಾಗಿ ಹೋಗಿಬಿಡುವದು. ಜ್ಞಾನವುಂಟಾದ ಮೇಲೂ ಚಿದಾಭಾಸಯುಕ್ತವಾದ ಅಹಂಕಾರವು ತೋರುತ್ತಿರಬಹುದು; ಆದರೆ ಜ್ಞಾನಿಯು ಮಾತ್ರ ಇನ್ನು ಮುಂದೆ ಆ ಸಾಕ್ಷ್ಯದಲ್ಲಿ ಅಹಂಭಾವವನ್ನು ಎಂದಿಗೂ ಮಾಡಿಕೊಳ್ಳುವದಿಲ್ಲ ಎಂಬಿದು ಶ್ಲೋಕದ ಅಭಿಪ್ರಾಯ.

ಇಲ್ಲಿ ದೇಹ, ಅಹಂಕಾರ, ಅದರಲ್ಲಿ ಕಾಣುವ ಚಿದಾಭಾಸ- ಇವೆಲ್ಲವೂ ಅಜ್ಞಾನಿಗಳ ದೃಷ್ಟಿಯಿಂದ ಸತ್ಯವಾಗಿದ್ದರೂ ಆತ್ಮಚೈತನ್ಯಕ್ಕೆಸಂಬಂಧಪಟ್ಟಂತೆ ತೋರುತ್ತಿರುವ ಅಹಂಕಾರವು ಸಾಕ್ಷ್ಯಮಾತ್ರವೆಂದೂ ಅದಕ್ಕೆ ಸಾಕ್ಷಿಗಿಂತ ವ್ಯತಿರಿಕ್ತವಾದ ಸತ್ತೆಯು ಇಲ್ಲಷ್ಟೇ ಇಲ್ಲವೆಂದೂ ಜ್ಞಾನವುಂಟಾದ ಆತ್ಮಜ್ಞಾನಿಗೆ ಮುಂದೆ ಜ್ಞಾನದ ದೃಷ್ಟಿಯಿಂದ ಯಾವ ತಾದಾತ್ಮ್ಯವೂ ಇರುವದಿಲ್ಲ ಎಂಬುದೇ ಯುಕ್ತವು. ಕನ್ನಡಿಯಲ್ಲಿ ತೋರುವ ಪ್ರತಿಬಿಂಬವು ಮತ್ತೊಂದು ಬೇರೆಯ ಮಗು ಎಂದು ತಪ್ಪಾಗಿ ತಿಳಿದುಕೊಂಡಿದ್ದ ಮಗುವಿಗೆ ವಯಸ್ಸಾಗುತ್ತಲೂ ಇದು ಪ್ರತಿಬಿಂಬಮಾತ್ರವು, ಇದು ಸತ್ಯಪದಾರ್ಥವಲ್ಲ-ಎಂಬ ಜ್ಞಾನವು ಉದಯಿಸಿದ ಕೂಡಲೆ ಆದರ ಸತ್ಯತ್ವವು ಬಾಧಿತವಾಗಿ ಹೋಗಿಬಿಡುವದಿಲ್ಲವೆ? ಹಾಗೆಯೇ

ಅಹಂಕಾರಾದಿಗಳ ತಾದಾತ್ಮ್ಯವೂ—ಎಂದು ಪರಮಾರ್ಥದೃಷ್ಟಿಯಿಂದ ಎಲ್ಲವೂ ನಾಶವಾಗಿಯೇಬಿಡುವದೆಂದು ಹೇಳಿಬಿಡಬಹುದಿತ್ತು. ಆದರೂ ಪ್ರತೀತಿಯ ದೃಷ್ಟಿಯಿಂದ ಕರ್ಮಜತಾದಾತ್ಮ್ಯವು ಕರ್ಮವಿರುವವರೆಗೂ ಇರುತ್ತದೆ ಯೆಂದು ಗ್ರಂಥಕಾರರು ಎಣಿಸಿರುವಂತೆ ತೋರುತ್ತದೆ.

## ೫. ಅವಸ್ಥಾತ್ರಯವು ಲಿಙ್ಗಕ್ಕೆ, ಸಾಕ್ಷಿಗಲ್ಲ

**ಅಹಂಕಾರಲಯೇ ಸುಪ್ತೌ ಭವೇದ್ದೇಹೋಽಪ್ಯಚೇತನಃ |**
**ಅಹಂಕಾರವಿಕಾಸಾರ್ಧಃ ಸ್ವಪ್ನಃ ಸರ್ವಸ್ತು ಜಾಗರಃ || ೧೦ ||**

೧೦. ಸುಷುಪ್ತಿಯಲ್ಲಿ ಅಹಂಕಾರವು ಲಯವಾಗಲು ದೇಹವೂ ಅಚೇತನವಾಗುತ್ತದೆ. ಸ್ವಪ್ನವು ಅಹಂಕಾರದ ಅರ್ಧವಿಕಾಸ ವಾಗಿರುತ್ತದೆ, ಎಚ್ಚರವು ಪೂರ್ಣವಿಕಾಸವಾಗಿರುತ್ತದೆ.

### ವಿವರಣೆ

ಅಹಂಕಾರವು ಯಾವಾಗಲೂ ಒಂದೇ ರೂಪದಲ್ಲಿರುವದಿಲ್ಲ. ಅದು **ಸುಷುಪ್ತಿಯಲ್ಲಿ**, ಎಂದರೆ ಕನಸಿಲ್ಲದ ಗಾಢನಿದ್ರೆಯಲ್ಲಿ, ಲಯವಾಗಿರುತ್ತದೆ. ಚಿದಾಭಾಸಸಹಿತವಾದ ಅಹಂಕಾರತಾದಾತ್ಮ್ಯದಿಂದಲೇ ದೇಹವು ಚೇತನ ವಾಗಿ ಕಾಣುತ್ತಿರುತ್ತದೆ ಎಂದು ಏಳನೆಯ ಶ್ಲೋಕದಲ್ಲಿ ಹೇಳಿದ್ದಾಗಿದೆ. ಸುಷುಪ್ತಿಯಲ್ಲಿ ಅಹಂಕಾರವಿಲ್ಲವಾದ್ದರಿಂದ ಈ ತಾದಾತ್ಮ್ಯಕ್ಕೂ ಇಲ್ಲಿ ಅವಕಾಶ ವಿಲ್ಲ ; ಆಗ ದೇಹವೂ ಅಚೇತನವಾಗಿರುತ್ತದೆ.

**ಸ್ವಪ್ನದಲ್ಲಿ** ಅಹಂಕಾರವು ಅರ್ಧವಾಗಿ ಅರಳಿರುತ್ತದೆ. ಏಕೆಂದರೆ ಆಗ ಅದು ಇಂದ್ರಿಯಗಳು, ದೇಹ- ಇವುಗಳೊಡನೆ ಸಂಬಂಧವನ್ನು ಪಡೆದು ಬಾಹ್ಯ ವ್ಯಾಪಾರವನ್ನು ಮಾಡುವದಕ್ಕೆ ಸಮರ್ಥವಾಗಿರುವದಿಲ್ಲ.

**ಜಾಗರಾವಸ್ಥೆಯಲ್ಲಿ** ಅಹಂಕಾರವು ಪೂರ್ಣವಾಗಿ ಅರಳಿಕೊಂಡಿರು ತ್ತದೆ ; ಎಂದರೆ ಆಗ ಅಹಂಕಾರವು ಮನಸ್ಸು, ಇಂದ್ರಿಯಗಳು, ದೇಹ— ಎಲ್ಲವನ್ನೂ ಉಪಯೋಗಿಸಿಕೊಂಡು ವ್ಯವಹರಿಸುತ್ತಿರುತ್ತದೆ.

**ಅನ್ತಃಕರಣವೃತ್ತಿಶ್ಚ ಚಿತಿಚ್ಛಾಯೈಕ್ಯಮಾಗತಾ |**
**ವಾಸನಾಃ ಕಲ್ಪಯೇತ್ ಸ್ವಪ್ನೇ ಬೋಧೇऽಕ್ಷೈರ್ವಿಷಯಾನ್ ಬಹಿಃ॥**

೧೧. ಅಂತಃಕರಣವೃತ್ತಿಯು ಚಿಚ್ಛಾಯೆಯ ಐಕ್ಯವನ್ನು ಹೊಂದಿ ಸ್ವಪ್ನದಲ್ಲಿ ವಾಸನೆಗಳನ್ನು ಕಲ್ಪಿಸುತ್ತಿರುವದು ; ಎಚ್ಚರದಲ್ಲಿ ಇಂದ್ರಿಯಗಳ ಮೂಲಕ ಹೊರಗಿನ ವಿಷಯಗಳನ್ನು ಕಲ್ಪಿಸುತ್ತದೆ.

## ವಿವರಣೆ

ಸ್ವಪ್ನದಲ್ಲಿ ಅಹಂಕಾರವು ಅರ್ಧ ಅರಳಿರುತ್ತದೆ, ಜಾಗ್ರದವಸ್ಥೆಯಲ್ಲಿ ಪೂರ್ಣವಾಗಿ ವಿಕಾಸವಾಗಿರುತ್ತದೆ–ಎಂಬುದು ಹೇಗೆಂಬುದನ್ನು ಈ ಶ್ಲೋಕದಲ್ಲಿ ತಿಳಿಸಿಕೊಟ್ಟಿದೆ.

ಚಿಚ್ಛಾಯೆಯ ಸಂಬಂಧದಿಂದ ಬುದ್ಧಿಯು ಅಹಂಕೃತಿ, ಅಂತಃಕರಣ- ಎಂದು ಎರಡು ರೂಪವಾಗಿ ತೋರುತ್ತದೆ– ಎಂದು ಆರನೆಯ ಶ್ಲೋಕದಲ್ಲಿ ಹೇಳಿತ್ತಷ್ಟೆ. ಆ ಶ್ಲೋಕದಲ್ಲಿ ಅಂತಃಕರಣ ಎಂದರೆ ಒಳಗಿನ ಕರಣ ಎಂದೇ ಅರ್ಥವೆಂದು ನಾವು ವಿವರಿಸಿರುವದನ್ನು ನೆನಪಿನಲ್ಲಿಡಬೇಕು. ಸ್ವಪ್ನದಲ್ಲಿಯೂ ಜಾಗ್ರದವಸ್ಥೆಯಲ್ಲಿಯೂ ಅಹಂಕಾರವು ನಾನು ಎಂಬ ರೂಪದಲ್ಲಿ ತೋರಿಕೊಳ್ಳುತ್ತಿರುತ್ತದೆ ; ಅಂತಃಕರಣವು ರೂಢಿಯಲ್ಲಿ ನನ್ನ ಮನಸ್ಸು ಎಂದು ಜನರು ಕರೆಯುವ ಕರಣದ ರೂಪದಲ್ಲಿ ತೋರುತ್ತಿರುತ್ತದೆ.

ಈಗ ಎಚ್ಚರಕನಸುಗಳಿಗಿರುವ ತಾರತಮ್ಯವನ್ನು ಮನಸ್ಸಿಗೆ ತಂದುಕೊಳ್ಳೋಣ. ಎಚ್ಚರದಲ್ಲಿ ನಾನು (ಅಹಂಕಾರ), ನನ್ನ ಮನಸ್ಸು (ಕರಣ), ಇಂದ್ರಿಯಗಳು–ಇವೆಲ್ಲವುಗಳೂ ದೇಹವನ್ನಾಶ್ರಯಿಸಿಕೊಂಡಿರುವಂತೆ ತೋರುತ್ತದೆ. ಕರಣದ ವೃತ್ತಿಗಳೇ ಇಂದ್ರಿಯಗಳ ಮೂಲಕವಾಗಿ ಹೋಗಿ ಹೊರಗೆ ವಿಷಯಗಳನ್ನು ಕಾಣುತ್ತಿರುತ್ತವೆ.ಗ್ರಂಥದಲ್ಲಿ ಇಂದ್ರಿಯಗಳ ಮೂಲಕ ಕರಣವು ವಿಷಯಗಳನ್ನು ಕಲ್ಪಿಸುತ್ತದೆ ಎಂದೇ ಬರೆದಿದೆಯಾದರೂ ವ್ಯವಹಾರದಲ್ಲಿ ವಿಷಯಗಳು ಹೊರಗೆ ಇರುವವೆಂದೂ ಇಂದ್ರಿಯಗಳ ಸಂಬಂಧದಿಂದ ಅವು

ನಮಗೆ ಗೋಚರವಾಗುವವೆಂದೂ ತೋರುತ್ತಿರುವದು ಎಲ್ಲರ ಅನುಭವದಲ್ಲಿಯೂ ಇರುತ್ತದೆ. 1

ಇನ್ನು ಕನಸಿನಲ್ಲಿಯೋ ಎಂದರೆ ಎಚ್ಚರದ ಇಂದ್ರಿಯಗಳಾಗಲಿ ದೇಹವಾಗಲಿ ಅಲ್ಲಿ ಕೆಲಸಮಾಡುತ್ತಿರುವದಿಲ್ಲ; ಇವೆರಡೂ ನಿಶ್ಚೇಷ್ಟವಾಗಿರುತ್ತವೆ. ಆದರೆ ಒಳಗಿನ ಕರಣವು ಮಾತ್ರ ಎಚ್ಚರದ ವಾಸನೆಗಳನ್ನೇ ವಿಷಯಗಳಂತೆ ಕಲ್ಪಿಸಿಕೊಳ್ಳುತ್ತಿರುವದು. ಕನಸಿನಲ್ಲಿ ನಮಗೆ ವಿಷಯಗಳು ನಿಜವಾಗಿಯೇ ಹೊರಗೆ ಇರುವಂತೆ ತೋರಿದರೂ ಎಚ್ಚರವಾಗುತ್ತಲೂ 'ಅವು ಯಾವವೂ ನಿಜವಾಗಿರಲಿಲ್ಲ; ವಾಸನಾಮಾತ್ರನೇ ಹಾಗೆ ತೋರಿಕೊಂಡಿತು' ಎಂದೇ ನಮಗೆ ತೋರುವದು. ಆದ್ದರಿಂದ ಈ ವ್ಯವಹಾರದ ದೃಷ್ಟಿಯಿಂದ ನೋಡಿದರೆ ಸ್ವಪ್ನದಲ್ಲಿ ಅರ್ಧವಿಕಾಸದಂತೆ ಆಯಿತು. ಏಕೆಂದರೆ ಒಳಗಿನ ಕರಣವು ಮಾತ್ರ ಅಲ್ಲಿ ವ್ಯಾಪಾರಮಾಡುತ್ತಿರುತ್ತದೆ; ಇಂದ್ರಿಯಗಳಾಗಲಿ ವಿಷಯಗಳಾಗಲಿ ಇರುವದಿಲ್ಲ. ಅಲ್ಲಿ ಕಾಣುವದು ಬರಿಯ ತೋರಿಕೆಯಾಗಿರುತ್ತವೆ.

**ಮನೋಽಹಂಕೃತ್ಯುಪಾದಾನಂ ಲಿಙ್ಗಮೇಕಂ ಜಡಾತ್ಮಕಮ್ ।**
**ಅವಸ್ಥಾತ್ರಯಮನ್ವೇತಿ ಜಾಯತೇ ಮ್ರಿಯತೇ ತಥಾ ॥ ೧೨ ॥**

೧೨. ಮನಸ್ಸು, ಅಹಂಕಾರ- ಇವಕ್ಕೆ ಉಪಾದಾನಕಾರಣವಾಗಿರುವ ಜಡಾತ್ಮಕವಾಗಿರುವ ಲಿಂಗವು ತಾನೊಂದೇ ಅವಸ್ಥಾತ್ರಯವನ್ನು ಹೊಂದುತ್ತದೆ; ಹುಟ್ಟುತ್ತದೆ, ಸಾಯುತ್ತದೆ.

## ವಿವರಣೆ

ಇಲ್ಲಿ ಮನಸ್ಸು ಎಂದಿರುವದು ಆರನೆಯ ಶ್ಲೋಕದಲ್ಲಿ ಹೇಳಿರುವ ಅಂತಃಕರಣವು. ಅಹಂಕಾರರೂಪವಾದ ನಾನು, ಮತ್ತು ಅದಕ್ಕೆ ಕರಣವಾಗಿರುವ ಮನಸ್ಸು- ಇವೆರಡೂ ಚಿದಾಭಾಸಯುಕ್ತವಾಗಿ ಅವಸ್ಥೆಗಳನ್ನು ಅನುಭವಿಸು

1. ನಿಜವಾಗಿ ನೋಡಿದರೆ ಎಚ್ಚರಕನಸುಗಳೆರಡೂ ಸ್ವಪ್ನವೇ ಎಂದು ವೇದಾಂತಸಿದ್ಧಾಂತವಿರುತ್ತದೆ; ಆದ್ದರಿಂದ ಕನಸಿನಂತೆ ಎಚ್ಚರದಲ್ಲಿಯೂ ಎಲ್ಲವೂ ಕಲ್ಪಿತವೇ ಎಂದೂ ಹೇಳಬಹುದು. ಆದರೆ ಈ ಪರಮಸಿದ್ಧಾಂತದ ಪ್ರಕ್ರಿಯೆಯನ್ನು ಈ ಪ್ರಕರಣದಲ್ಲಿ ಉಪಯೋಗಿಸಿಕೊಂಡಿರುವದಿಲ್ಲ. ಪೀಠಿಕೆಯನ್ನು ನೋಡಿ.

ತ್ತಿರುತ್ತವೆ, ಇವೆರಡಕ್ಕೂ ಮೂಲವಾಗಿರುವ ಒಟ್ಟು ಅಂತಃಕರಣವನ್ನೇ ಇಲ್ಲಿ ಲಿಂಗವೆಂದು ಕರೆದಿರುತ್ತದೆ. ಈ ಲಿಂಗಕ್ಕೇ ಅವಸ್ಥಾತ್ರಯದ ಅನುಭವವೇ ಹೊರತು ಸಾಕ್ಷಿಗೆ ಯಾವ ಅವಸ್ಥಾತ್ರಯವೂ ಇಲ್ಲ- ಎಂಬುದು ಇಲ್ಲಿಯ ವರೆಗಿನ ಗ್ರಂಥದ ಸಾರ.

## ೬. ಬ್ರಹ್ಮವೂ ಮಾಯೆಯೂ

**ಶಕ್ತಿದ್ವಯಂ ಹಿ ಮಾಯಾಯಾ ವಿಕ್ಷೇಪಾವೃತಿರೂಪಕಮ್ |**
**ವಿಕ್ಷೇಪಶಕ್ತಿರ್ಲಿಂಗಾದಿ ಬ್ರಹ್ಮಾಂಡಾನ್ತಂ ಜಗತ್ ಸೃಜೇತ್ ॥ ೧೩ ॥**

೧೩. ಮಾಯೆಗೆ ವಿಕ್ಷೇಪ, ಆವರಣ- ಎಂಬ ರೂಪದ ಶಕ್ತಿದ್ವಯವಿರುತ್ತದೆ, ವಿಕ್ಷೇಪಶಕ್ತಿಯು ಲಿಂಗವನ್ನು ಮೊದಲು ಮಾಡಿಕೊಂಡು ಬ್ರಹ್ಮಾಂಡದವರೆಗಿನ ಜಗತ್ತನ್ನು ಸೃಷ್ಟಿಸುತ್ತದೆ.

### ವಿವರಣೆ

ಇದುವರೆಗೆ ಜೀವತತ್ತ್ವವನ್ನು ಕುರಿತು ಹೇಳಿದ್ದಾಯಿತು. ಈಗ ಜಗತ್ತತ್ತ್ವವನ್ನು ಪ್ರಸ್ತಾಪಿಸಿದೆ. ಬ್ರಹ್ಮದಲ್ಲಿರುವ ಮಾಯೆಯು ಅದರ ಅಖಂಡತ್ವವನ್ನು ಮರೆಮಾಚಿ ಜೀವಜಗತ್ತುಗಳನ್ನು ಕಲ್ಪಿಸಿರುವದೆಂಬುದು ಈ ಗ್ರಂಥಕಾರರ ಆಶಯವೆಂಬುದು ಮುಂದೆ ಮೂವತ್ತೈದನೆಯ ಶ್ಲೋಕದಲ್ಲಿ ಸ್ಪಷ್ಟವಾಗುವದು. ಆದ್ದರಿಂದ ಜಗಜ್ಜೀವರಿಗೆ ಕಾರಣವಾಗಿರುವ ಮಾಯೆಯ ವಿಚಾರವನ್ನು ಇಲ್ಲಿ ಪ್ರಾರಂಭಿಸಿರುತ್ತದೆ.

**ಸೃಷ್ಟಿರ್ನಾಮ ಬ್ರಹ್ಮರೂಪೇ ಸಚ್ಚಿದಾನನ್ದವಸ್ತುನಿ |**
**ಅಬ್ಧೌ ಫೇನಾದಿವತ್ ಸರ್ವನಾಮರೂಪಪ್ರಸಾರಣಾ ॥ ೧೪ ॥**

೧೪. ಸೃಷ್ಟಿ ಎಂದರೆ ಸಮುದ್ರದಲ್ಲಿ ನೊರೆ ಮುಂತಾದವುಗಳು ಹರಡಿಕೊಳ್ಳುವಂತೆ ಬ್ರಹ್ಮಸ್ವರೂಪವಾದ ಸಚ್ಚಿದಾನಂದ ವಸ್ತುವಿನಲ್ಲಿ ಸಕಲನಾಮರೂಪಗಳೂ ಹರಡಿಕೊಳ್ಳುವದು.

## ವಿವರಣೆ

ಸೃಷ್ಟಿಯೆಂದರೆ ಮಾಯೆಯ ವಿಕ್ಷೇಪಶಕ್ತಿಯಿಂದ ನಾಮರೂಪಗಳು ಬಿಡಿಬಿಡಿಯಾಗಿ ತೋರಿಕೊಳ್ಳುವದು. ಈ ನಾಮರೂಪಗಳು ಸಮುದ್ರದಲ್ಲಿ ತೋರುವ ನೊರೆ ಮುಂತಾದವುಗಳಂತೆ ಎಂದದ್ದರಿಂದ ಅವು ನಿಜವಾಗಿ ಸಮುದ್ರಕ್ಕಿಂತ ಬೇರೆಯಲ್ಲ ಎಂಬ ಭಾವವೂ ಸೂಚಿತವಾಗುತ್ತದೆ. ಆದರೆ ನಾಮರೂಪಗಳು ಬ್ರಹ್ಮಕ್ಕಿಂತ ಭಿನ್ನವೂ ಅಲ್ಲ, ಅಭಿನ್ನವೂ ಅಲ್ಲ– ಎಂಬ ಅನಿರ್ವಚನೀಯವಾದವನ್ನು ಈ ಪ್ರಕರಣದಲ್ಲಿ ಉಪಯೋಗಿಸಿಕೊಂಡಿರುವದಿಲ್ಲ.

**ಅನ್ತರ್ದೃಗ್ದೃಶ್ಯಭೇದಂ (ಚ?) ಬಹಿಶ್ಚ ಬ್ರಹ್ಮಸರ್ಗಯೋಃ ।**
**ಆವೃಣೋತ್ಯಪರಾ ಶಕ್ತಿಃ ಸಾ ಸಂಸಾರಸ್ಯ ಕಾರಣಮ್ ॥ ೧೫ ॥**

೧೫. ಒಳಗೆ ದೃಕ್ಕುದೃಶ್ಯಗಳ ಭೇದವನ್ನೂ ಮತ್ತು ಹೊರಗೆ ಬ್ರಹ್ಮ, ಸೃಷ್ಟಿ– ಇವುಗಳಿಗಿರುವ ಭೇದವನ್ನೂ ಮಾಯೆಯ ಮತ್ತೊಂದು ಶಕ್ತಿಯು ಮುಸುಕಿಕೊಂಡಿರುವದು. ಅದೇ ಸಂಸಾರಕ್ಕೆ ಕಾರಣವು.

## ವಿವರಣೆ

ಮಾಯೆಯ ಆವರಣಶಕ್ತಿಯು ಹಿಂದೆ ವಿವರಿಸಿರುವ ದೃಗ್ದೃಶ್ಯವಿವೇಕವನ್ನು– ಎಂದರೆ ಸಾಕ್ಷಿಯೇ ನಿಜವಾದ ದೃಕ್ಕು, ಮಿಕ್ಕೆಲ್ಲವೂ ದೃಶ್ಯವೇ ಎಂಬುದನ್ನು– ಮರೆಮಾಡಿರುತ್ತದೆ. ಹೀಗೆಯೇ ಬ್ರಹ್ಮಕ್ಕೂ ಸೃಷ್ಟಿಗೂ ಇರುವ ಭೇದವನ್ನು ಆವರಣಶಕ್ತಿಯು ಮರೆಮಾಡಿರುತ್ತದೆ. ಇದರಿಂದ ಹೊರಗೆ ತೋರುತ್ತಿರುವ ಅನೃತಜಡದುಃಖಾತ್ಮಕವಾದ ಜಗತ್ತಿನಿಂದ ಸಚ್ಚಿದಾನಂದರೂಪವಾದ ಬ್ರಹ್ಮವಸ್ತುವನ್ನು ವಿಂಗಡಿಸಿ ಅರಿಯದಂತೆ ಆಗಿರುತ್ತದೆ. ಇದೇ ಸಂಸಾರವು ಎಂದು ಅಭಿಪ್ರಾಯ.

**ಸಾಕ್ಷಿಣಃ ಪುರತೋ ಭಾತಿ ಲಿಙ್ಗಂ ದೇಹೇನ ಸಂಯುತಮ್ ।**
**ಚಿತಿಚ್ಛಾಯಾ ಸಮಾವೇಶಾಜ್ಜೀವಃ ಸ್ಯಾದ್ವ್ಯಾವಹಾರಿಕಃ ॥ ೧೬ ॥**

೧೭. ಸಾಕ್ಷಿಯ ಮುಂದುಗಡೆಯಲ್ಲಿ ದೇಹದಿಂದೊಡಗೂಡಿದ **ಲಿಂಗವು** ಕಾಣುತ್ತಿರುವದು. ಚಿದಾಭಾಸವು ಸೇರಿಕೊಂಡಿರುವ ಅದು **ವ್ಯಾವಹಾರಿಕಜೀವನಾಗಿರುತ್ತದೆ.**

**ಅಸ್ಯ ಜೀವತ್ವಮಾರೋಪಾತ್ಸಾಕ್ಷಿಣ್ಯಪ್ಯವಭಾಸತೇ ।**
**ಆವೃತೌ ತು ವಿನಷ್ಟಾಯಾಂ ಭೇದೇ ಭಾತೇಽಪಯಾತಿ ತತ್ ॥ ೧೭ ॥**

೧೭, ಈ (ವ್ಯಾವಹಾರಿಕಜೀವ)ನ ಜೀವತ್ವವು ಆರೋಪದಿಂದ ಸಾಕ್ಷಿಯಲ್ಲಿಯೂ ತೋರುತ್ತಿರುತ್ತದೆ. ಆವರಣವು ನಷ್ಟವಾದರೆ (ದೃಗ್ದೃಶ್ಯಗಳ) ಭೇದವು ತೋರಲು ಆ (ಜೀವತ್ವವು) ಹೋಗಿಬಿಡುತ್ತದೆ.

## ವಿವರಣೆ

ಮೊದಲಿನಿಂದ ಹನ್ನೆರಡನೆಯ ಶ್ಲೋಕದವರೆಗೂ ಸಾಕ್ಷಿಯೇ ದೃಕ್ಕು, ಆಭಾಸಸಹಿತಲಿಂಗವೇ ಜೀವನು ; ಅವಸ್ಥಾತ್ರಯವು ಜೀವನಿಗೇ ಹೊರತು ಸಾಕ್ಷಿಗಿಲ್ಲ– ಎಂದು ತೋರಿಸಿಕೊಟ್ಟಿದೆ. ಆ ಪ್ರತಿಪಾದನೆಯನ್ನು ಮನದಂದರೆ ಒಳಗೆ ದೃಗ್ದೃಶ್ಯಗಳ ಭೇದವನ್ನು ಮುಸುಕಿರುವ ಆವರಣವು ಹೋಗಿಬಿಡುತ್ತದೆ ಎಂದು ಗ್ರಂಥಕರ್ತೃವಿನ ಭಾವ.

**ತಥಾ ಸರ್ಗಬ್ರಹ್ಮಣೋಶ್ಚ ಭೇದಮಾವೃತ್ಯ ತಿಷ್ಠತಿ ।**
**ಯಾ ಶಕ್ತಿಸ್ತದ್ವಶಾದ್ಬ್ರಹ್ಮ ವಿಕೃತತ್ವೇನ ಭಾಸತೇ ॥ ೧೮ ॥**

೧೮. ಹಾಗೆಯೇ ಸೃಷ್ಟಿಬ್ರಹ್ಮಗಳಿಗೂ ಇರುವ ಭೇದವನ್ನು ಮುಸುಕಿಕೊಂಡಿರುವದಲ್ಲ, ಆ (ಆವರಣ) ಶಕ್ತಿಯ ವಶದಿಂದ ಬ್ರಹ್ಮವು ವಿಕಾರವುಳ್ಳದ್ದಾಗಿ ಕಾಣುತ್ತಿರುವದು.

**ಅತ್ರಾಪ್ಯಾವೃತಿನಾಶೇನ ವಿಭಾತಿ ಬ್ರಹ್ಮಸರ್ಗಯೋಃ ।**
**ಭೇದಸ್ತಯೋರ್ವಿಕಾರಃ ಸ್ಯಾತ್ ಸರ್ಗೇ ನ ಬ್ರಹ್ಮಣಿ ಕ್ವಚಿತ್ ॥೧೯॥**

೧೯. ಇಲ್ಲಿಯೂ ಆವರಣವು ನಾಶವಾದರೆ ಬ್ರಹ್ಮ, ಸೃಷ್ಟಿ –ಇವುಗಳಿಗಿರುವ ಭೇದವು ವಿಸ್ಪಷ್ಟವಾಗಿ ಕಾಣಿಸುವದು. ಇವೆರಡ ರೊಳಗೆ ವಿಕಾರವು ಸೃಷ್ಟಿಯಲ್ಲಿರುವದೇ ಹೊರತು ಬ್ರಹ್ಮದಲ್ಲಿ ಎಂದಿಗೂ ಇರುವದಿಲ್ಲ.[1]

## ೭. ಬ್ರಹ್ಮರೂಪವನ್ನು ನಾಮರೂಪಗಳಿಂದ ವಿಂಗಡಿಸಿಕೊಳ್ಳುವ ಬಗೆ

**ಅಸ್ತಿ ಭಾತಿ ಪ್ರಿಯಂ ರೂಪಂ ನಾಮ ಚೇತ್ಯಂಶಪಞ್ಚಕಮ್ |**
**ಆದ್ಯತ್ರಯಂ ಬ್ರಹ್ಮರೂಪಂ ಜಗದ್ರೂಪಂ ತತೋ ದ್ವಯಮ್ ||೨೦||**

೨೦. ಇದೆ, ತೋರುತ್ತದೆ, ಪ್ರಿಯವಾಗಿದೆ, ರೂಪ, ನಾಮ –ಎಂಬ ಅಂಶಪಂಚಕ(ವಿದೆಯಷ್ಟೆ. ಇವುಗಳೊಳಗೆ) ಮೊದಲ ನೆಯ ಮೂರು ಬ್ರಹ್ಮದ ರೂಪವು, ಮಿಕ್ಕ ಎರಡೂ ಜಗತ್ತಿನ ರೂಪವು.

**ಖಂವಾಯ್ವಗ್ನಿಜಲೋರ್ವೀಷು ದೇವತಿರ್ಯಙ್ನರಾದಿಷು |**
**ಅಭಿನ್ನಾಃ ಸಚ್ಚಿದಾನನ್ದಾಃ ಭಿದ್ಯೇತೇ ರೂಪನಾಮನೀ || ೨೧ ||**

೨೧. ಆಕಾಶ, ವಾಯು, ಅಗ್ನಿ, ಅಪ್ಪು, ಪೃಥ್ವಿ- ಎಂಬ ಪಂಚಭೂತಗಳಲ್ಲಿಯೂ ದೇವತೆಗಳು, ಪಶುಪಕ್ಷಿಗಳು, ಮನುಷ್ಯರು –ಮುಂತಾದ (ಜೀವರು)ಗಳಲ್ಲಿಯೂ ಸಚ್ಚಿದಾನಂದಗಳು ಒಂದೇ ಆಗಿವೆ. ರೂಪನಾಮಗಳು ಮಾತ್ರ ಬೇರೆಬೇರೆಯಾಗಿರುತ್ತವೆ.

**ಉಪೇಕ್ಷ್ಯ ನಾಮರೂಪೇ ದ್ವೇ ಸಚ್ಚಿದಾನನ್ದತತ್ಪರಃ |**
**ಸಮಾಧಿಂ ಸರ್ವದಾ ಕುರ್ಯಾತ್ ಹೃದಯೇ ವಾಥವಾ ಬಹಿಃ ||೨೨||**

1. ಗ್ರಂಥಕರ್ತರ ಈ ಅಭಿಪ್ರಾಯದ ವಿಷಯದಲ್ಲಿ ಪೀಠಿಕೆಯನ್ನು ನೋಡಿ.

೨೨. ನಾಮರೂಪಗಳೆರಡನ್ನೂ ಉಪೇಕ್ಷೆಮಾಡಿ ಸಚ್ಚಿದಾನಂದರೂಪದಲ್ಲಿಯೇ ತತ್ಪರನಾಗಿ ಯಾವಾಗಲೂ ಹೃದಯದಲ್ಲೇ ಆಗಲಿ ಹೊರಗೇ ಆಗಲಿ ಸಮಾಧಿಯನ್ನು ಮಾಡುತ್ತಿರಬೇಕು.

## ವಿವರಣೆ

ಎಲ್ಲೆಲ್ಲಿ ನಾಮರೂಪಗಳು ತೋರಿದರೂ ಆ ಕಡೆಗೆ ಚಿತ್ತವನ್ನು ಹೊರಳಿಸಬಾರದು ; ಅಲ್ಲಿ ಕಾಣುವ ಸಚ್ಚಿದಾನಂದದಲ್ಲಿಯೇ ಚಿತ್ತವನ್ನು ನಿಲ್ಲಿಸಿ ಸಮಾಧಿಯನ್ನು ಅಭ್ಯಾಸಮಾಡಬೇಕು. ಇದರಿಂದ ತತ್ತ್ವಸಾಕ್ಷಾತ್ಕಾರವಾಗುವದು ಎಂಬುದು ಅಭಿಪ್ರಾಯ.

## ೮. ಸಮಾಧಿಷಟ್ಕ

**ಸವಿಕಲ್ಪೋ ನಿರ್ವಿಕಲ್ಪಃ ಸಮಾಧಿರ್ದ್ವಿವಿಧೋ ಹೃದಿ ।**
**ದೃಶ್ಯಶಬ್ದಾನುವೇಧೇನ ಸವಿಕಲ್ಪಃ ಪುನರ್ದ್ವಿಧಾ ॥ ೨೩ ॥**
**ಕಾಮಾದ್ಯಾ ಚಿತ್ತಗಾ ದೃಶ್ಯಾಸ್ತತ್ಸಾಕ್ಷಿತ್ವೇನ ಚೇತನಮ್ ।**
**ಧ್ಯಾಯೇದ್ದೃಶ್ಯಾನುವಿದ್ಧೋಽಯಂ ಸಮಾಧಿಃ ಸವಿಕಲ್ಪಕಃ ॥ ೨೪ ॥**
**ಅಸಙ್ಗಃ ಸಚ್ಚಿದಾನನ್ದಃ ಸ್ವಪ್ರಭೋ ದ್ವೈತವರ್ಜಿತಃ ।**
**ಅಸ್ಮೀತಿ ಶಬ್ದವಿದ್ಧೋಽಯಂ ಸಮಾಧಿಃ ಸವಿಕಲ್ಪಕಃ ॥ ೨೫ ॥**
**ಸ್ವಾನುಭೂತಿರಸಾವೇಶಾದ್ ದೃಶ್ಯಶಬ್ದಾವುಪೇಕ್ಷ್ಯ ತು ।**
**ನಿರ್ವಿಕಲ್ಪಃ ಸಮಾಧಿಃ ಸ್ಯಾನ್ನಿವಾತಸ್ಥಿತದೀಪವತ್ ॥ ೨೬ ॥**

೨೩-೨೬. ಹೃದಯದಲ್ಲಿ (ಮಾಡುವ) ಸಮಾಧಿಯು ಸವಿಕಲ್ಪವೆಂದೂ ನಿರ್ವಿಕಲ್ಪವೆಂದೂ ಎರಡು ಬಗೆ. ಸವಿಕಲ್ಪವೂ ದೃಶ್ಯಾನುವಿದ್ಧ, ಶಬ್ದಾನುವಿದ್ಧ – ಎಂದು ಮತ್ತೆ (ತಾನೂ) ಎರಡು ಬಗೆ. ಚಿತ್ತದಲ್ಲಿರುವ ಕಾಮವೇ ಮುಂತಾದವುಗಳು ದೃಶ್ಯಗಳು ; ಅವುಗಳಿಗೆ ಚೇತನವು ಸಾಕ್ಷಿ ಎಂದು ಧ್ಯಾನಮಾಡುವದು **ದೃಶ್ಯಾನುವಿದ್ಧವಾದ ಸವಿಕಲ್ಪಸಮಾಧಿಯು.** ಅಸಂಗನೂ ಸಚ್ಚಿದಾನಂದ

ನೂ ಸ್ವಪ್ರಕಾಶನೂ ದ್ವೈತರಹಿತನೂ ಆಗಿರುವೆನು– ಎಂದು (ಧ್ಯಾನಮಾಡುವದು) **ಶಬ್ದಾನುವಿದ್ಧವಾದ ಸವಿಕಲ್ಪಸಮಾಧಿಯು.** ಆದರೆ ತನ್ನ ಅನುಭವರಸದ ಆವೇಶದಿಂದ ದೃಶ್ಯಶಬ್ದಗಳೆರಡನ್ನೂ ಉಪೇಕ್ಷೆಮಾಡಿದಾಗ ಗಾಳಿಯಿಲ್ಲದ ಕಡೆಯಲ್ಲಿರುವ ದೀಪದಂತೆ (ಉಂಟಾದ ಸಮಾಧಿಯು) **ನಿರ್ವಿಕಲ್ಪಸಮಾಧಿ** ಎನಿಸುವದು.

## ವಿವರಣೆ

ಹೃದಯದಲ್ಲಾದರೂ ಬಾಹ್ಯದಲ್ಲಾದರೂ ನಾಮರೂಪಗಳನ್ನುಉಪೇಕ್ಷಿಸಿ ಸಚ್ಚಿದಾನಂದತತ್ಪರನಾಗಿರುವದೇ ಸಮಾಧಿಯು ಎಂದು ಇಪ್ಪತ್ತೆರಡನೆಯ ಶ್ಲೋಕದಲ್ಲಿ ಹೇಳಿತ್ತಷ್ಟೆ. ಇಲ್ಲಿ ಹೃದಯದಲ್ಲಿ ಮಾಡುವ ಸಮಾಧಿಯನ್ನು ವಿವರಿಸಿದೆ.

ಮನಸ್ಸಿನಲ್ಲಿ ಉಂಟಾಗುವ ವೃತ್ತಿಗಳೆಲ್ಲ ದೃಶ್ಯವೇ, ಆ ದೃಶ್ಯವನ್ನು ಕಾಣುತ್ತಿರುವ ಸಾಕ್ಷಿಚೈತನ್ಯವೇ ನಾನು– ಎಂದು ದೃಶ್ಯವಿವೇಕವನ್ನು ಮಾಡಿಕೊಂಡು ಆತ್ಮಸ್ವರೂಪಚಿಂತನೆಯಲ್ಲಿ ನಿಲ್ಲುವದು ದೃಶ್ಯಾನುವಿದ್ಧಸಮಾಧಿಯು. ದೃಶ್ಯವಾದ ವೃತ್ತಿಗಳ ಅನುವೇಧವು ಎಂದರೆ ಸಂಬಂಧವು ಇನ್ನೂ ಇದ್ದುಕೊಂಡಿರುವದರಿಂದ ಇದಕ್ಕೆ ಈ ಹೆಸರು. ಇದರಂತೆ ವೇದದಲ್ಲಿ ಬ್ರಹ್ಮವನ್ನು ಹೇಗೆ ವರ್ಣಿಸಿದೆಯೋ ಹಾಗೆ ಅಸಂಗವೂ ಸಚ್ಚಿದಾನಂದಸ್ವರೂಪವೂ ಸ್ವಪ್ರಕಾಶವೂ ಆಗಿರುವ ಅದ್ವಿತೀಯವಸ್ತುವೇ ನಾನು ಎಂದು ಚಿಂತಿಸುವದು ಶಬ್ದಾನುವಿದ್ಧಸಮಾಧಿಯು. ಏಕೆಂದರೆ ಇದರಲ್ಲಿ ಶಬ್ದದ ಎಂದರೆ ವೇದವಾಕ್ಯದ ನೆನಪಿನ ಸಂಬಂಧವು ಇರುತ್ತದೆ. ಈ ಎರಡರಲ್ಲಿಯೂ ಚಿತ್ತವು ಏರುಪೇರಿಲ್ಲದೆ ಇರುವದರಿಂದ ಇವನ್ನು ಸಮಾಧಿ ಎಂದು ಕರೆದಿದೆ.

ಆತ್ಮಚಿಂತನೆಯಲ್ಲಿಯೇ ಹೀಗೆ ನಿರತವಾಗಿರುವ ಚಿತ್ತವು ಆತ್ಮಾನಂದಾನುಭವದ ಭರದಲ್ಲಿ ದೃಶ್ಯಶಬ್ದಗಳೆರಡನ್ನೂ ಕಡೆಗಣಿಸಿ ಧ್ಯೇಯವಾದ ಆತ್ಮನಲ್ಲಿಯೇ ನೆಲೆನಿಂತರೆ ಅದು ನಿರ್ವಿಕಲ್ಪವೆನಿಸುವದು. ಏಕೆಂದರೆ ಅಲ್ಲಿ ಶಬ್ದ, ದೃಶ್ಯವೃತ್ತಿಗಳು ಎಂಬ ಅಥವಾ ಧ್ಯಾತೃಧ್ಯಾನಗಳೆಂಬ ವಿಕಲ್ಪಗಳು ಉಳಿದಿರುವದಿಲ್ಲ. ಭಗವದ್ಗೀತೆಯಲ್ಲಿ (೬–೧೯) ಹೇಳಿರುವ ನಿವಾತದೀಪ–ಗಾಳಿಯಿಲ್ಲದೆಡೆಯಲ್ಲಿ ಅಲುಗಾಡದಿರುವ ಸೊಡರಿನ–ದೃಷ್ಟಾಂತವನ್ನು ಇಲ್ಲಿ ಮನದಂದುಕೊಳ್ಳಬೇಕು.

ಹೃದೀವ ಬಾಹ್ಯದೇಶೇಽಪಿ ಯಸ್ಮಿನ್ ಕಸ್ಮಿಂಶ್ಚ ವಸ್ತುನಿ ।
ಸಮಾಧಿರಾದ್ಯಃ ಸನ್ಮಾತ್ರಾನ್ನಾಮರೂಪಪೃಥಕ್ಕೃತಿಃ ॥ ೨೭ ॥

ಅಖಣ್ಡೈಕರಸಂ ವಸ್ತು ಸಚ್ಚಿದಾನನ್ದಲಕ್ಷಣಮ್ ।
ಇತ್ಯವಿಚ್ಛಿನ್ನಚಿನ್ತೇಯಂ ಸಮಾಧಿರ್ಮಧ್ಯಮೋ ಭವೇತ್ ॥ ೨೮ ॥

ಸ್ತಬ್ಧೀಭಾವೋ ರಸಾಸ್ವಾದಾತ್ ತೃತೀಯಃ ಪೂರ್ವವನ್ಮತಃ ।
ಏತೈಃ ಸಮಾಧಿಭಿಃ ಷಡ್ಭಿರ್ನಯೇತ್ ಕಾಲಂ ನಿರನ್ತರಮ್ ॥ ೨೯ ॥

೨೭-೨೯. ಹೃದಯದಲ್ಲಿ ಹೇಗೋ ಹಾಗೆ ಹೊರಗಿನ ಕಡೆಯಲ್ಲಿಯೂ ಯಾವ ವಸ್ತುವಿನಲ್ಲಾದರೂ ಇರುವ ಸತ್ತಾಮಾತ್ರ ಸ್ವರೂಪದಿಂದ ನಾಮರೂಪಗಳನ್ನು ವಿಂಗಡಿಸಿಕೊಳ್ಳುವದು ಮೊದಲನೆಯ ಬಗೆಯ ಸಮಾಧಿಯು. ವಸ್ತುವು ಅಖಂಡೈಕರಸವಾದ ಸಚ್ಚಿದಾನಂದಸ್ವರೂಪವೇ ಆಗಿದೆ – ಎಂದು ಎಡೆಬಿಡದೆ ಚಿಂತಿಸುತ್ತಿರುವದು ನಡುವಿನ ಸಮಾಧಿಯು. ಆನಂದದ ಸವಿಯಿಂದ ಸ್ವಲ್ಪವೂ ಚಲಿಸದೆ ನಿಂತುಬಿಡುವದು ಹಿಂದೆ ಹೇಳಿದಂತೆಯೇ ಮೂರನೆಯ ಸಮಾಧಿಯೆನಿಸುವದು. ಈ ಆರು ಬಗೆಯ ಸಮಾಧಿಗಳಿಂದ ನಿರಂತರವಾಗಿ ಕಾಲವನ್ನು ಕಳೆಯುತ್ತಿರಬೇಕು.

## ವಿವರಣೆ

ಒಳಗೆ ಮಾಡುವ ಸಮಾಧಿಯಂತೆಯೇ ಹೊರಗಿನ ವಸ್ತುಗಳಲ್ಲಿಯೂ ಮೂರು ಬಗೆಯ ಸಮಾಧಿಗಳನ್ನು ಮಾಡಬಹುದು. ಯಾವ ವಸ್ತುವಿನಲ್ಲಾದರೂ ಸದ್ರೂಪವು ಕಂಡೇಕಾಣುತ್ತಿರುವದಷ್ಟೆ. ವಸ್ತುವಿನ ವಿಶೇಷರೂಪವಾದ ನಾಮರೂಪಗಳನ್ನು ಬಿಟ್ಟು ಸದ್ರೂಪವನ್ನು ಮಾತ್ರ ಚಿಂತಿಸುವದು ದೃಶ್ಯಾನುವಿದ್ಧಸಮಾಧಿಯೆನಿಸುವದು. ವಸ್ತುವಿನ ಸ್ವರೂಪವು ಅಖಂಡಸಚ್ಚಿದಾನಂದವೇ ಆಗಿರುವದರಿಂದ ಅದು ಎಲ್ಲೆಲ್ಲಿಯೂ ಒಂದೇ ರೂಪದಿಂದ ಇರುತ್ತದೆ ಎಂದು ಚಿಂತಿಸಿದರೆ ಶಬ್ದಾನುವಿದ್ಧಸಮಾಧಿಯಾಗುವದು. ವಸ್ತುಚಿಂತೆಯಲ್ಲಿಯೇ ಪರವಶನಾಗಿ ದೃಶ್ಯಶಬ್ದಗಳ ಸಂಬಂಧವೇ ಇಲ್ಲದಿರುವದು ನಿರ್ವಿಕಲ್ಪ

ಸಮಾಧಿಯೂ- ಎಂಬುದು ಗ್ರಂಥಕರ್ತರ ಆಶಯವು. ಆವರಣವು ನೀಗಿದರೆ ಸಾಕ್ಷಿಜೀವಭೇದವೂ ಬ್ರಹ್ಮಜಗದ್ಭೇದವೂ ತಿಳಿಯುವವೆಂದು ಹದಿನೇಳು, ಹತ್ತೊಂಬತ್ತು- ಈ ಶ್ಲೋಕಗಳಲ್ಲಿ ತಿಳಿಸಿತ್ತು. ಈಗ ಜೀವಜಗತ್ತುಗಳನ್ನು ಉಪೇಕ್ಷಿಸಿ ಬ್ರಹ್ಮವನ್ನು ಒಂದೇ ಎಂದು ಸಮಾಧಿಯಿಂದ ಕಂಡುಕೊಳ್ಳಬೇಕೆಂದು ಹೇಳಿರುತ್ತದೆ.[1]

## ೯. ಸಮಾಧಿಯ ಫಲ

**ದೇಹಾಭಿಮಾನೇ ಗಳಿತೇ ವಿಜ್ಞಾತೇ ಪರಮಾತ್ಮನಿ ।**
**ಯತ್ರಯತ್ರ ಮನೋ ಯಾತಿ ತತ್ರತತ್ರ ಸಮಾಧಯಃ ॥ ೩೦ ॥**

೩೦. ದೇಹಾಭಿಮಾನವು ಹೋಗಿ ಪರಮಾತ್ಮನನ್ನು ಅರಿತು ಕೊಂಡರೆ, ಮನಸ್ಸು ಎಲ್ಲೆಲ್ಲಿಗೆ ಹೋದರೆ ಅಲ್ಲಲ್ಲಿ ಸಮಾಧಿಗಳಾಗುತ್ತಿರುವವು.

**ಭಿದ್ಯತೇ ಹೃದಯಗ್ರನ್ಥಿಶ್ಛಿದ್ಯನ್ತೇ ಸರ್ವಸಂಶಯಾಃ ।**
**ಕ್ಷೀಯನ್ತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ ॥ ೩೧ ॥**

೩೧. ಪರಾವರರೂಪನಾದ ಆ ಪರಮಾತ್ಮನನ್ನು ಕಂಡುಕೊಂಡರೆ ಹೃದಯಗ್ರಂಥಿಯು ಬಿಚ್ಚಿಕೊಳ್ಳುವದು ; ಸಂಶಯಗಳೆಲ್ಲವೂ ಕತ್ತರಿಸಿಹೋಗುವವು ; ಈತನ ಕರ್ಮಗಳೂ ನಾಶವಾಗಿ ಬಿಡುವವು.

### ವಿವರಣೆ

ದೃಗ್ದೃಶ್ಯವಿವೇಕವನ್ನು ಮಾಡಿಕೊಂಡರೆ ಸಾಕ್ಷಿಯಲ್ಲಿಯೇ ಚಿತ್ತವನ್ನಿಟ್ಟರೆ ದೇಹಾಭಿಮಾನವು ಹೋಗುವದು. ಕಾರಣರೂಪವಾದ ಸಚ್ಚಿದಾನಂದ ಬ್ರಹ್ಮ, ಕಾರ್ಯರೂಪವಾದ ನಾಮರೂಪಜಗತ್ತು- ಇವುಗಳ ವಿವೇಕದಿಂದ ಬ್ರಹ್ಮದಲ್ಲಿಯೇ ಚಿತ್ತವನ್ನಿಟ್ಟರೆ ಜಗದಭಿಮಾನವು ಹೋಗುವದು. ಹೀಗೆ

1. ಈ ವಿಷಯಕ್ಕೆ ಪೀಠಿಕೆಯನ್ನು ನೋಡಿ.

ಎರಡು ಬಗೆಯ ಸಮಾಧಿಗಳೂ ಆಳವಟ್ಟವನಿಗೆ ಸಹಜವಾಗಿಯೇ ನಿತ್ಯಸಮಾಧಿ ಯಾದಂತಾಯಿತು. ಅಂಥವನಿಗೆ ಚಿದಚಿತ್ತುಗಳ ತಾದಾತ್ಮ್ಯರೂಪವಾದ ಹೃದಯಗ್ರಂಥಿಯಿಲ್ಲ; ಬ್ರಹ್ಮಾತ್ಮವಸ್ತುವಿನ ವಿಷಯದಲ್ಲಿ ಯಾವ ಸಂಶಯವೂ ಉಂಟಾಗುವದಿಲ್ಲ; ಯಾವ ಕರ್ಮದ ಬಂಧವೂ ಇಲ್ಲ-ಎಂದು ಮುಂಡಕ ಶ್ರುತಿಯಲ್ಲಿ (೨-೨-೯) ಹೇಳಿದೆ.

## ೧೦. ಪಾರಮಾರ್ಥಿಕಜೀವನೂ ಮಹಾವಾಕ್ಯಾರ್ಥವೂ

**ಅವಚ್ಛಿನ್ನಶ್ಚಿದಾಭಾಸಸ್ತೃತೀಯಃ ಸ್ವಪ್ನಕಲ್ಪಿತಃ |**
**ವಿಜ್ಞೇಯಸ್ತ್ರಿವಿಧೋ ಜೀವಸ್ತತ್ರಾದ್ಯಃ ಪಾರಮಾರ್ಥಿಕಃ || ೩೨ ||**

೩೨. ಅವಚ್ಛಿನ್ನಜೀವ, ಚಿದಾಭಾಸಜೀವ, ಸ್ವಪ್ನಕಲ್ಪಿತ ಜೀವ- ಎಂದು ಜೀವನು ಮೂರು ವಿಧವಾಗಿರುತ್ತಾನೆ. ಇವ ರೊಳಗೆ ಮೊದಲನೆಯವನು ಪಾರಮಾರ್ಥಿಕಜೀವನು.

### ವಿವರಣೆ

ಈ ಪ್ರಕರಣದಲ್ಲಿ ಪಾರಮಾರ್ಥಿಕಜೀವ, ವ್ಯಾವಹಾರಿಕಜೀವ, ಪ್ರಾತಿಭಾಸಿಕಜೀವ- ಎಂದು ಜೀವನನ್ನು ಮೂರು ಬಗೆಯಾಗಿ ವಿಂಗಡಿ ಸಿದೆ. ಇವರಲ್ಲಿ ಅವಚ್ಛಿನ್ನಜೀವನು ಎಂದರೆ ದೇಹೇಂದ್ರಿಯಾಂತಃಕರಣಗಳೆಂಬ ಅವಚ್ಛೇದಗಳಿಂದೊಡಗೂಡಿನ ಜೀವನು ಪಾರಮಾರ್ಥಿಕಜೀವವೆನಿಸುವನು. ಚಿತಿಚ್ಛಾಯೆಯಸಂಬಂಧದಿಂದ ಲಿಂಗವು ವ್ಯಾವಹಾರಿಕಜೀವನೆಂದು ಹಿಂದೆ ಹದಿನಾರನೆಯ ಶ್ಲೋಕದಲ್ಲಿ ಆಗಲೆ ಹೇಳಿದೆ; ಅವನನ್ನೇ ಚಿದಾಭಾಸಜೀವನು ಎಂದು ಕರೆದಿದೆ. ಸ್ವಪ್ನಕಲ್ಪಿತಜೀವನೇ ಪ್ರಾತಿಭಾಸಿಕಜೀವನು.

**ಅವಚ್ಛೇದಃ ಕಲ್ಪಿತಃ ಸ್ಯಾದವಚ್ಛೇದ್ಯಂ ತು ವಾಸ್ತವಮ್ |**
**ತಸ್ಮಿನ್ ಜೀವತ್ವಮಾರೋಪಾದ್ ಬ್ರಹ್ಮತ್ವಂ ತು ಸ್ವಭಾವತಃ ||೩೩||**

೩೩. ಅವಚ್ಛೇದವು ಕಲ್ಪಿತವಾಗಿರುತ್ತದೆ, ಆದರೆ ಅವ ಚ್ಛೇದ್ಯವು ಪರಮಾರ್ಥವಾಗಿರುತ್ತದೆ. ಆ (ಅವಚ್ಛೇದ್ಯ) ದಲ್ಲಿ ಜೀವ

ತ್ವವು ಆರೋಪದಿಂದ (ಆಗಿರುತ್ತದೆ). ಬ್ರಹ್ಮತ್ವವಾದರೋ ಸ್ವಭಾವದಿಂದಲೇ ಇರುತ್ತದೆ.

## ವಿವರಣೆ

ಅಂತಃಕರಣಾವಚ್ಛಿನ್ನವಾದ ಚೈತನ್ಯವೇ ಪರಮಾರ್ಥಜೀವನು. ಇಲ್ಲಿ ಅವಚ್ಛೇದವು ಕಲ್ಪಿತವಾಗಿರುತ್ತದೆ, ಎಂದರೆ ಉಪಾಧಿಯಾದ ದೇಹಾದಿಸಹಿತವಾದ ಅಂತಃಕರಣವು ಕಲ್ಪಿತವಾಗಿರುತ್ತದೆ ಎಂದರ್ಥ. ಉಪಾಧಿಯು ಕಲ್ಪಿತವೆಂಬುದು ಹೇಗೆಂಬುದನ್ನು ಮುಂದೆ ಮೂವತ್ತೈದನೆಯ ಶ್ಲೋಕದಲ್ಲಿ ತಿಳಿಸಲಾಗುವದು. ಅವಚ್ಛಿನ್ನವು ವಾಸ್ತವವಾಗಿರುತ್ತದೆ, ಎಂದರೆ ಉಪಾಧಿಯಾದ ಅಂತಃಕರಣವು ಕಲ್ಪಿತವಾಗಿದ್ದರೂ ಉಪಹಿತವಾದ ಕೂಟಸ್ಥಚೈತನ್ಯವಾದ ಸಾಕ್ಷಿಯು ಸತ್ಯವೇ ಆಗಿರುತ್ತಾನೆ ಎಂದರ್ಥ. ಸಾಕ್ಷಿಯು ಕೂಟಸ್ಥನೆಂಬುದನ್ನು ಐದನೆಯ ಶ್ಲೋಕದಲ್ಲಿ ಹೇಳಿರುತ್ತದೆ. ಈ ಚೈತನ್ಯವು ಅಂತಃಕರಣದಿಂದ ಅವಚ್ಛಿನ್ನವಾಗಿರುತ್ತದೆಯೆಂಬುವೂ ಕಲ್ಪಿತವೇ ಆಗಿರುತ್ತದೆ; ಏಕೆಂದರೆ ಅಂತಃಕರಣವೇ ಕಲ್ಪಿತವಾಗಿದೆ. ಹೀಗಿರುವದರಿಂದ ಅವಚ್ಛಿನ್ನಜೀವನು, ಎಂದರೆ ಕೂಟಸ್ಥಚೈತನ್ಯರೂಪಸಾಕ್ಷಿಯು ನಿಜವಾಗಿ ಬ್ರಹ್ಮವೇ ಆಗಿರುತ್ತಾನೆ ಎಂದಾಯಿತು.

**ಅವಚ್ಛಿನ್ನಸ್ಯ ಜೀವಸ್ಯ ಪೂರ್ಣೇನ ಬ್ರಹ್ಮಣೈಕತಾಮ್ ।**
**ತತ್ತ್ವಮಸ್ಯಾದಿವಾಕ್ಯಾನಿ ಜಗುರ್ನೇತರಜೀವಯೋಃ ॥ ೩೪ ॥**

೩೪. ಅವಚ್ಛಿನ್ನನಾದ ಜೀವನಿಗೂ ಪೂರ್ಣವಾದ ಬ್ರಹ್ಮಕ್ಕೂ ಐಕ್ಯವನ್ನು ತತ್ತ್ವಮಸ್ಯಾದಿವಾಕ್ಯಗಳು ಹೇಳುತ್ತವೆಯೇ ಹೊರತು ಉಳಿದ ಇಬ್ಬರು ಜೀವರುಗಳಿಗೂ (ಬ್ರಹ್ಮಕ್ಕೂ ಐಕ್ಯವನ್ನು) ಹೇಳುವದಿಲ್ಲ.

## ವಿವರಣೆ

ತತ್ತ್ವಮಸಿ, ಅಹಂ ಬ್ರಹ್ಮಾಸ್ಮಿ, ಅಯಮಾತ್ಮಾ ಬ್ರಹ್ಮ, ಪ್ರಜ್ಞಾನಂ ಬ್ರಹ್ಮ– ಈ ಬಗೆಯ ಜೀವಬ್ರಹ್ಮೈಕ್ಯವನ್ನು ಹೇಳುವ ವಾಕ್ಯಗಳನ್ನು 'ಮಹಾವಾಕ್ಯ'ಗಳೆಂದು ಕರೆಯುವದುಂಟು. ಜೀವಸ್ವರೂಪಕ್ಕೂ ಬ್ರಹ್ಮಸ್ವರೂಪಕ್ಕೂ

ಅತ್ಯಂತ ವೈಲಕ್ಷಣ್ಯವಿರುವದರಿಂದ ಇವೆರಡಕ್ಕೂ ಐಕ್ಯವು ಹೇಗೆ ಹೊಂದೀತು ? ಎಂಬ ಆಕ್ಷೇಪಕ್ಕೆ ಇಲ್ಲಿ ಸಮಾಧಾನವನ್ನು ಹೇಳಿದೆ:

ತ್ವಂಪದಾರ್ಥವಾದ ಜೀವನು ಎಂದರೆ ಪರಮಾರ್ಥಜೀವನೇ ; ಅವನು ಮೇಲೆ ವಿವರಿಸಿ ಹೇಳಿರುವಂತೆ ಬ್ರಹ್ಮವೇ ಆಗಿರುತ್ತಾನೆ. ಅವನನ್ನು ಪರಿಚ್ಛೇದಗೊಳಿಸಿರುವ ಉಪಾಧಿಯೇ ನಿಜವಾಗಿಲ್ಲ. ಕಲ್ಪಿತವಾದ ಉಪಾಧಿಯಿಂದ ಜೀವನ ಪರಮಾರ್ಥಸ್ವರೂಪದಲ್ಲಿ ಯಾವ ಮಾರ್ಪಾಡೂ ಆಗಿರುವದಿಲ್ಲ. ಆದ್ದರಿಂದ ಮಹಾವಾಕ್ಯವು ಹೇಳುವ ಐಕ್ಯದಲ್ಲಿ ಯಾವ ವಿರೋಧವೂ ಇಲ್ಲ.

ಇನ್ನು ಚಿದಾಭಾಸ, ಸ್ವಾಪ್ನ- ಎಂಬ ವ್ಯಾವಹಾರಿಕಪ್ರಾತಿಭಾಸಿಕ ಜೀವರುಗಳ[1] ವಿಷಯವನ್ನು ಇಷ್ಟರಲ್ಲಿಯೇ ತಿಳಿಸಲಾಗುವದು. ಅವರ ಸ್ವರೂಪವು ಬ್ರಹ್ಮಸ್ವರೂಪಕ್ಕಿಂತ ವಿಲಕ್ಷಣವಾಗಿದೆ ಎಂಬಿದು ನಿಜ. ಆದರೆ ಆ ಜೀವರುಗಳಿಗೂ ಬ್ರಹ್ಮಕ್ಕೂ ಐಕ್ಯವನ್ನು ತತ್ತ್ವಮಸ್ಯಾದಿವಾಕ್ಯಗಳು ಹೇಳುವದೇ ಇಲ್ಲ. ಆದ್ದರಿಂದ ಆ ವಾಕ್ಯಗಳಲ್ಲಿ ಯಾವ ವಿರುದ್ಧಪ್ರತಿಪಾದನೆಯೂ ಇಲ್ಲ.

## ೧೧. ವ್ಯಾವಹಾರಿಕಪ್ರಾತಿಭಾಸಿಕಜೀವರುಗಳು

**ಬ್ರಹ್ಮಣ್ಯವಸ್ಥಿತಾ ಮಾಯಾ ವಿಕ್ಷೇಪಾವೃತಿರೂಪಿಣೀ ।**
**ಆವೃತ್ಯಾಖಣ್ಡತಾಂ ತಸ್ಮಿನ್ ಜಗಜ್ಜೀವೌ ಪ್ರಕಲ್ಪಯೇತ್ ॥ ೩೫ ॥**

೩೫. ಬ್ರಹ್ಮದಲ್ಲಿರುವ ವಿಕ್ಷೇಪಾವರಣರೂಪವಾಗಿರುವ ಮಾಯೆಯು ಆ ಬ್ರಹ್ಮದಲ್ಲಿರುವ ಅಖಂಡತ್ವವನ್ನು ಮುಚ್ಚಿಹಾಕಿ ಅದರಲ್ಲಿ ಜಗತ್ತು, ಜೀವ- ಇವೆರಡನ್ನೂ ಕಲ್ಪಿಸಿರುತ್ತದೆ.

### ವಿವರಣೆ

ಈಗ ವ್ಯಾವಹಾರಿಕಜೀವನ ವರ್ಣನೆಯನ್ನು ಆರಂಭಿಸುತ್ತಾರೆ. ಹಿಂದೆ ಹದಿಮೂರನೆಯ ಶ್ಲೋಕದಲ್ಲಿಯೇ ಮಾಯಾಶಕ್ತಿಗಳ ವಿಷಯವನ್ನು ಪ್ರಸ್ತಾಪಿಸಿತ್ತು. ಬ್ರಹ್ಮವು ವಾಸ್ತವವಾಗಿ ಅಖಂಡವಾಗಿರುತ್ತದೆ. ಅದರಲ್ಲಿ ಯಾವ

1. ಜೀವತ್ರಯವಿಭಾಗದ ವಿಷಯಕ್ಕೆ ಪೀಠಿಕೆಯನ್ನು ನೋಡಿ.

ವಿಭಾಗವೂ ಇಲ್ಲವೇ ಇಲ್ಲ ಆದರೂ ಆ ಅಖಂಡತತ್ವವನ್ನು ಮಾಯೆಯು ಆವರಣವು ಮುಚ್ಚಿಹಾಕಿರುತ್ತದೆ ; ವಿಕ್ಷೇಪಶಕ್ತಿಯು ಜಗತ್ತನ್ನು ಸೃಷ್ಟಿಸಿರುತ್ತದೆ ; ಜಗತ್ತಿನಲ್ಲಿ ಚೇತನ, ಅಚೇತನ-ಎಂಬ ವಿಭಾಗಗಳನ್ನು ಕಲ್ಪಿಸಿರುತ್ತದೆ. ಆದ್ದರಿಂದಲೇ ಆವರಣಶಕ್ತಿಯಿಂದ ಬ್ರಹ್ಮಕ್ಕೂ ಜಗತ್ತಿಗೂ ವಿವೇಕವು ಕಾಣಿಸುವದಿಲ್ಲವೆಂದು ಹದಿನೆಂಟನೆಯ ಶ್ಲೋಕವಲ್ಲಿಯೂ ದೃಗ್ರೂಪನಾದ ಜೀವನಿಗೂ ದೃಶ್ಯಗಳಿಗೂ ಭೇದವು ಕಾಣಿಸುವದಿಲ್ಲವೆಂದು ಹದಿನೈದನೆಯ ಶ್ಲೋಕದಲ್ಲಿಯೂ ತಿಳಿಸಲಾಗಿತ್ತು.

**ಜೀವೋ ಧೀಸ್ಥಚಿದಾಭಾಸೋ ಭವೇದ್ಭೋಕ್ತಾ ಹಿ ಕರ್ಮಕೃತ್ ।**
**ಭೋಗ್ಯರೂಪಮಿದಂ ಸರ್ವಂ ಜಗತ್ ಸ್ಯಾದ್ಭೂತಭೌತಿಕಮ್ ॥೩೬॥**

೩೬. ಬುದ್ಧಿಯಲ್ಲಿರುವ ಚಿದಾಭಾಸನೆಂಬ ಜೀವನೇ ಕರ್ಮವನ್ನು ಮಾಡುವವನೂ ಭೋಕ್ತೃವೂ ಆಗಿರುತ್ತಾನೆ. ಭೂತಭೌತಿಕರೂಪವಾದ ಈ ಜಗತ್ತೆಲ್ಲವೂ ಭೋಗ್ಯವಾಗಿರುತ್ತದೆ.

**ಅನಾದಿಕಾಲಮಾರಭ್ಯ ಮೋಕ್ಷಾತ್ ಪೂರ್ವಮಿದಂ ದ್ವಯಮ್ ।**
**ವ್ಯವಹಾರೇ ಸ್ಥಿತಂ ತಸ್ಮಾದುಭಯಂ ವ್ಯಾವಹಾರಿಕಮ್ ॥ ೩೭ ॥**

೩೭. ಈ ಎರಡೂ ಅನಾದಿಕಾಲದಿಂದ ಮೋಕ್ಷವಾಗುವವರೆಗಿನ ವ್ಯವಹಾರದಲ್ಲಿ ಇದ್ದುಕೊಂಡಿರುವದು. ಆದ್ದರಿಂದ ಇವೆರಡೂ ವ್ಯಾವಹಾರಿಕವು.

## ವಿವರಣೆ

ಭೋಗ್ಯರೂಪವಾಗಿರುವ ಜಗತ್ತೂ ಚಿಚ್ಛಾಯೆಯಿಂದ ಕೂಡಿದ ಲಿಂಗವೆಂದು ಹದಿನೇಳನೆಯ ಶ್ಲೋಕದಲ್ಲಿ ತಿಳಿಸಿದ ಬುದ್ಧಿಸ್ಥಚಿದಾಭಾಸನೂ ವ್ಯವಹಾರದಲ್ಲಿ ಕಾಣುತ್ತಿರುವವು. ಈ ಭೋಕ್ತೃಭೋಗ್ಯಭಾವವು ಎಂದಿನಿಂದ ಪ್ರಾರಂಭವಾಯಿತೆಂದು ಹೇಳುವದಕ್ಕೆ ಬರುವದಿಲ್ಲ ; ಎಂದಿಗೆ ಮುಗಿಯುವದೆಂದು ಹೇಳುವದಕ್ಕೂ ಆಗುವದಿಲ್ಲ. ಮಾಯೆಯಿಂದಾಗಿರುವ ವ್ಯವಹಾರವು

ಇರುವವರೆಗೂ ಇವೆರಡೂ ಇದ್ದುಕೊಂಡಿರುತ್ತವೆ. ಆದ್ದರಿಂದ ಚಿದಾಭಾಸ ಜೀವನೂ ವ್ಯಾವಹಾರಿಕ, ಅವನಿಗೆ ಭೋಗ್ಯವಾಗಿರುವ ಜಗತ್ತೂ ವ್ಯಾವಹಾರಿಕ.

**ಚಿದಾಭಾಸಸ್ಥಿತಾ ನಿದ್ರಾ ವಿಕ್ಷೇಪಾವೃತ್ತಿರೂಪಿಣೀ ।**
**ಆವೃತ್ಯ ಜೀವಜಗತೀ ಪೂರ್ವೇ ನೂತ್ನೇ ತು ಕಲ್ಪಯೇತ್ ॥ ೩೮ ॥**

೩೮. ಚಿದಾಭಾಸನಲ್ಲಿರುವ ವಿಕ್ಷೇಪಾವರಣರೂಪವಾದ ನಿದ್ರೆಯು ಹಿಂದಿನ ಜೀವಜಗತ್ತುಗಳೆರಡನ್ನೂ ಮುಚ್ಚಿಹಾಕಿ ಹೊಸ (ಜೀವಜಗತ್ತುಗಳನ್ನು) ಕಲ್ಪಿಸುವದು.

## ವಿವರಣೆ

ಹನ್ನೊಂದು ಹನ್ನೆರಡನೆಯ ಶ್ಲೋಕಗಳಲ್ಲಿ ಚಿದಾಭಾಸಯುಕ್ತಲಿಂಗ ಶರೀರವೇ ಅವಸ್ಥಾತ್ರಯವೆಂದು ಹೇಳಿರುವದನ್ನು ಇಲ್ಲಿ ಮನಸ್ಸಿಗೆ ತಂದು ಕೊಳ್ಳಬೇಕು. ಚಿದಾಭಾಸನಿಗೆ ವ್ಯಾವಹಾರಿಕಜಗತ್ತು ಸಾಮಾನ್ಯವಾಗಿ ತೋರುತ್ತಿರುವದು. ಇದೇ ಜಾಗ್ರದವಸ್ಥೆಯ ಜಗತ್ತು.

ಆದರೆ ಈ ಜೀವನಿಗೆ ನಿದ್ರೆ ಎಂಬ ದೋಷವು ಗಂಟುಬಿದ್ದಾಗ ಇವನಿಗೆ ಸ್ವಾಪ್ನಜಗತ್ತು ತೋರುವದಲ್ಲದೆ ಅಲ್ಲಿ ಈ ವ್ಯಾವಹಾರಿಕಜೀವತ್ವವೂ ಹೋಗಿ ಸ್ವಾಪ್ನಜೀವತ್ವವು ತೋರಿಕೊಳ್ಳುತ್ತದೆ. ನಿದ್ರೆಗೆ ಆವರಣ, ವಿಕ್ಷೇಪ– ಎಂಬ ಎರಡು ಶಕ್ತಿಗಳು ಇರುತ್ತವೆ. ಮಾಯೆಯ ಆವರಣವಿಕ್ಷೇಪಗಳು ಬ್ರಹ್ಮತ್ವವನ್ನು ಮುಚ್ಚಿ ವ್ಯಾವಹಾರಿಕಜೀವಜಗತ್ತುಗಳನ್ನು ಕಲ್ಪಿಸಿ ತೋರುವಂತೆಯೇ ವ್ಯಾವಹಾರಿಕಜೀವನ ನಿದ್ರೆಯ ಆವರಣವಿಕ್ಷೇಪಗಳು ವ್ಯಾವಹಾರಿಕಜೀವ ಜಗತ್ತುಗಳನ್ನು ಮುಚ್ಚಿ ಹೊಸ ಜೀವಜಗತ್ತುಗಳನ್ನು ತೋರಿಸುತ್ತವೆ.

**ಪ್ರತೀತಕಾಲ ಏವೈತೇ ಸ್ಥಿತತ್ವಾತ್ ಪ್ರಾತಿಭಾಸಿಕೇ ।**
**ನ ಹಿ ಸ್ವಪ್ನಪ್ರಬುದ್ಧಸ್ಯ ಪುನಃ ಸ್ವಪ್ನೇ ಸ್ಥಿತಿಸ್ತಯೋಃ ॥ ೩೯ ॥**

೩೯. ಇವೆರಡೂ ತೋರಿಕೆಯ ಕಾಲದಲ್ಲಿ ಮಾತ್ರವೆ ಇರುತ್ತಿರುವದರಿಂದ ಪ್ರಾತಿಭಾಸಿಕವೆನಿಸುವವು. ಕನಸಿನಿಂದೆದ್ದ ಎಚ್ಚತ್ತವನಿಗೆ ಮತ್ತೆ ಕನಸಾದರೆ ಅವೆರಡೂ ಇರುವದಿಲ್ಲವಷ್ಟೆ ?

## ವಿವರಣೆ

ಸ್ವಾಪ್ನಜೀವಜಗತ್ತುಗಳು ಆಯಾ ಸ್ವಪ್ನಕಾಲದಲ್ಲಿ ಮಾತ್ರವೇ ಇರುತ್ತವೆ. ಎಚ್ಚರದ ಜೀವಜಗತ್ತುಗಳು ಪ್ರತಿಯೊಂದು ಜಾಗ್ರದವಸ್ಥೆಯ ವ್ಯವಹಾರದಲ್ಲಿಯೂ ಇರುವಂತೆ ಪ್ರತಿಯೊಂದು ಸ್ವಪ್ನದಲ್ಲಿಯೂ ಅದೇ ಜೀವಜಗತ್ತುಗಳಿರುವದಿಲ್ಲ. ಆದ್ದರಿಂದ ಈ ಜೀವಜಗತ್ತುಗಳು ಪ್ರಾತಿಭಾಸಿಕಗಳು, ಎಂದರೆ ಪ್ರತಿಭಾಸದ ತೋರುವಿಕೆಯ ಕಾಲದಲ್ಲಿ ಮಾತ್ರ ಇರತಕ್ಕವುಗಳಾಗಿವೆ.

## ೧೨. ಜೀವತ್ರಯಕ್ಕೆ ಜಗತ್ತು ಕಾಣುವ ರೀತಿ

**ಪ್ರಾತಿಭಾಸಿಕಜೀವೋ ಯಸ್ತಜ್ಜಗತ್ ಪ್ರಾತಿಭಾಸಿಕಮ್ ।**
**ವಾಸ್ತವಂ ಮನ್ಯತೇಽನ್ಯಸ್ತು ಮಿಥ್ಯೇತಿ ವ್ಯಾವಹಾರಿಕಃ ॥ ೪೦ ॥**

**ವ್ಯಾವಹಾರಿಕಜೀವೋ ಯಸ್ತಜ್ಜಗದ್ವ್ಯಾವಹಾರಿಕಮ್ ।**
**ಸತ್ಯಂ ಪ್ರತ್ಯೇತಿ ಮಿಥ್ಯೇತಿ ಮನ್ಯತೇ ಪಾರಮಾರ್ಥಿಕಃ ॥ ೪೧ ॥**

**ಪಾರಮಾರ್ಥಿಕಜೀವಸ್ತು ಬ್ರಹ್ಮೈಕ್ಯಂ ಪಾರಮಾರ್ಥಿಕಮ್ ।**
**ಪ್ರತ್ಯೇತಿ ವೀಕ್ಷತೇ ನಾನ್ಯದ್ವೀಕ್ಷತೇ ತ್ವನೃತಾತ್ಮನಾ ॥ ೪೨ ॥**

೪೦-೪೨. ಪ್ರಾತಿಭಾಸಿಕಜೀವನಿದ್ದಾನಲ್ಲ, ಅವನು ತನ್ನದಾದ ಪ್ರಾತಿಭಾಸಿಕಜಗತ್ತನ್ನು ನಿಜವೆಂದು ಎಣಿಸಿಕೊಳ್ಳುತ್ತಾನೆ; ಅವನಿಗಿಂತ ಬೇರೆಯವನಾದ ವ್ಯಾವಹಾರಿಕಜೀವನಾದರೋ ಅದನ್ನು ಮಿಥ್ಯೆಯೆಂದು ಎಣಿಸುತ್ತಾನೆ. ವ್ಯಾವಹಾರಿಕಜೀವನಿರುವನಲ್ಲ, ಅವನು ತನ್ನದಾದ ವ್ಯಾವಹಾರಿಕಜಗತ್ತನ್ನು ಸತ್ಯವೆಂದು ತಿಳಿಯುತ್ತಾನೆ. ಪಾರಮಾರ್ಥಿಕಜೀವನು ಅದನ್ನು ಮಿಥ್ಯೆಯೆಂದು ತಿಳಿಯುತ್ತಾನೆ. ಪಾರಮಾರ್ಥಿಕಜೀವನಾದರೋ, ಬ್ರಹ್ಮೈಕ್ಯವನ್ನು ಪಾರಮಾರ್ಥಿಕವೆಂದು ತಿಳಿಯುತ್ತಾನೆ, ಮತ್ತೊಂದನ್ನು ಕಾಣುವದೇ ಇಲ್ಲ; ಅದನ್ನು ಅನೃತವೆಂದೇ ಕಾಣುತ್ತಾನೆ.

## ವಿವರಣೆ

ವ್ಯಾವಹಾರಿಕಜೀವನಿಗೆ ಪ್ರಾತಿಭಾಸಿಕಜೀವಜಗತ್ತುಗಳು ಮಿಥ್ಯಾರೂಪವಾಗಿ ಕಾಣುತ್ತವೆ, ಪಾರಮಾರ್ಥಿಕಜೀವನಿಗೆ ವ್ಯಾವಹಾರಿಕಜೀವ ಜಗತ್ತುಗಳು ಮಿಥ್ಯಾರೂಪವಾಗಿ ಕಾಣುತ್ತವೆ. ಅಥವಾ ಅವನಿಗೆ ಅವು ಕಾಣಿಸುವದೇ ಇಲ್ಲ, ಬ್ರಹ್ಮವೊಂದೇ ಅವನ ಅರಿವಿನಲ್ಲಿರುತ್ತದೆ–ಎಂಬುದು ಒಟ್ಟರ್ಥ.

ಪಾರಮಾರ್ಥಿಕಜೀವನು ಬ್ರಹ್ಮವೊಂದನ್ನು ಬಿಟ್ಟು ಮತ್ತೊಂದನ್ನು ನೋಡುವದೇ ಇಲ್ಲ; ಅಥವಾ ಅದನ್ನು ಕಂಡರೂ ಮಿಥ್ಯೆಯೆಂದೇ ಕಾಣುತ್ತಾನೆ ಎಂದು ಹೇಳಿರುವದು ನಿರ್ವಿಕಲ್ಪಸಮಾಧಿಯಲ್ಲಿ ಕಾಣುವದೇ ಇಲ್ಲ, ಸವಿಕಲ್ಪ ಸಮಾಧಿಯಲ್ಲಿ ಅನೃತವೆಂದೇ ಕಾಣುತ್ತಾನೆ– ಎಂಬ ಅಭಿಪ್ರಾಯದಿಂದ ಎಂದು ಹೇಳಬಹುದು.

## ೧೩. ಸಾಕ್ಷಿಯು ಸಚ್ಚಿದಾನಂದಸ್ವರೂಪವೇ ಮಿಕ್ಕೆರಡು ಜೀವರಲ್ಲಿ ಕಾಣುತ್ತದೆ

**ಮಾಧುರ್ಯದ್ರವಶೈತ್ಯಾದಿನೀರಧರ್ಮಾಸ್ತರಙ್ಗಕೇ ।**
**ಅನುಗಮ್ಯಾಥ ತನ್ನಿಷ್ಠೇ ಫೇನೇಽಪ್ಯನುಗತಾ ಯಥಾ ॥ ೪೩ ॥**

**ಸಾಕ್ಷಿಸ್ಥಾಃ ಸಚ್ಚಿದಾನನ್ದಾಃ ಸಂಬನ್ಧಾದ್ವ್ಯಾವಹಾರಿಕೇ ।**
**ತದ್ದ್ವಾರೇಣಾನುಗಚ್ಛನ್ತಿ ತಥೈವ ಪ್ರಾತಿಭಾಸಿಕೇ ॥ ೪೪ ॥**

೪೩–೪೪. ಸಿಹಿ, ನೀರಾಗಿರುವದು, ತಂಪು– ಮುಂತಾದ ನೀರಿನ ಧರ್ಮಗಳು ಅಲೆಯಲ್ಲಿಯೂ ಬೆಂಬಿಡಿದು ಬಂದು ಆ (ಅಲೆಯಲ್ಲಿರುವ) ನೊರೆಯಲ್ಲಿಯೂ ಹೇಗೆ ಬಂದು ಸೇರಿಕೊಂಡಿರುವವೋ, ಹಾಗೆಯೇ ಸಾಕ್ಷಿಯಲ್ಲಿರುವ ಸಚ್ಚಿದಾನಂದಧರ್ಮಗಳು ಸಂಬಂಧದಿಂದ ವ್ಯಾವಹಾರಿಕಜೀವನಲ್ಲಿಯೂ ಅವನ ಮೂಲಕ ಪ್ರಾತಿಭಾಸಿಕಜೀವನಲ್ಲಿಯೂ ಬೆಂಬಿಡಿದು ಬಂದು ಸೇರಿಕೊಂಡಿರುತ್ತವೆ.

## ವಿವರಣೆ

ಇಲ್ಲಿ ಹೇಳಿರುವ ನೀರಿನ ದೃಷ್ಟಾಂತದಲ್ಲಿ ಅಲೆ, ನೊರೆ– ಇವುಗಳಿಗೆ ನಿಜವಾದ ಸಂಬಂಧವಿದೆ; ದಾರ್ಷ್ಟಾಂತಿಕವಾದ ಸಾಕ್ಷಿ, ವ್ಯಾವಹಾರಿಕಜೀವ, ಪ್ರಾತಿಭಾಸಿಕಜೀವ– ಇವರಿಗೆ ಆರೋಪಿತಸಂಬಂಧವಿದೆ. ಅಥವಾ ನೀರಿಗಿಂತ ಬೇರೆಯಾದ ಅಲೆ, ನೊರೆ– ಇವು ಇಲ್ಲವೇ ಇಲ್ಲದಿರುವಂತೆ ಸಾಕ್ಷಿಗಿಂತ ವ್ಯತಿರಿಕ್ತರಾದ ವ್ಯಾವಹಾರಿಕಪ್ರಾತಿಭಾಸಿಕರೂ ಇಲ್ಲವೇಇಲ್ಲವಾದ್ದರಿಂದ ತೋರಿಕೆಯಿಂದ ವ್ಯಾವಹಾರಿಕಪ್ರಾತಿಭಾಸಿಕರ ಅಸ್ತಿತ್ವವನ್ನು ಒಪ್ಪಿ ಹೀಗೆ ಸಾಕ್ಷಿಯ ಸಚ್ಚಿದಾನಂದಗಳೇ ವ್ಯಾವಹಾರಿಕಪ್ರಾತಿಭಾಸಿಕಜೀವರಲ್ಲಿ ತೋರುತ್ತವೆ ಎಂದು ಹೇಳಿದೆಯೆಂದೂ ಕಲ್ಪಿಸಬಹುದು.

ಇಲ್ಲಿ ಪರಮಾರ್ಥವಾಗಿ ಬ್ರಹ್ಮವೇ ಆಗಿರುವ ಪಾರಮಾರ್ಥಿಕಜೀವನ ಸಚ್ಚಿದಾನಂದರೂಪವು ವ್ಯಾವಹಾರಿಕಪ್ರಾತಿಭಾಸಿಕಜೀವರಲ್ಲಿ ತೋರುತ್ತಿವೆ ಎಂಬುದು ಉಪಲಕ್ಷಣಕ್ಕಾಗಿ ಹೇಳಿದ್ದು. ಜಗತ್ತಿನಲ್ಲಿ ತೋರುವ ಅಸ್ತಿಭಾತಿಪ್ರಿಯಗಳೂ ಬ್ರಹ್ಮದವೇ ಆಗಿದ್ದು ಜಗತ್ತಿನಲ್ಲಿ ತೋರುತ್ತಿರುವವು ಎಂದು ಇಪ್ಪತ್ತು ಇಪ್ಪತ್ತೊಂದನೆಯ ಶ್ಲೋಕಗಳಲ್ಲಿ ಹೇಳಿರುವದನ್ನೂ ಇಲ್ಲಿ ಅನುಸಂಧಾನಮಾಡಿಕೊಳ್ಳಬೇಕು.

ಲಯೇ ಫೇನಸ್ಯ ತದ್ಧರ್ಮಾ ದ್ರವಾದ್ಯಾಃ ಸ್ಯುಸ್ತರಙ್ಗಕೇ |
ತಸ್ಯಾಪಿ ವಿಲಯೇ ನೀರೇ ತಿಷ್ಠನ್ತ್ಯೇತೇ ಯಥಾ ಪುರಾ ॥ ೪೫ ॥
ಪ್ರಾತಿಭಾಸಿಕಜೀವಸ್ಯ ಲಯೇ ಸ್ಯುರ್ವ್ಯಾವಹಾರಿಕೇ |
ತಲ್ಲಯೇ ಸಚ್ಚಿದಾನನ್ದಾಃ ಪರ್ಯವಸ್ಯನ್ತಿ ಸಾಕ್ಷಿಣಿ ॥ ೪೬ ॥

೪೫–೪೬. ನೊರೆಯು ಲಯವಾದರೆ ಅದರ ಧರ್ಮಗಳಾದ ದ್ರವತ್ವವೇ ಮುಂತಾದವು ಅಲೆಯಲ್ಲಿರುವವು; ಅದೂ ಲಯವಾದರೆ ಮೊದಲಿನಂತೆಯೇ ನೀರಿನಲ್ಲಿರುತ್ತವೆ. ಪ್ರಾತಿಭಾಸಿಕಜೀವನು ಲಯವಾದರೆ ಸಚ್ಚಿದಾನಂದಗಳು ವ್ಯಾವಹಾರಿಕನಲ್ಲಿ ಬಂದು ಸೇರುತ್ತವೆ; ಅವನೂ ಲಯವಾದರೆ ಸಾಕ್ಷಿಯಲ್ಲಿ ಕೊನೆಗಾಣುತ್ತವೆ.

## ವಿವರಣೆ

ದೃಷ್ಟಾಂತದಲ್ಲಿ ನೊರೆಯು ನಾಶವಾಗಿ ತೆರೆಯಲ್ಲಿಯೂ ತೆರೆಯು ನಾಶವಾಗಿ ನೀರಿನಲ್ಲಿಯೂ ಹೋದಾಗ ಕ್ರಮವಾಗಿ ನೊರೆಯ ಧರ್ಮಗಳು ತೆರೆಯಲ್ಲಿಯೂ, ತೆರೆಯ ಧರ್ಮಗಳು ನೀರಿನಲ್ಲಿಯೂ ಎಂದಿನಂತೆ ಉಳಿದುಕೊಳ್ಳುತ್ತವೆ– ಎಂಬುದು ಸಾಮಾನ್ಯರ ದೃಷ್ಟಿಯಿಂದ ಹೇಳಿದ್ದಾಗಿದೆ. ಸರಿಯಾಗಿ ನೋಡಿದರೆ ನೊರೆಯೂ ತಾನಿರುವಾಗಲೂ ಅಲೆಗಿಂತ ಬೇರೆಯಲ್ಲ, ಅಲೆಯು ತಾನಿರುವಾಗಲೂ ನೀರಿಗಿಂತ ಬೇರೆಯಲ್ಲ. ಇದರಂತೆಯೇ ಕನಸು ಅಳಿಯಲು ಪ್ರಾತಿಭಾಸಿಕನು ವ್ಯಾವಹಾರಿಕಜೀವನಾಗುತ್ತಾನೆ; ವ್ಯವಹಾರವು ಜ್ಞಾನದಿಂದ ಅಳಿಯಲು ಪಾರಮಾರ್ಥಿಕಜೀವನಾಗುತ್ತಾನೆ ; ಆ ಪಾರಮಾರ್ಥಿಕಜೀವನೂ ಆರೋಪಿತಜೀವತ್ವವು ಹೋಗಲು ಬ್ರಹ್ಮವೇ ಆಗಿ ಉಳಿಯುತ್ತಾನೆ– ಎಂಬುದು ಗ್ರಂಥಕರ್ತರ ಆಶಯವಾದರೂ ಆಯಾ ಜೀವತ್ವವು ತೋರದೆ ಹೋದಮೇಲೆಯೇ ಬ್ರಹ್ಮತ್ವವು ಬರುತ್ತದೆ ಎಂದು ತಿಳಿಯುವ ಕಾರಣವಿಲ್ಲ. ಏಕೆಂದರೆ ನಿಜವಾಗಿ ಸ್ವಪ್ನದಲ್ಲಿ ಪ್ರಾತಿಭಾಸಿಕಜೀವನು ತೋರುತ್ತಿರುವಾಗಲೂ ಅಲ್ಲಿಯೂ ಸಾಕ್ಷಿಯು ಇದ್ದೇ ಇರುತ್ತಾನೆ ; ಸಾಕ್ಷಿಗಿಂತ ವ್ಯತಿರಿಕ್ತನಾಗಿ ಸ್ವತಂತ್ರನಾದ ಪ್ರಾತಿಭಾಸಿಕಜೀವನು ಇರುವದೇ ಇಲ್ಲ. ಇದರಂತೆಯೇ ವ್ಯಾವಹಾರಿಕಜೀವನೂ ಪಾರಮಾರ್ಥಿಕಜೀವನಿಗಿಂತ ವ್ಯತಿರಿಕ್ತನಾಗಿರುವದಿಲ್ಲ ; ಆ ವ್ಯಾವಹಾರಿಕಜೀವನು ಪಾರಮಾರ್ಥವಾಗಿ ಬ್ರಹ್ಮವೇ ಆಗಿರುತ್ತಾನೆ. ಈ ಅರ್ಥವನ್ನು ಹಿಂದೆ ಹೇಳಿರುವ ಸವಿಕಲ್ಪನಿರ್ವಿಕಲ್ಪಸಮಾಧಿಗಳಿಂದ ಮನಗಾಣಬಹುದು ಎಂಬಿದು ಗ್ರಂಥಕಾರರ ಒಟ್ಟು ಅಭಿಪ್ರಾಯವು.

---

# ದೃಗ್ದೃಶ್ಯವಿವೇಕಗ್ರಂಥದ ಸಾರ

೧–೫. ವಿಷಯಗಳು ದೃಶ್ಯವೇ; ಇಂದ್ರಿಯವು ವಿಷಯಗಳ ದೃಷ್ಟಿಯಿಂದ ದೃಕ್ಕೂ ಮನಸ್ಸಿನ ದೃಷ್ಟಿಯಿಂದ ದೃಶ್ಯವೂ ಆಗಿದೆ; ಹೀಗೆಯೇ ಮನಸ್ಸು ಇಂದ್ರಿಯಕ್ಕೆ ದೃಕ್ಕಾದರೂ ಸಾಕ್ಷಿಗೆ ದೃಶ್ಯವಾಗಿದೆ. ಸಾಕ್ಷಿಯೊಂದೇ ಪರಮಾರ್ಥದೃಕ್ಕು; ಅದು ನಿರ್ವಿಕಾರವು, ಸ್ವಯಂಪ್ರಕಾಶವಾಗಿ ಎಲ್ಲವನ್ನೂ ಬೆಳಗುತ್ತಿರುವದು.

೬–೧೨. ಬುದ್ಧಿಯಲ್ಲಿ ಚಿದಾಭಾಸದ ಸಂಬಂಧದಿಂದ ಅಹಂಕಾರ, ಅಂತಃಕರಣ– ಎಂಬ ಎರಡು ವಿಭಾಗವು ತೋರುತ್ತಿರುವದು. ಅಹಂಕಾರಕ್ಕೆ ಚಿದಾಭಾಸದೊಡನೆ ಸಹಜ, ದೇಹದೊಡನೆ ಕರ್ಮಜ, ಸಾಕ್ಷಿಯೊಡನೆ ಭ್ರಾಂತಿಜ– ಎಂಬ ಮೂರು ಬಗೆಯ ತಾದಾತ್ಮ್ಯವಿದೆ. ಸಹಜತಾದಾತ್ಮ್ಯಕ್ಕೆ ನಿವೃತ್ತಿಯಿಲ್ಲ; ಕರ್ಮಜಕ್ಕೆ ಕರ್ಮಕ್ಷಯದಿಂದಲೂ ಭ್ರಾಂತಿಜಕ್ಕೆ ಜ್ಞಾನದಿಂದಲೂ ನಾಶವಾಗುವದು. ಈ ಅಹಂಕಾರತಾದಾತ್ಮ್ಯವು ಸುಷುಪ್ತಿಯಲ್ಲಿ ಲಯವಾಗಿದ್ದು ಸ್ವಪ್ನದಲ್ಲಿ ಅರ್ಧವಿರುತ್ತದೆ, ಎಚ್ಚರದಲ್ಲಿ ಪೂರ್ಣವಾಗಿರುತ್ತದೆ. ಅಂತಃಕರಣವೃತ್ತಿಗಳು ಚಿದಾಭಾಸದೊಡಗೂಡಿ ಸ್ವಪ್ನದಲ್ಲಿ ವಾಸನೆಗಳನ್ನೂ ಎಚ್ಚರದಲ್ಲಿ ವಿಷಯಗಳನ್ನೂ ಕಲ್ಪಿಸುತ್ತಿರುವವು, ಅಂತೂ ಬುದ್ಧಿಯೆಂಬ ಲಿಂಗಕ್ಕೇ ಜಾಗ್ರತ್ಸ್ವಪ್ನಸುಷುಪ್ತಿಗಳಾಗುತ್ತಿರುವವು.

೧೩–೧೯. ಬ್ರಹ್ಮದಲ್ಲಿರುವ ಮಾಯೆಯ ವಿಕ್ಷೇಪಶಕ್ತಿಯು ಲಿಂಗಶರೀರದಿಂದ ಮೊದಲಾಗಿ ಸಮಸ್ತಬ್ರಹ್ಮಾಂಡವನ್ನೂ ಸೃಷ್ಟಿಸಿರುತ್ತದೆ; ಆವರಣವು ದೃಗ್ದೃಶ್ಯಭೇದವನ್ನೂ ಜಗದ್ಬ್ರಹ್ಮಭೇದವನ್ನೂ ಮರೆಮಾಡಿರುತ್ತದೆ. ಆವರಣವು ನಾಶವಾದರೆ ದೃಕ್ಕಾದ ಸಾಕ್ಷಿಯು ಬ್ರಹ್ಮವೇ, ಬ್ರಹ್ಮವು ನಿತ್ಯನಿರ್ವಿಕಾರವೇ ಎಂಬಿದು ಸ್ಫುಟವಾಗಿ ತಿಳಿಯುವದು.

೨೦–೩೧. ಇದೆ, ತೋರುತ್ತಿದೆ, ಪ್ರಿಯವಾಗಿದೆ, ಇಂಥ ಹೆಸರುಳ್ಳದ್ದು, ಇಂಥ ರೂಪವುಳ್ಳದ್ದು– ಎಂದು ಒಂದೊಂದು ವಸ್ತುವಿನಲ್ಲಿಯೂ ಐದು ಅಂಶಗಳಿವೆ. ಇವುಗಳಲ್ಲಿ ಮೊದಲನೆಯ ಮೂರು ಸಚ್ಚಿದಾನಂದಬ್ರಹ್ಮದ ಸ್ವರೂಪವು, ಮಿಕ್ಕೆರಡೂ ಜಗದ್ರೂಪವು. ನಾಮರೂಪಗಳನ್ನು ಕೈಬಿಟ್ಟು ಉಳಿದಿರುವ ಬ್ರಹ್ಮರೂಪವನ್ನು ಸಮಾಧಿಯಿಂದ ಚಿಂತಿಸುತ್ತಿರಬೇಕು. ಈ ಸಮಾಧಿಯನ್ನು ಹೃದಯದಲ್ಲಾದರೂ ಹೊರಗಾದರೂ ಮಾಡಬಹುದು. ಸಮಾಧಿಯು ಸವಿಕಲ್ಪವೆಂದೂ ನಿರ್ವಿಕಲ್ಪವೆಂದೂ ಎರಡು ವಿಧ. ಸವಿಕಲ್ಪವು ದೃಶ್ಯಾನುವಿದ್ಧವೆಂದೂ ಶಬ್ದಾನುವಿದ್ಧವೆಂದೂ ಎರಡು ವಿಧವಾಗಿರುತ್ತದೆ. ನಾನು ಅಂತಃಕರಣವೃತ್ತಿಗಳೆಲ್ಲಕ್ಕೂ ಸಾಕ್ಷಿಯು ಎಂದು ಚಿಂತಿಸುವದು ದೃಶ್ಯಾನುವಿದ್ಧವು; ನಾನು ಅಸಂಗಸಚ್ಚಿದಾನಂದನೂ ಸ್ವಯಂಪ್ರಕಾಶನೂ ಅದ್ವಿತೀಯನೂ

ಆಗಿರುವೆನೆಂದು ಚಿಂತಿಸುವದು ಶಬ್ದಾನುವಿದ್ಧವು. ಇವೆರಡೂ ಒಳಗಿನ ಸವಿಕಲ್ಪ ಸಮಾಧಿಗಳು. ಇದರಂತೆ ಸನ್ಮಾತ್ರವನ್ನು ನಾಮರೂಪಗಳಿಂದ ವಿಂಗಡಿಸಿ ಚಿಂತಿಸುವದು ದೃಶ್ಯಾನುವಿದ್ಧವು; ಸಚ್ಚಿದಾನಂದಾಖಂಡೈಕರಸವೆಂದು ಚಿಂತಿಸುವದು ಶಬ್ದಾನುವಿದ್ಧವು. ಇವೆರಡೂ ಹೊರಗಿನ ಸವಿಕಲ್ಪಸಮಾಧಿಗಳು. ಆನಂದಾನುಭವದಿಂದ ದೃಶ್ಯಶಬ್ದಗಳ ಸಂಬಂಧವನ್ನೆಲ್ಲ ಬಿಟ್ಟು ಆತ್ಮಸ್ವರೂಪದಲ್ಲಿಯೇ ಗಾಳಿಯಿಲ್ಲದ ಕಡೆಯಲ್ಲಿರುವ ದೀಪದಂತೆ ಅಚಲನಾಗಿರುವದು ನಿರ್ವಿಕಲ್ಪಸಮಾಧಿಯು. ಹೀಗೆ ದೇಹಾಭಿಮಾನವನ್ನೂ ನಾಮರೂಪಗಳ ಅಭಿಮಾನವನ್ನೂ ಬಿಟ್ಟು ಪರಮಾತ್ಮನಲ್ಲಿಯೇ ನಿಂತವನು ಕೃತಕೃತ್ಯನು.

೩೨–೪೨. ಜೀವಬ್ರಹ್ಮೈಕ್ಯವನ್ನು ಮಹಾವಾಕ್ಯಗಳಲ್ಲಿ ತಿಳಿಸಿರುತ್ತದೆ. ಮಹಾವಾಕ್ಯದಲ್ಲಿ ಹೇಳಿರುವ ಜೀವನು ಪಾರಮಾರ್ಥಿಕಜೀವನೇ. ಅವಚ್ಛಿನ್ನನು ಪಾರಮಾರ್ಥಿಕಜೀವನು, ಚಿದಾಭಾಸನು ವ್ಯಾವಹಾರಿಕಜೀವನು, ಸ್ವಾಪ್ನನು ಪ್ರಾತಿಭಾಸಿಕಜೀವನು– ಎಂದು ಜೀವರು ಮೂರು ಬಗೆ. ಪ್ರಾತಿಭಾಸಿಕಜೀವನೂ ವ್ಯಾವಹಾರಿಕಜೀವನೂ ತಮ್ಮ ತಮ್ಮ ಅವಸ್ಥೆಯ ಜಗತ್ತನ್ನು ಸತ್ಯವೆಂದು ಬಗೆಯುತ್ತಾರೆ; ಆದರೆ ವ್ಯಾವಹಾರಿಕಜೀವನಿಗೆ ಪ್ರಾತಿಭಾಸಿಕಜಗತ್ತು ಮಿಥ್ಯೆಯಾಗಿರುತ್ತದೆ. ಪಾರಮಾರ್ಥಿಕಜೀವನಿಗೆ ವ್ಯಾವಹಾರಿಕಜಗತ್ತೂ ಪ್ರಾತಿಭಾಸಿಕಜಗತ್ತೂ ಮಿಥ್ಯೆಯಾಗಿರುತ್ತವೆ; ಅಥವಾ ಅವನು ತಾನು ಬ್ರಹ್ಮವೆಂಬುದನ್ನು ಹೊರತು ಮತ್ತೇನನ್ನೂ ಕಾಣುವದೇ ಇಲ್ಲ. ಇವನನ್ನೇ ಬ್ರಹ್ಮನೆಂದು ಮಹಾವಾಕ್ಯಗಳು ಹೇಳುತ್ತವೆ.

೪೩–೪೬. ಹೀಗೆ ಪಾರಮಾರ್ಥಿಕಜೀವನೇ ಸಚ್ಚಿದಾನಂದಬ್ರಹ್ಮವಾಗಿರುತ್ತಾನೆ. ಇವನ ಸಚ್ಚಿದಾನಂದಗಳೇ ವ್ಯಾವಹಾರಿಕಜೀವನಿಗೂ ಅವನ ಮೂಲಕ ಪ್ರಾತಿಭಾಸಿಕಜೀವನಿಗೂ ಬಂದು ಸೇರಿಕೊಂಡಿರುತ್ತವೆ. ಪ್ರಾತಿಭಾಸಿಕಜೀವನು ಇಲ್ಲವಾಗಲು ಅವನ ಸಚ್ಚಿದಾನಂದಗಳು ವ್ಯಾವಹಾರಿಕಜೀವನಲ್ಲಿರುವವು; ಅವನೂ ಲಯವಾಗಲು ಸಾಕ್ಷಿಚೈತನ್ಯದಲ್ಲಿಯೇ ಅವು ಕೊನೆಗಾಣುವವು.

———

# ಶ್ಲೋಕಾನುಕ್ರಮಣಿಕೆ

ಇಲ್ಲಿ ಕೊಟ್ಟಿರುವವು ಶ್ಲೋಕಸಂಖ್ಯೆಗಳು. (ಸ) ಎಂದು ಹಾಕಿರುವ ಸಂಜ್ಞೆಯು ಆ ಶ್ಲೋಕವು ಸರಸ್ವತೀರಹಸ್ಯೋಪನಿಷತ್ತಿನಲ್ಲಿದೆ ಎಂಬುದನ್ನು ಸೂಚಿಸುತ್ತದೆ.


| | |
|---|---|
| ಅಖಣ್ಡೈಕರಸಂ ವಸ್ತು | ೨೮ |
| ಅತ್ರಾಪ್ಯಾವೃತಿನಾಶೇನ (ಸ) | ೧೯ |
| ಅನಾದಿಕಾಲಮಾರಭ್ಯ | ೩೭ |
| ಅನ್ತಃಕರಣವೃತ್ತಿಶ್ಚ | ೧೧ |
| ಅನ್ತರ್ದೃಗ್ದೃಶ್ಯಯೋಃ (ಸ) | ೧೫ |
| ಅವಚ್ಛಿನ್ನಸ್ಯ ಜೀವಸ್ಯ | ೩೪ |
| ಅವಚ್ಛಿನ್ನಶ್ಚಿದಾಭಾಸಃ | ೩೨ |
| ಅವಚ್ಛೇದಃ ಕಲ್ಪಿತಃ ಸ್ಯಾತ್ | ೩೩ |
| ಅಸಙ್ಗಃ ಸಚ್ಚಿದಾನನ್ದಃ (ಸ) | ೨೫ |
| ಅಸ್ತಿ ಭಾತಿ ಪ್ರಿಯಂ (ಸ) | ೨೦ |
| ಅಸ್ಯ ಜೀವತ್ವಮಾರೋಪಾತ್ (ಸ) | ೧೭ |
| ಅಹಂಕಾರಲಯೇ ಸುಪ್ತೌ | ೧೦ |
| ಅಹಂಕಾರಸ್ಯ ತಾದಾತ್ಮ್ಯಮ್ | ೮ |
| ಆನ್ಧ್ಯಮಾನ್ದ್ಯಪಟುತ್ವೇಷು | ೩ |
| ಉಪೇಕ್ಷ್ಯ ನಾಮರೂಪೇ (ಸ) | ೨೨ |
| ಕಾಮಃ ಸಙ್ಕಲ್ಪಸನ್ದೇಹೌ | ೪ |
| ಕಾಮಾದ್ಯಾಶ್ಚಿತ್ತಗಾ (ಸ) | ೨೪ |
| ಖವಾಯ್ವಗ್ನಿಜಲೋರ್ವೀಷು | ೨೧ |
| ಚಿಚ್ಛಾಯಾವೇಶತೋ (ಸ) | ೬ |
| ಚಿದಾಭಾಸಸ್ಥಿತಾ ನಿದ್ರಾ | ೩೮ |
| ಛಾಯಾಹಙ್ಕಾರಯೋರೈಕ್ಯಮ್ | ೭ |
| ಜೀವೋ ಧೀಸ್ಥಚಿದಾಭಾಸೋ | ೩೭ |
| ತಥಾ ಸರ್ಗಬ್ರಹ್ಮಣೋಶ್ಚ (ಸ) | ೧೮ |
| ದೇಹಾಭಿಮಾನೇ ಗಳಿತೇ (ಸ) | ೩೦ |
| ನೀಲಪೀತ ಸ್ಥೂಲ ಸೂಕ್ಷ್ಮ | ೨ |
| ನೋದೇತಿ ನಾಸ್ತಮೇತ್ಯೇಷಾ | ೫ |
| ಪಾರಮಾರ್ಥಿಕ ಜೀವಸ್ತು | ೪೨ |
| ಪ್ರತೀತಿಕಾಲ ಏವೈತೇ | ೩೯ |
| ಪ್ರಾತಿಭಾಸಿಕಜೀವಸ್ತು | ೪೬ |
| ಪ್ರಾತಿಭಾಸಿಕಜೀವೋ ಯಃ | ೪೦ |
| ಬ್ರಹ್ಮಣ್ಯವಸ್ಥಿತಾ ಮಾಯಾ | ೩೫ |
| ಭಿದ್ಯತೇ ಹೃದಯಗ್ರನ್ಥಿಃ (ಸ) | ೩೧ |
| ಮನೋಹಂಕೃತ್ಯುಪಾದಾನಮ್ | ೧೨ |
| ಮಾಧುರ್ಯದ್ರವಶೈತ್ಯಾನಿ | ೪೩ |
| ರೂಪಂ ದೃಶ್ಯಂ ಲೋಚನಂ ದೃಕ್ | ೧ |
| ಲಯೇ ಫೇನಸ್ಯ ತದ್ಧರ್ಮಾಃ | ೪೫ |
| ವ್ಯಾವಹಾರಿಕಜೀವೋ ಯಃ | ೪೧ |
| ಶಕ್ತಿದ್ವಯಂ ಹಿ ಮಾಯಾಯಾಃ (ಸ) | ೧೩ |
| ಸಂಬನ್ಧಿನೋಽಪಿ ಸತೋರ್ನಾಸ್ತಿ | ೯ |
| ಸವಿಕಲ್ಪೋ ನಿರ್ವಿಕಲ್ಪಃ (ಸ) | ೨೩ |
| ಸಾಕ್ಷಿಣಃ ಪುರತೋ ಭಾತಿ (ಸ) | ೧೬ |
| ಸಾಕ್ಷಿಸ್ಥಾಃ ಸಚ್ಚಿದಾನನ್ದಾಃ | ೪೪ |
| ಸೃಷ್ಟಿರ್ನಾಮ ಬ್ರಹ್ಮರೂಪೇ | ೧೪ |
| ಸ್ತಬ್ಧೀಭಾವೋ ರಸಾಸ್ವಾದಾತ್ (ಸ) | ೨೯ |
| ಸ್ವಾನುಭೂತಿರಸಾವೇಶಾತ್ (ಸ) | ೨೬ |
| ಹೃದೀವ ಬಾಹ್ಯದೇಶೇಽಪಿ (ಸ) | ೨೭ |

# ಪರಿಶಿಷ್ಟ

## ಅವಸ್ಥಾತ್ರಯಪರೀಕ್ಷೆ

ಅವಸ್ಥಾತ್ರಯಪರೀಕ್ಷೆಯು ಉಪನಿಷತ್ತುಗಳಲ್ಲಿ ಹೇಗಿವೆ ಎಂಬುದನ್ನು ಮುಖ್ಯವಾಗಿ ಮಾಂಡೂಕ್ಯ, ಬೃಹದಾರಣ್ಯಕ- ಈ ಉಪನಿಷತ್ತುಗಳ ಭಾಷ್ಯಗಳಿಂದ ಅರಿತುಕೊಳ್ಳಬೇಕು. ಇಲ್ಲಿ ಪ್ರಕೃತಪ್ರಕರಣದ ವಿಮರ್ಶೆಗೆ ಬೇಕಾಗುವಷ್ಟು ವಿಷಯಗಳನ್ನು ಮಾತ್ರ ಆ ಭಾಷ್ಯಗಳಿಂದ ಸಂಗ್ರಹಿಸಲಾಗಿದೆ.

(ಆಕ್ಷೇಪ) :– "ಈ ಆತ್ಮನು ಬ್ರಹ್ಮ, (ಆ ಈ ಆತ್ಮನು ನಾಲ್ಕು ಪಾದಗಳುಳ್ಳವನು)" (ಮಾಂ ೨) ಎಂದು ಪ್ರತ್ಯಗಾತ್ಮನಿಗೆ ನಾಲ್ಕು ಪಾದಗಳಿರುವವೆಂದು ಪ್ರಕೃತವಾಗಿರುವಲ್ಲಿ ಅಂತರಿಕ್ಷಲೋಕವೇ ಮುಂತಾದವು (ಇವನ) ತಲೆಯೇ ಮುಂತಾದ ಅವಯವಗಳೆಂದು (ಹೇಳಿರುವದು) ಹೇಗೆ ಸರಿ ?

(ಪರಿಹಾರ) :– ಇದು ತಪ್ಪಲ್ಲ. ಏಕೆಂದರೆ ಆಧಿದೈವಿಕದೊಡಗೂಡಿರುವ ಸರ್ವಪ್ರಪಂಚವೂ ಈ ಆತ್ಮನೊಡನೆ (ಸೇರಿ) ನಾಲ್ಕು ಪಾದಗಳು ಎಂದು (ಶ್ರುತಿಯ) ಅಭಿಪ್ರಾಯ. ಹೀಗಾದರೆ ಪ್ರಪಂಚವೆಲ್ಲವೂ ಬಾಧಿತವಾದರೆ ಅದ್ವೈತವು ಸಿದ್ಧವಾಗುವದು. ಸರ್ವಭೂತಗಳಲ್ಲಿಯೂ ಇರುವ ಒಬ್ಬ ಆತ್ಮನನ್ನೇ ಕಂಡುಕೊಂಡಂತೆಯೂ ಸರ್ವಭೂತಗಳನ್ನೂ (ತನ್ನ) ಆತ್ಮನಲ್ಲಿ ಕಂಡುಕೊಂಡಂತೆಯೂ ಆಗುವದು. ಮತ್ತು ಹಾಗಾದರೆ 'ಯಸ್ತು ಸರ್ವಾಣಿ ಭೂತಾನಿ' (ಈ. ೬) ಎಂಬುದೇ ಮುಂತಾದ ಶ್ರುತಿಗಳ ಅರ್ಥವನ್ನು (ಇಲ್ಲಿಯೂ) ಸೇರಿಸಿಕೊಂಡಂತೆ ಆಗುವದು. "ಹೀಗಲ್ಲದೆಹೋದರೆ ತನ್ನ ದೇಹದಳತೆಗೆ ಸಿಕ್ಕಿಕೊಂಡಿರುವ ಪ್ರತ್ಯಗಾತ್ಮನನ್ನೇ ಸಾಂಖ್ಯಾದಿಗಳಂತೆ ಕಂಡುಕೊಂಡಂತೆ ಆಗುವದು ; ಹಾಗಾದರೆ ಅದ್ವೈತವು ಎಂಬ ಶ್ರುತಿಕೃತವಾದ (ಸಿದ್ಧಾಂತ) ವಿಶೇಷವು ಇಲ್ಲದೆಹೋಗುವದು. ಏಕೆಂದರೆ (ಆಗ ಈ ಮತಕ್ಕೂ) ಸಾಂಖ್ಯರೇ ಮೊದಲಾದವರ (ಮತಕ್ಕೂ) ಹೆಚ್ಚುಕಡಿಮೆಯೇನೂ ಇರುವದಿಲ್ಲ."

—ಮಾಂ. ಭಾ. ೩ (ಭಾ. ಭಾ. ೧೨)

ಈ ಮೇಲಿನ ಭಾಷ್ಯಭಾಗದಲ್ಲಿ ಅವಸ್ಥೆಗಳನ್ನು ಪರಿಶೀಲಿಸುವಾಗ ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ– ಈ ಮೂರನ್ನೂ ಒಳಗೊಂಡಿರುವ ಸಮಷ್ಟಿಪ್ರಪಂಚವನ್ನೂ ಸೇರಿಸಿಕೊಂಡಿರುವ ಆತ್ಮನನ್ನೇ ವೈಶ್ವಾನರನೆಂದು ಎಣಿಸಬೇಕು ; ಹಾಗೆ ಮಾಡದಿದ್ದರೆ ಅದ್ವೈತಸಿದ್ಧಿಯಾಗಲಾರದು ಎಂದು ಸ್ಪಷ್ಟವಾಗಿ ಹೇಳಿರುತ್ತದೆ.

## ಸ್ವಪ್ನಸುಷುಪ್ತಿಗಳು

(೧) "ಎಚ್ಚರದಲ್ಲಿ ಕಾಣುತ್ತಾನಲ್ಲ, ಅದೂ ಸ್ವಪ್ನವೆಂದೇ ಶ್ರುತಿಯ ಮತವಾಗಿರುತ್ತದೆ."

—ಬೃ. ಭಾ. ೪–೩–೧೯ (ಭಾ. ಭಾ. ೨೦೮)

(೨) "ಸ್ವಪ್ನವೃತ್ತಿಯಲ್ಲಿ ಒಳಗೆ ಚಿತ್ತದಿಂದ ಕಲ್ಪಿತವಾದದ್ದಾದರೆ ಅಸತ್ತು, ಹೊರಗೆ ಚಿತ್ತದಿಂದ ಗ್ರಹಿಸಲ್ಪಟ್ಟದ್ದು ಸತ್ತು ; ಇವೆರಡಕ್ಕೂ ವೈತಥ್ಯವು ಕಂಡಿದೆ. ಜಾಗ್ರದ್ವೃತ್ತಿಯಲ್ಲಿಯೂ ಒಳಗೆ ಚಿತ್ತದಿಂದ ಕಲ್ಪಿತವಾದದ್ದಾದರೆ ಅಸತ್ತು, ಹೊರಗೆ ಚಿತ್ತದಿಂದ ಗ್ರಹಿಸಲ್ಪಟ್ಟದ್ದು ಸತ್ತು. (ಆದ್ದರಿಂದ) ಇವೆರಡಕ್ಕೂ ವೈತಥ್ಯವು ಯುಕ್ತವು"

—ಮಾಂ. ಕಾ. ೨–೯, ೧೦.

ಮೇಲಿನ ವಾಕ್ಯಗಳಲ್ಲಿ ಸ್ವಪ್ನಜಾಗ್ರತ್ತುಗಳೆರಡೂ ಸಮಾನವೆಂದೇ ತಿಳಿಸುವದು ಶ್ರುತಿಯ ಪರಮಸಿದ್ಧಾಂತವೆಂದು ಹೇಳಿದೆ. ಇಂಥ ವಾಕ್ಯಗಳು ಭಾಷ್ಯದಲ್ಲಿ ಮತ್ತೆ ಮತ್ತೆ ಬರುತ್ತವೆ. ಎಚ್ಚರವು ಅಹಂಕಾರದ ಪೂರ್ಣವಿಕಾಸವೆಂದೂ ಸ್ವಪ್ನವು ಅರ್ಧವಿಕಾಸವೆಂದೂ ಎಣಿಸುವದು ಜಗನ್ಮಿಥ್ಯಾತ್ವಕ್ಕೆ ಅಡ್ಡಬರುವದೆಂಬುದು ಇದರಿಂದ ಸಿದ್ಧವಾಗುತ್ತದೆ.

(೩) "ಈಗ ಸರ್ವಾತ್ಮಭಾವರೂಪವಾದ ಮೋಕ್ಷವೆಂಬ ಕ್ರಿಯಾಕಾರಕಫಲಶೂನ್ಯವಾದ ವಿದ್ಯಾಫಲವಿದೆಯಲ್ಲ, ಅದನ್ನು ಪ್ರತ್ಯಕ್ಷವಾಗಿ ತೋರಿಸುತ್ತಾರೆ ; ಅಲ್ಲಿ ಅವಿದ್ಯಾಕಾಮಕರ್ಮಗಳು ಇರುವದೇ ಇಲ್ಲ."

—ಬೃ. ಭಾ. ೪–೩–೨೧ (ಭಾ. ಭಾ. ೨೧೩)

(೪) "ಚೈತನ್ಯಜ್ಯೋತಿಯ ಸ್ವಭಾವದವನೇ ಆಗಿದ್ದರೆ ಅಲ್ಲಿ ಏತಕ್ಕೆ ಅರಿಯುವದಿಲ್ಲ ? ಎಂದು ಈ ವಿಷಯದಲ್ಲಿ ಕೇಳಿದೆಯಷ್ಟೆ ? ಅದಕ್ಕೆ

ಪರಸ್ಪರಾಲಿಂಗಿತರಾಗಿರುವ ಸ್ತ್ರೀಪುರುಷರಂತೆ ಏಕರಾಗಿರುವದೆಂಬುದೇ ಹೇತುವೆಂದು ನಾನು ಹೇಳಿರುತ್ತೇನೆ."

—ಬೃ. ಭಾ. ೪-೩-೨೧ (ಭಾ. ಭಾ. ೨೧೪)

(೫) "ಅಂತರ್ಹೃದಯದ ಆಕಾಶವಿದೆಯಲ್ಲ- (ಇಲ್ಲಿ) ಆಕಾಶಶಬ್ದದಿಂದ ಪರಮಾತ್ಮನನ್ನೇ ಹೇಳಿದೆ. ಆ ತನ್ನ ಆತ್ಮನಾದ ಆಕಾಶದಲ್ಲಿ, ಸ್ವಾಭಾವಿಕವಾದ ಅಸಂಸಾರಿಯಾದ ಆತ್ಮಾಕಾಶದಲ್ಲಿ ಮಲಗಿರುತ್ತಾನೆ."

—ಬೃ. ಭಾ. ೨-೧-೧೭ (ಭಾ. ಭಾ. ೨೯೯)

(೬) "ಈ ಅವಸ್ಥೆಯು ಯಾವ ಸಂಸಾರದುಃಖವೂ ಇಲ್ಲದ್ದು."

—ಬೃ. ಭಾ. ೨-೧-೧೯ (ಭಾ. ಭಾ. ೩೦೦)

(೭) "ಹೀಗೆ ಇವನು ಸುಷುಪ್ತಿಕಾಲವಲ್ಲಿ ಎಲ್ಲಾ ಸಂಸಾರಧರ್ಮಗಳನ್ನೂ ದಾಟಿ ಸ್ವಾಭಾವಿಕವಾದ ತನ್ನ ಸ್ವರೂಪದಲ್ಲಿ ಇದ್ದುಕೊಂಡಿರುತ್ತಾನೆ."

—ಬೃ. ಭಾ. ೨-೧-೧೯ (ಭಾ. ಭಾ. ೩೦೧)

ಮೇಲಿನ ವಾಕ್ಯಗಳಲ್ಲಿ ಜೀವನು ಸುಷುಪ್ತಿಯಲ್ಲಿ ಅಸಂಸಾರಿಯಾದ ಪರಮಾತ್ಮಸ್ವರೂಪದಲ್ಲಿಯೇ ಇದ್ದುಕೊಂಡಿರುತ್ತಾನೆ ಎಂದಿದೆ. ಇಂಥ ವಾಕ್ಯಗಳು ಹೇರಳವಾಗಿವೆ ಸುಷುಪ್ತಿಯಲ್ಲಿ ಆವರಣವಿಕ್ಷೇಪಗಳುಂಟೆಂಬ ವಾದವು ಈ ವೇದಾಂತಪ್ರಕ್ರಿಯೆಗೆ ವಿರುದ್ಧವೆಂಬುದು ಸ್ಪಷ್ಟ.

## ಸುಷುಪ್ತಿಸಮಾಧಿಗಳು

(೧) "ಹಾವು ಮುಂತಾದವುಗಳ ರೂಪದಿಂದ ವಿಕಲ್ಪಿಸಿರುವ ಹಗ್ಗದಂತೆ ಮೂರು ಅವಸ್ಥೆಗಳಲ್ಲಿಯೂ ಒಬ್ಬನೇ ಆತ್ಮನು ಅಂತಃಪ್ರಜ್ಞತ್ವವೇ ಮುಂತಾದ ಧರ್ಮಗಳಿಂದ ಕೂಡಿದವನೆಂದು ವಿಕಲ್ಪಿಸುತ್ತಾರೆ ಎಂದು ಯಾವಾಗ ಒಪ್ಪುವೆವೋ ಆಗ ಅಂತಃಪ್ರಜ್ಞತ್ವವೇ ಮುಂತಾದವುಗಳನ್ನು ಅಲ್ಲಗಳೆಯುವ ವಿಜ್ಞಾನವೆಂಬ ಪ್ರಮಾಣವುಂಟಾದ ಸಮಕಾಲದಲ್ಲಿಯೇ ಆತ್ಮನಲ್ಲಿ ಅನರ್ಥಗಳ ಪ್ರಪಂಚವು ತೊಲಗುವದೆಂಬ ಫಲವು ಆಗಿಬಿಡುವದು. ಆದ್ದರಿಂದ ತುರೀಯನನ್ನು ಅರಿತುಕೊಳ್ಳುವದಕ್ಕೆ ಇನ್ನೊಂದು ಪ್ರಮಾಣವನ್ನಾಗಲಿ ಇನ್ನೊಂದು ಸಾಧನವನ್ನಾಗಲಿ ಹುಡುಕಬೇಕಾದದ್ದಿರುವದಿಲ್ಲ."

—ಮಾಂ. ಭಾ. ೭ (ಭಾ. ಭಾ. ೩೯)

(೨) "ಯಾರಿಗಾದರೆ ಬ್ರಹ್ಮಸ್ವರೂಪಕ್ಕಿಂತ ಬೇರೆಯಾದ ಮನಸ್ಸೂ ಇಂದ್ರಿಯಾದಿಗಳೂ ಹಗ್ಗದಂತೆ ಕಲ್ಪಿತವೆಂದಾಗಿರುವವೋ ಬ್ರಹ್ಮಸ್ವರೂಪರಾಗಿರುವ ಅವರಿಗೆ ಅಭಯವೂ ಮೋಕ್ಷವೆಂಬ ಹೆಸರಿನ ಅಕ್ಷಯವಾದ ಶಾಂತಿಯೂ ಸ್ವಭಾವಸಿದ್ಧವಾಗಿರುವದು, ಮತ್ತೊಂದರ ಅಧೀನವಲ್ಲ; ಅವರು ಮಾಡತಕ್ಕದ್ದು ಏನೂ ಹೇಗೂ ಇರುವದಿಲ್ಲ."

—ಮಾಂ. ಕಾ. ಭಾ. ೩-೪೦ (ಭಾ. ಭಾ. ೨೦೦)

ಮೇಲಿನ ವಾಕ್ಯಗಳಲ್ಲಿ ಅವಸ್ಥಾತ್ರಯಪರೀಕ್ಷೆಯು ಸಂಪೂರ್ಣವಾದಾಗ ಅಂತಃಪ್ರಜ್ಞತ್ವಾದಿಗಳು ಆತ್ಮನಲ್ಲಿರುವದಿಲ್ಲ, ಆತ್ಮನು ಅದ್ವಿತೀಯನು ಎಂದೇ ಗೊತ್ತಾಗಿಬಿಡುವದರಿಂದ ಮತ್ತೆ ಮಾಡಬೇಕಾದ ಸಮಾಧ್ಯಾದಿಗಳಿಲ್ಲ ಎಂದು ತಿಳಿಸುತ್ತದೆ.

(೩) "ಸುಷುಪ್ತಿಯನ್ನನುಭವಿಸುವವರು, ಸಮಾಧಿಯಲ್ಲಿರುವವರು, ಮುಕ್ತರು—ಇವರುಗಳಿಗೆ ಭ್ರಾಂತಿಜ್ಞಾನವಿರುವದಿಲ್ಲ; ಆಗ ತಮಗಿಂತ ಬೇರೆಯಾಗಿ ಹೊರಗಿನ ವಿಷಯವು ಕಂಡುಬರುವದೇ ಇಲ್ಲ."

—ಮಾಂ. ಕಾ. ಭಾ. ೪-೫೫ (ಭಾ. ಭಾ. ೨೬೧)

(೪) "ಸುಷುಪ್ತಿ, ಸಮಾಧಿ- ಮುಂತಾದ ಅವಸ್ಥೆಗಳಲ್ಲಿಯೂ ಸ್ವಾಭಾವಿಕವಾಗಿ ಅವಿಭಾಗವೇ ಬಂದೊದಗಿದ್ದರೂ ಮಿಥ್ಯಾಜ್ಞಾನವು ಇನ್ನೂ ಹೋಗದಿರುವದರಿಂದ ಮುನ್ನಿನಂತೆಯೇ ಮತ್ತೆ ಎಚ್ಚರದಲ್ಲಿ ಹೇಗೆ ವಿಭಾಗವಾಗುವದೋ ಹಾಗೆಯೇ ಈ (ಪ್ರಲಯವಲ್ಲಿಯೂ ಅವಿಭಾಗವಿದ್ದರೂ ಸೃಷ್ಟಿಯಲ್ಲಿ ಮತ್ತೆ ವಿಭಾಗವಾಗಬಹುದಾಗಿದೆ)."

—ಸೂ. ಭಾ. ೨-೧-೯ (ಭಾ. ಭಾ. ೪೫)

(೫) "ಜೀವನು ಸುಷುಪ್ತ್ಯಾದಿಗಳಲ್ಲಿ ಉಪಾಧಿಯು ನಾಶವಾಗುವದರಿಂದ ಯಾವ ಬ್ರಹ್ಮದೊಡನೆ ಒಂದಾಗುತ್ತಾನೋ ಆ ಬ್ರಹ್ಮದ ಸ್ವರೂಪವನ್ನು ಈಗ ಶ್ರುತಿವಶದಿಂದ ನಿರ್ಧರಿಸಲಾಗುತ್ತದೆ."

— ಸೂ. ಭಾ. ೩-೨-೧೧ (ಭಾ. ಭಾ. ೨೭೬

ಮೇಲಿನ ವಾಕ್ಯಗಳಲ್ಲಿ ಸುಷುಪ್ತಿಸಮಾಧಿಗಳಿಗೆ ಸ್ವರೂಪದಲ್ಲಿ ಯಾವ ಭೇದವೂ ಇಲ್ಲವೆಂದೂ ಪರಮಾರ್ಥದೃಷ್ಟಿಯಿಂದ ನೋಡಿದಾಗ ಅವೆರಡರಲ್ಲಿಯೂ ಜೀವನು ಬ್ರಹ್ಮಸ್ವರೂಪದಿಂದಲೇ ಇದ್ದುಕೊಂಡಿರುವನೆಂದೂ ಹೇಳಿದೆ.

## ಮಾಯೆ, ಅವಿದ್ಯೆ

(೧) "ಹೇಗೆ ಸ್ವಪ್ನವನ್ನು ಕಾಣುವವನು ತಾನು ಒಬ್ಬನೇ ಆಗಿದ್ದು ಎಚ್ಚರ ನಿದ್ರೆಗಳಲ್ಲಿ ಕನಸಿನ ದರ್ಶನವು ಹಿಂಬಾಲಿಸಿಕೊಂಡು ಬಾರದಿರುವದರಿಂದ ಸ್ವಪ್ನದರ್ಶನವೆಂಬ ಮಾಯೆಯ ಸೋಂಕಿಲ್ಲದೆ ಇರುವನೋ, ಹಾಗೆಯೇ ಅವಸ್ಥಾತ್ರಯಸಾಕ್ಷಿಯು ತಾನೊಬ್ಬನೇ ಅವ್ಯಭಿಚಾರಿಯಾಗಿರುವದರಿಂದ ವ್ಯಭಿಚಾರಿಯಾದ ಅವಸ್ಥಾತ್ರಯದ ಸೋಂಕಿಲ್ಲದೆ ಇರುತ್ತಾನೆ. ಏಕೆಂದರೆ ಪರಮಾತ್ಮನು ಅವಸ್ಥಾತ್ರಯರೂಪದಿಂದ ತೋರುತ್ತಿರುವನೆಂಬುದು ಹಗ್ಗವು ಹಾವಾಗಿ ತೋರುವಂತೆ ಮಾಯಾಮಾತ್ರವಾಗಿರುತ್ತದೆ." —ಸೂ. ಭಾ. ೨-೧-೯ (ಭಾ. ಭಾ. ೪೨೪)

(೨) "ಅವ್ಯಕ್ತಶಬ್ದದಿಂದ ತಿಳಿಸುವ ಈ ಬೀಜಶಕ್ತಿಯು ಅವಿದ್ಯಾತ್ಮಕವಾಗಿದ್ದು ಪರಮೇಶ್ವರನನ್ನು ಆಶ್ರಯಿಸಿಕೊಂಡಿರುವ ಮಾಯಾಮಯವಾದ ಮಹಾಸುಪ್ತಿಯಲ್ಲವೆ ?"

—ಸೂ. ಭಾ. ೧-೪-೧ (ಭಾ. ಭಾ. ೩೩೯)

(೩) "ಸರ್ವಜ್ಞನಾದ ಈಶ್ವರನ ಸ್ವರೂಪವೇ ಆಗಿರುವಂತೆ ಅವಿದ್ಯೆಯಿಂದ ಕಲ್ಪಿತವಾಗಿ ಅವನೇ ಎಂದಾಗಲಿ ಅವನಿಗಿಂತ ಬೇರೆಯೆಂದಾಗಲಿ ಗೊತ್ತುಪಡಿಸಿ ಹೇಳಲಿಕ್ಕಾಗದಿರುವ, ಸಂಸಾರಪ್ರಪಂಚಕ್ಕೆ ಬೀಜವಾಗಿರುವ ನಾಮರೂಪಗಳನ್ನು ಸರ್ವಜ್ಞನಾದ ಈಶ್ವರನ ಮಾಯೆ, ಶಕ್ತಿ, ಪ್ರಕೃತಿ– ಎಂದು ಶ್ರುತಿಸ್ಮೃತಿಗಳಲ್ಲಿ ಕರೆದಿರುತ್ತದೆ."

—ಸೂ. ಭಾ. ೨-೧-೧೪ (ಭಾ. ಭಾ. ೪೪೦)

ಮೇಲಿನ ವಾಕ್ಯಗಳಲ್ಲಿ ನಾಮರೂಪಗಳ ತೋರಿಕೆಯು ಮಾಯೆಯೆಂದೂ ಅದು ಅವಿದ್ಯೆಯಿಂದ ಕಲ್ಪಿತವಾಗಿರುವದೆಂದೂ ಸ್ಫುಟಪಡಿಸಿ ಹೇಳಿರುತ್ತದೆ. ಮಾಯೆಗೇ ಆವರಣವಿಕ್ಷೇಪಶಕ್ತಿಗಳಿರುವವೆಂಬುವರ ವಾದವು ಈ ಪ್ರಕ್ರಿಯೆಗೆ ವಿರುದ್ಧವಾಗಿರುತ್ತದೆ.

## ಅಂತಃಕರಣ

"ಮತ್ತು ಆತ್ಮನಿಗೆ ಉಪಾಧಿಯಾಗಿರುವ ಆ ಅಂತಃಕರಣವನ್ನು ಮನಸ್ಸು, ಬುದ್ಧಿ, ವಿಜ್ಞಾನ, ಚಿತ್ತ– ಎಂದು ಅನೇಕಪ್ರಕಾರವಾಗಿ ಅಲ್ಲಲ್ಲಿ ಕರೆದಿರುತ್ತದೆ. ಕೆಲವು ಕಡೆಗಳಲ್ಲಿ ವೃತ್ತಿಗಳನ್ನು ವಿಂಗಡಿಸಿ, ಸಂಶಯವೇ ಮುಂತಾದ ವೃತ್ತಿಗಳುಳ್ಳದ್ದನ್ನು ಮನಸ್ಸು, ನಿಶ್ಚಯಾದಿವೃತ್ತಿಗಳುಳ್ಳದ್ದನ್ನು ಬುದ್ಧಿ– ಎಂದು ಹೇಳಿದೆ." —ಸೂ. ಭಾ. ೨-೩-೩೨ (ಭಾ. ಭಾ. ೧೪೩)

## ಜೀವ

(೧) "ತದ್ಗುಣಗಳು ಎಂದರೆ ಆ ಬುದ್ಧಿಯ ಗುಣಗಳು; ಯಾವ ಆತ್ಮನು ಸಂಸಾರಿಯಾಗುವದಕ್ಕೆ ಇಚ್ಛೆ, ದ್ವೇಷ, ಸುಖ, ದುಃಖ- ಮುಂತಾದ ತದ್ಗುಣಗಳ ಸಾರವು. ಎಂದರೆ ಪ್ರಧಾನವಾಗಿರುವವೋ, ಅವನು ತದ್ಗುಣಸಾರನು ; ಅವನ ಭಾವವು ತದ್ಗುಣಸಾರತ್ವವು. ಬುದ್ಧಿಯ ಗುಣಗಳಿಲ್ಲದೆ ಬರಿಯ ಆತ್ಮನಿಗೆ ಸಂಸಾರಿತ್ವವಿಲ್ಲವಷ್ಟೆ. ಬುದ್ಧಿ ಎಂಬ ಉಪಾಧಿಯ ಧರ್ಮಗಳನ್ನು ಅಧ್ಯಾಸಮಾಡುವದರಿಂದಲೇ ಅಲ್ಲವೆ, ಅಕರ್ತೃವೂ ಅಭೋಕ್ತೃವೂ ಅಸಂಸಾರಿಯೂ ನಿತ್ಯಮುಕ್ತನೂ ಆಗಿರುವ ಆತ್ಮನಿಗೆ ಕರ್ತೃತ್ವಭೋಕ್ತೃತ್ವಾದಿ ರೂಪವಾದ ಸಂಸಾರವುಂಟಾಗಿರುವದು ?"

—ಸೂ. ಭಾ. ೨–೩–೨೯ (ಭಾ. ಭಾ. ೧೩೮)

(೨) "ಈ ಆತ್ಮನು (ಹೀಗೆ) ಚೈತನ್ಯರೂಪನೂ ನಿರ್ವಿಶೇಷನೂ ವಾಙ್ಮನಗಳನ್ನು ಮೀರಿರುವನೂ ಆಗಿದ್ದು ಇನ್ನೊಂದು (ಸ್ವರೂಪ)ವನ್ನು ಅಲ್ಲಗಳೆದೇ ತಿಳಿಸತಕ್ಕವನಾಗಿರುವನಷ್ಟೆ. ಆದ್ದರಿಂದಲೇ ಇವನಿಗೆ ಉಪಾಧಿನಿಮಿತ್ತವಾಗಿ ಅಪರಮಾರ್ಥವಾದ ಸವಿಶೇಷ(ರೂಪವಾಗಿರುವದೆಂಬ) ಅಭಿಪ್ರಾಯದಿಂದ ನೀರಿನಲ್ಲಿರುವ ಸೂರ್ಯಪ್ರತಿಬಿಂಬವೇ ಮುಂತಾದವುಗಳಂತೆ ಎಂಬ ಉಪಮಾನವನ್ನು....ಮೋಕ್ಷಶಾಸ್ತ್ರಗಳಲ್ಲಿ ಹೇಳಿರುತ್ತದೆ." —ಸೂ.ಭಾ. ೩-೨-೧೮.

ಮೇಲಿನ ಉದಾಹರಣೆಗಳಿಂದ ಅಂತಃಕರಣಜೀವಸ್ವರೂಪಗಳನ್ನು ಭಾಷ್ಯದಲ್ಲಿ ಹೇಗೆ ವರ್ಣಿಸಿದೆ ಎಂಬುದನ್ನು ತಿಳಿಯಬಹುದು

---

15–1–98 1000 ಶ್ರೀನಿಧಿ ಪ್ರಿಂಟರ್, ಹೊಳೆನರಸೀಪುರ.

# ಅಧ್ಯಾತ್ಮಪ್ರಕಾಶಕಾರ್ಯಾಲಯ

**ಹೊಳೆನರಸೀಪುರ–573 211.**

## ಈ ಕಾರ್ಯಾಲಯದಿಂದ ತಾವು ಯಾವಯಾವ ಲಾಭವನ್ನು ಪಡೆಯಬಹುದು ?

೧. ಕಾರ್ಯಾಲಯದಲ್ಲಿ ನಡೆಯುತ್ತಿರುವ ಪೂಜೆ, ಭಜನೆ, ಪುರಾಣಶ್ರವಣ, ಉಪನ್ಯಾಸಗಳು, ಅನುಷ್ಠಾನಗಳು, ವೇದಾಂತಸಪ್ತಾಹ, ವೇದಾಂತಶಿಬಿರ–ಇವುಗಳಲ್ಲಿ ಯಥಾಶಕ್ತಿಯಾಗಿ ಭಾಗವಹಿಸಬಹುದು.

೨. ಇಲ್ಲಿ ಪ್ರಕಟವಾಗುತ್ತಿರುವ ಅಮೂಲ್ಯ ಗ್ರಂಥಗಳನ್ನು ಕೊಂಡು ಓದಿ ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳಬಹುದು.

೩. ಕಾರ್ಯಾಲಯದಲ್ಲಿ ಪ್ರಕಟವಾಗುವ "ಅಧ್ಯಾತ್ಮಪ್ರಕಾಶ" ಮಾಸಪತ್ರಿಕೆಗೆ ಚಂದಾದಾರರಾಗಿ ತಿಂಗಳುತಿಂಗಳೂ ಬಗೆಬಗೆಯ ಅಧ್ಯಾತ್ಮಬೋಧೆಯನ್ನು ಪಡೆಯಬಹುದು.

೪. ಕಾರ್ಯಾಲಯದಲ್ಲಿ ಬರೆದು ಸಿದ್ಧವಾಗಿರುವ ಪುಸ್ತಕಗಳ ಪ್ರಕಟನೆಗೆ ಯಥಾಶಕ್ತಿಯಾಗಿ ಧನಸಹಾಯವನ್ನು ಮಾಡಿ ಮಹಾಶ್ರಯದಾತರು, ಆಶ್ರಯದಾತರು, ಅಥವಾ ಮಹಾಪೋಷಕರು– ಎನಿಸಿ ಪುಣ್ಯವನ್ನೂ, ಕೀರ್ತಿಯನ್ನೂ ಸಂಪಾದಿಸಿಕೊಳ್ಳಬಹುದು ; ಈ ಪ್ರಕಟನೆಗಳ ಪುಸ್ತಕಭಂಡಾರವನ್ನು ಏರ್ಪಡಿಸಿಕೊಳ್ಳಬಹುದು.

೫. ಕಾರ್ಯಾಲಯದಲ್ಲಿರುವ ವಿದ್ಯಾಲಯಕ್ಕೆ ಯೋಗ್ಯರಾದ ವಿದ್ಯಾರ್ಥಿಗಳನ್ನು ಕಳುಹಿಸಿ ಅಧ್ಯಾತ್ಮವಿದ್ಯೆಯಲ್ಲಿ ಪ್ರವೀಣರನ್ನಾಗಿ ಮಾಡಿಸಿ ಅವರಿಂದ ನಿಮ್ಮ ಪ್ರಾಂತ್ಯದಲ್ಲಿ ಬ್ರಹ್ಮವಿದ್ಯಾಪ್ರಚಾರವನ್ನು ಮಾಡಿಸಬಹುದು.

೬ ಕಾರ್ಯಾಲಯದ ಕಟ್ಟಡಕ್ಕೂ, ವಿದ್ಯಾನಿಲಯ, ಪೂಜಾಮಂದಿರ, ಗುರುಮಂದಿರ, ಪುಸ್ತಕಭಂಡಾರ– ಇವಕ್ಕೂ ಯಥೋಚಿತವಾಗಿ ಸಹಾಯವನ್ನು ಮಾಡಿ ಪುಣ್ಯವನ್ನು ಗಳಿಸಿಕೊಳ್ಳಬಹುದು.

ಹೆಚ್ಚಿನ ವಿಷಯಕ್ಕೆ ಕಾರ್ಯದರ್ಶಿಗಳಿಗೆ ಬರೆಯಿರಿ.

ವೇದಾಂತದ ಕೆಚ್ಚನ್ನು ಬಿಚ್ಚಿ ತೋರಿಸುವ

# ಪುಟ್ಟಪುಸ್ತಕಗಳು

೧. ವೇದಾಂತಬಾಲಬೋಧೆ (ಎರಡನೆಯ ಸಂಸ್ಕರಣ) :– ಆತ್ಮಸ್ವರೂಪವನ್ನು ಅವಸ್ಥಾತ್ರಯಪರೀಕ್ಷೆಯಿಂದ ಕಂಡುಕೊಳ್ಳುವ ಬಗೆಯನ್ನು ಪ್ರಶ್ನೋತ್ತರಗಳಿಂದ ತಿಳಿಸುವ ಗ್ರಂಥ.

೨. ವೇದಾಂತಪ್ರವೇಶಿಕೆ :– ಸಾಧನಪಂಚರತ್ನದ ವಿವರಣೆ. ವೇದಾಂತಬಾಲಬೋಧೆಯನ್ನು ಓದಿದಮೇಲೆ ಓದುವವರಿಗೆ ವೇದಾಂತಮನನದ ಸವಿಯನ್ನು ಹೆಚ್ಚಿಸುವ ಗ್ರಂಥ.

೩. ಶಂಕರಮಹಾಮನನ (ಎರಡನೆಯ ಸಂಸ್ಕರಣ) :– ವೇದಾಂತಪ್ರಕ್ರಿಯೆಗಳ ಗುಟ್ಟನ್ನು ಶ್ರೀ ಶಂಕರಭಗವತ್ಪಾದರವರ ಅಮೃತವಾಣಿಯ ಆಧಾರದಿಂದಲೇ ಹೊರಗೆಡುವುತ್ತದೆ. ಹೊಸದಾಗಿ ಓದುವವರಿಗೆ ವೇದಾಂತದ ಒಟ್ಟು ಉಪದೇಶವೂ ಆಗಲೆ ಓದಿರುವವರಿಗೆ ಅನುಸಂಧಾನಕ್ಕೆ ತಕ್ಕ ವಿಷಯಸಂಗ್ರಹವೂ ಇಲ್ಲಿ ದೊರಕುವದು.

೪. ಆತ್ಮಬೋಧ (ಎರಡನೆಯ ಸಂಸ್ಕರಣ) ಆತ್ಮನು ನಿತ್ಯಶುದ್ಧಬುದ್ಧಮುಕ್ತಸ್ವಭಾವನೆಂಬುದನ್ನು ಬಗೆಬಗೆಯ ಉಪಮಾನಗಳಿಂದ ಸರಳಭಾಷೆಯಲ್ಲಿ ವಿವರಿಸಿದೆ. ಮೂಲಶ್ಲೋಕಗಳು, ಭಾವಾರ್ಥ, ಟಿಪ್ಪಣಿ, ಪರಿಶಿಷ್ಟ, ಶ್ಲೋಕಾನುಕ್ರಮಣಿಕೆ, ಪ್ರಮಾಣಸೂಚಿ– ಇಷ್ಟೂ ಇವೆ.


ಅಧ್ಯಾತ್ಮವಿಚಾರಕ್ಕೆ ಬೇಕಾಗುವ ಇಂಥ ಹಲವು ಪುಸ್ತಕಗಳು "ಅಧ್ಯಾತ್ಮಪ್ರಕಾಶ" ಮಾಸಪತ್ರಿಕೆಯ ಚಂದಾದಾರರಿಗೆ ತಗ್ಗಿಸಿದ ಬೆಲೆಗೆ ದೊರೆಯುವವು.
ಪತ್ರಿಕೆಯು ಪ್ರತಿವರ್ಷ ಸೆಪ್ಟೆಂಬರ್‌ನಿಂದ ಪ್ರಾರಂಭವಾಗುವದು.

ಪುಸ್ತಕಗಳ ಬೆಲೆಪಟ್ಟಿಗೆ ಬರೆದುಕೊಳ್ಳಿರಿ.

ಗ್ರಂಥಗಳಿಗೆಲ್ಲ ಅಂಚೆಯಹಾಸಲು ಬೇರೆ.

ಅಧ್ಯಾತ್ಮಪ್ರಕಾಶಕಾರ್ಯಾಲಯ, ಹೊಳೆನರಸೀಪುರ.



ಶ್ರೀನಿಧಿ ಪ್ರಿಂಟರ್ಸ್, ಹೊಳೆನರಸೀಪುರ.